# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (133)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೆ.ಎಂ.ಸಿ. ಕಾಯ್ದೆ 1976 Act No.3 of 2011 ರಂತೆ Chapter IIIA (Area Sabhas and Ward Committees) ಎಂಬುದಾಗಿ ಕಲಂ 13ಎ ರಿಂದ 13ಎಲ್ ವರೆವಿಗೂ ವಾರ್ಡ್ ಸಮಿತಿ ರಚನೆ ಮತ್ತು ಕಾರ್ಯವಿಧಾನಗಳ ಬಗ್ಗೆ ಕಾಯ್ದೆಯು ಜಾರಿಯಾಗಿರುತ್ತದೆ. ಈ ಕಾಯ್ದೆಯ ಕಲಂ 13 ಹೆಚ್ ರ ಪ್ರಕಾರ ಹಾಗೂ ನ್ಯಾಯಾಲಯದ ನಿರ್ದೇಶನದನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಮಿತಿಗಳನ್ನು ರಚನೆ ಮಾಡಲಾಗಿದೆ. ಈ ಕಾಯ್ದೆಯಡಿಯಲ್ಲಿ ವಾರ್ಡ್ ಸಮಿತಿ ಸಭೆಗಳನ್ನು ನಡೆಸುವ ವಿಧಾನ / ವಾರ್ಡ್ ಸಮಿತಿಯ ಕಾರ್ಯಭಾರಗಳು ಇತ್ಯಾದಿಗಳನ್ನೊಳಗೊಂಡಂತೆ 13ಕ್ಕೆ ಅನ್ವಯ ರೂಲ್ಸ್‌ಗಳನ್ನು ರಚನೆ ಮಾಡಬೇಕಾಗಿರುತ್ತದೆ. ಕೆಲವು ಸ್ವಯಂ ಸೇವಾ ಸಂಘಗಳು, ನಾಗರೀಕ ಸಮಿತಿಗಳು ಹಾಗೂ Residents Welfare Association ಗಳೊಂದಿಗೆ ಚರ್ಚಿಸಿ, ಕೆ.ಎಂ.ಸಿ. ಕಾಯ್ದೆಗೆ ವಿರುದ್ಧವಾಗಿಲ್ಲದ ಸಲಹೆಗಳನ್ನು ಪರಿಗಣಿಸಿ, ಕರಡು (Rules) ನಿಯಮಾವಳಿಗಳನ್ನು ತಯಾರಿಸಿ, ದಿನಂಕ:22-02-2013 ರಂದು ಪಾಲಿಕೆ ಸಭೆ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಆ ನಂತರ ಬೈಲಾ ಮತ್ತು Rules ಗಳ ಬದ್ಧತೆ ಬಗ್ಗೆ ವಿವರಿಸಿ, ದಿನಾಂಕ:20-03-2013 ರಂದು ಪರಿಷ್ಕೃತ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ಕೆ.ಎಂ.ಸಿ. ಕಾಯ್ದೆ ಕಲಂ 423ರ ಅಡಿಯಲ್ಲಿ ಬೈಲಾಗಳನ್ನು ಮಾಡುವ ಅಧಿಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಇರುತ್ತದೆ. ಕೆ.ಎಂ.ಸಿ. ಕಾಯ್ದೆ ಕಲಂ 421ರ ಪ್ರಕಾರ ನಿಯಮಗಳು ರೂಪಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಅದರಂತೆ ದಿನಾಂಕ:27-08-2013 ರಂದು ಸರ್ಕಾರವೇ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕರಡು ನಿಯಮಗಳನ್ನು ರೂಪಿಸಿ ಸಾರ್ವಜನಿಕರಿಂದ ಆಕ್ಷೇಪಣೆ / ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಕರಡು ನಿಯಮಗಳಿಗೆ ಸಲಹೆ ಸೂಚನೆಗಳೊಂದಿಗೆ ತೀರ್ಮಾನ ತೆಗೆದುಕೊಳ್ಳಲು ನಗರ ಪಾಲಿಕೆ ಸಭೆಯ ಮುಂದೆ ಮುಂದುವರೆದ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ದಿನಾಂಕ:28-09-2013 ರಂದು ಪಾಲಿಕೆ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಸರ್ಕಾರ ರಚಿಸಿರುವ ಕರಡು Rules ಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿ, ಎಲ್ಲಾ ಸದಸ್ಯರಿಗೂ ಒದಗಿಸಿ, ತದನಂತರ ಸಭೆಗೆ ಮರು ಮಂಡಿಸುವುದೆಂದು ತೀರ್ಮಾನಿಸಲಾಗಿದೆ. ಅದರಂತೆ ಸರ್ಕಾರವು ಸಿದ್ಧಪಡಿಸಿರುವ ಕರಡು Rules ಅನ್ನು ಕನ್ನಡದಲ್ಲಿ ತರ್ಜುಮೆ ಮಾಡಿದ್ದು, ವಿವರಗಳ ಕೆಳಕಂಡಂತಿರುತ್ತದೆ.

### *ಕರಡು ನಿಯಮಾವಳಿಗಳು*

01. ಈ ನಿಯಮಾಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ವಾರ್ಡ್ ಸಮಿತಿ) ನಿಯಮ 2013 ಎಂದು ಕರೆಯಬಹುದು

02. ಪರಿಭಾಷೆಗಳು ಈ ನಿಯಮಗಳಲ್ಲಿ, ಸಂಧರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

(ಅ) "ಕಾಯ್ದೆ" ಎಂದರೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 (ಕರ್ನಾಟಕ ಕಾಯ್ದೆ14, 1977);

(ಆ) "ಸ್ಪಷ್ಟ ದಿವಸಗಳು" ಎಂದರೆ ಭಾನುವಾರ ಮತ್ತು ರಜಾ ದಿನಗಳು ಸೇರಿ.

(ಇ) "ಸದಸ್ಯ" ಎಂದರೆ ವಾರ್ಡ್ ಸಮಿತಿ ಸದಸ್ಯ

(ಈ) "ಕಲಂ" (Section) ಎಂದರೆ ಕಾಯ್ದೆಯ ಕಲಂ

(ಉ) "ಕಾರ್ಯದರ್ಶಿ" ಎಂದರೆ ಕಲಂ 13ಹೆಚ್ (4) ಕಾಯ್ದೆ ಅನ್ವಯ ಆಯುಕ್ತರವರಿಂದ ನಿಯೋಜಿಸಲ್ಪಟ್ಟ ಅಧಿಕೃತ ಅಧಿಕಾರಿ.

..........................2

## 03. ವಾರ್ಡ್ ಸಮಿತಿಯ ಕಲಾಪಗಳ ಕಾರ್ಯವಿಧಾನ:

(1) ಅಧ್ಯಕ್ಷರು ಸಭೆಯ ದಿನಾಂಕ ಮತ್ತು ಸಮಯವನ್ನು ಗೊತ್ತುಪಡಿಸಬಹುದು. ಆದರೂ ವಾರ್ಡ್ ಸಮಿತಿಯ ಸಭೆಯನ್ನು ಪಾಲಿಕೆಯ ಸಭೆಯ ದಿನದಂದು ಮತ್ತು ವಾರ್ಡ್‌ನ ಸದಸ್ಯರು ಸದಸ್ಯರಾಗಿರುವ ಸ್ಥಾಯಿ ಸಮಿತಿಯ ಸಭೆಯ ದಿನದಂದು ನಿಗಧಿಪಡಿಸಬಾರದು.

(2) ಸಭೆಯಲ್ಲಿ ಮಂಡಿಸುವಂತಹ ವಿಷಯಗಳ ಪಟ್ಟಿಯನ್ನೊಳಗೊಂಡಂತೆ ಏಳು ಸ್ಪಷ್ಟ ದಿನಗಳ ಮುಂಗಡವಾಗಿ ತಿಳಿವಳಿಕೆಯನ್ನು ಸಮಿತಿಯ ಎಲ್ಲಾ ಸದಸ್ಯರಿಗೂ ಜಾರಿ ಮಾಡದ ಹೊರತು ಸಭೆಯನ್ನು ನಡೆಸುವಂತಿಲ್ಲ. ಆದರೂ ಸಮಿತಿಯ ಎಲ್ಲಾ ಸದಸ್ಯರಿಗೂ ಸೂಕ್ತ ತಿಳಿವಳಿಕೆ ನೀಡುವುದರೊಂದಿಗೆ ತುರ್ತು ಸಂಧರ್ಭಗಳಲ್ಲಿ 48 ಗಂಟೆಯೊಳಗಾಗಿ ಸಭೆಯನ್ನು ಕರೆಯಬಹುದು.

(3) ವಾರ್ಡ್ ಸಮಿತಿ ಸಭೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ವಾರ್ಡ್ ಕಛೇರಿ ಆವರಣದಲ್ಲಿ ಅಥವಾ ಸಂಬಂಧಪಟ್ಟ ವಾರ್ಡ್ ಕಛೇರಿಯ ಸಮೀಪದಲ್ಲಿ ನಡೆಸಬೇಕು.

(4) ಪ್ರತಿ ಸಭೆಯ ತಿಳಿವಳಿಕೆಯನ್ನು ಸಮಿತಿಯ ಕಾರ್ಯದರ್ಶಿಯು ಜಾರಿ ಮಾಡತಕ್ಕದ್ದು.

## 04. ವಾರ್ಡ್ ಸಮಿತಿ ಸಭೆಯ ಕಾರ್ಯಸೂಚಿಯನ್ನು ಸಿದ್ಧಪಡಿಸುವುದು:

(1) ಅಧ್ಯಕ್ಷರು ಸಭೆಯ ದಿನಾಂಕ ಮತ್ತು ಸಮಯವನ್ನು ನಿರ್ಧರಿಸುತ್ತಿದ್ದಂತೆ ಕಾರ್ಯದರ್ಶಿಯವರು ಅಥವಾ ಆಯುಕ್ತರವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಯು ಅಧ್ಯಕ್ಷರ ಸಲಹೆಯಂತೆ ಸಭೆಯ ಕಾರ್ಯಸೂಚಿಯನ್ನು ಸಿದ್ಧಪಡಿಸತಕ್ಕದ್ದು.

(2) ಕಾರ್ಯದರ್ಶಿಯವರು ಅಥವಾ ಆಯುಕ್ತರವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಯು ಆಯಾ ವಾರ್ಡ್ ವ್ಯವಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಭೆಯ ವಾರ್ಡ್ ಸಮಿತಿ ಸಭೆಯ ತಿಳಿವಳಿಕೆ ಪತ್ರಗಳನ್ನು ಜಾರಿ ಮಾಡತಕ್ಕದ್ದು.

(3) ವಾರ್ಡ್ ಸಮಿತಿಯ ಎಲ್ಲ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರಬೇಕು.

(4) ಸಭೆಯ ಮುಂದೆ ಇತ್ಯರ್ಥಕ್ಕಾಗಿ ಬರುವ ಯಾವುದೇ ಪ್ರಶ್ನೆಗೆ ಸಂಬಂಧಿಸಿದಂತೆ ಯಾವುದೇ ಸದಸ್ಯನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಧನರೂಪದ ಆಸಕ್ತಿಯನ್ನು ಹೊಂದಿದ್ದರೆ ಅಂತಹ ಸದಸ್ಯನು ಆ ವಿಷಯದ ಚರ್ಚೆಯಲ್ಲಿ ಪಾಲ್ಗೊಳ್ಳುವಂತಿಲ್ಲ.

(5) ಆಯುಕ್ತರು ಈ ಕೆಳಗಿನ ಮಾಹಿತಿಗಳನ್ನು ವಾರ್ಡ್ ಸಮಿತಿಯ ಕಾರ್ಯದರ್ಶಿಗೆ ದೊರಕಿಸಿ ಕೊಡಬೇಕು;

(ಅ) ಸ್ಥಾಯಿ ಸಮಿತಿಯ ನಿರ್ಣಯಗಳು;

(ಆ) ಕಾರ್ಪೊರೇಷನ್ ಕೌನ್ಸಿಲ್ ಸಭೆಯ ತೀರ್ಮಾನ/ ನಿರ್ಣಯಗಳು;

(ಇ) ಕಾರ್ಪೊರೇಷನ್ ಅಥವಾ ಸ್ಥಾಯಿ ಸಮಿತಿಗಳು ಮಾಡಿರುವ ವಾರ್ಡ್‌ವಾರು ಇರತಕ್ಕಂತೆ ಬಡ್ಜೆಟ್ ಹಂಚಿಕೆ; ಇದ್ದರೆ.

(ಈ) ವಾರ್ಡ್ ನಕ್ಷೆಗಳ ನಕಲು; ಮತ್ತು

(ಉ) ಕಾರ್ಪೊರೇಷನ್ ಆಸ್ತಿಗಳ ವಾರ್ಡ್‌ವಾರು ವಿವರಗಳು;

## 05. <u>ವಾರ್ಡ್ ಸಮಿತಿಯ ಕಾರ್ಯಭಾರಗಳು</u>:

01. ವಾರ್ಡ್ ಸಮಿತಿಯ ಪ್ರತಿ ಸದಸ್ಯನಿಗೂ ಅವರವರ ಅನುಭವ ಮತ್ತು ಆಸಕ್ತಿಗನುಗುಣವಾಗಿ ಘನತ್ಯಾಜ್ಯ ನಿರ್ವಹಣೆ ರಸ್ತೆ ಮತ್ತು ಚರಂಡಿಗಳು, ಕೊಳಚೆ ಪ್ರದೇಶಗಳ ಉನ್ನತೀಕರಣ ಬಡತನ ನಿರ್ಮೂಲನ, ಪರಿಸರ ಮಾಲಿನ್ಯ ರಕ್ಷಣೆ ಇತ್ಯಾದಿ ಕಾರ್ಯಭಾರಗಳ ನಿರ್ವಹಣೆವಹಿಸತಕ್ಕದ್ದು.

02. ಮಾನವ ಅಭಿವೃದ್ಧಿ ಮತ್ತು ಸಮಾಜದ ಏಳಿಗೆಯ ಸಾಧನೆಯನ್ನು ವಾರ್ಡ್ ಮಟ್ಟದ ಅಭಿವೃದ್ಧಿ ಪದ್ಧತಿಯ ಪ್ರಕಾರ ಐದು ವರ್ಷಗಳ ಅವಧಿಗೆ Ward Vision Plan ತಯಾರಿಸಲು ವಾರ್ಡ್ ಕಮಿಟಿಗಳಿಗೆ ನಿರ್ದೇಶಿಸುವುದು, ಗುರಿ ಸಾಧನೆಯನ್ನು ನಿಗದಿಪಡಿಸುವುದು ಮತ್ತು ನಿರ್ವಹಣೆಯ ಸೂಚಕಗಳ ಆಧಾರದ ಮೇಲೆ ಅಭಿವೃದ್ಧಿ ಫಲಿತಾಂಶ ಸೂಚಕಗಳನ್ನು ಅಳತೆ ಮಾಡುವುದು, ಎಚ್ಚರಿಕೆ ವಹಿಸುವುದು ಮತ್ತು ಗುರಿಸಾಧನೆ ನಿಗಧಿಪಡಿಸಲು ಹಾಗೂ ನಗರ ಪಾಲಿಕೆ ಸಾಧನೆಯ ವಿಮರ್ಶೆಗಾಗಿ ಏರಿಯಾ ಸಭಾಗಳನ್ನು ತೊಡಗಿಸಿಕೊಳ್ಳುವುದು.

............................3

03. ಕಸವನ್ನು ರಸ್ತೆ ಬದಿಯಲ್ಲಿ ಅಥವಾ ಖಾಲಿ ಜಾಗಗಳು ಬಿಸಾಡಿದ್ದು ಆ ಕಸವನ್ನು ತೆಗೆಯದಿದ್ದರೆ, ನಾಗರೀಕರು ಅಂತಹ ವಿಚಾರವನ್ನು ಚುನಾಯಿತ ಕೌನ್ಸಿಲರ್ ಅಥವಾ ವಾರ್ಡ್ ಸಮಿತಿ ಯರಾದರು ಸದಸ್ಯರ ಗಮನಕ್ಕೆ ತರುವುದು. ಇದರಿಂದಲೂ ಸ್ಥಿತಿ ಸುಧಾರಣೆಗೊಂಡಿಲ್ಲದಿದ್ದರೆ ಅಂತಹ ನಾಗರೀಕರು ಪೂರ್ಣ ವಿವರಗಳೊಂದಿಗೆ ಚುನಾಯಿತ ಪ್ರತಿನಿಧಿಯ ಹಾಗೂ ವಾರ್ಡ್ ಸಮಿತಿ ಸದಸ್ಯರು ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ದೂರನ್ನು ದಾಖಲಿಸುವುದು.

04. ಕಲಂ 13ಐ ರಲ್ಲಿ ನಿರ್ಧಿಷ್ಟಪಡಿಸಿರುವ ಇತರೆ ಕಾರ್ಯಗಳನ್ನು ವಾರ್ಡ್ ಸಮಿತಿಯು ನಿರ್ವಹಿಸುವುದು.

## 06. ಕಾರ್ಯದರ್ಶಿಯ ಕಾರ್ಯಗಳು:-

ಆಯುಕ್ತರ ನಿಯಂತ್ರಣಕ್ಕೆ ಒಳಪಟ್ಟು ಕಾರ್ಯದರ್ಶಿಯವರು ಕಾರ್ಯಗಳನ್ನು ನಿರ್ವಹಿಸಬೇಕು;

(1) ಚುನಾಯಿತ ಕೌನ್ಸಿಲರ್ ಇಲ್ಲದಿರುವ ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರ ಕಾರ್ಯಭಾರವನ್ನು ನಿರ್ವಹಿಸುವುದು.

(2) ಸಮಿತಿಯ ಸಭೆಯ ಕಲಾಪಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳ ಪಟ್ಟಿಯನ್ನು ವಾರ್ಡ್ ಸಮಿತಿ ಅಧ್ಯಕ್ಷರ ಪರ್ಯಾಲೋಚನೆಯೊಂದಿಗೆ ತಯಾರಿಸುವ ಜವಾಬ್ದಾರಿ ಕಾರ್ಯದರ್ಶಿಯವರು ವಾರ್ಡ್ ಸಭೆಯಲ್ಲಿ ಚರ್ಚಿತವಾಗುವ ಕಾರ್ಯಕ್ರಮ ಪಟ್ಟಿಗೆ ಸಹಿ ಹಾಕುವುದು;

(3) ಕಾರ್ಯದರ್ಶಿರವರು ವಾರ್ಡ್ ಸಮಿತಯ ಎಲ್ಲಾ ಸದಸ್ಯರಿಗೂ ಹಾಗೂ ವಾರ್ಡ್‌ಗೆ ಸಂಬಂದಿಸಿದ ಎಲ್ಲಾ ಅಧಿಕಾರಿಗಳಿಗೂ ಮತ್ತು ವಿಶೇಷ ಆಹ್ವಾನಿತರಿಗೂ ಸಭೆಗೆ ಹಾಜರಾಗುವಂತೆ ಕೋರಿ - ನೋಟಿಸ್‌ನ್ನು ಜಾರಿ ಮಾಡುವುದು.

(4) ವಾರ್ಡ್ ಸಮಿತಿ ಸಭೆಯ ಎಲ್ಲಾ ನಡವಳಿಗಳಲ್ಲಿನ ಕಾಗದ ಪತ್ರಗಳನ್ನು ಮತ್ತು ದಾಖಲೆ ಪ್ರತಿಗಳನ್ನು ತಮ್ಮ ಸುಭರ್ಧಿನಲ್ಲಿಟ್ಟುಕೊಳ್ಳುವುದು.

(5) ಸಮಿತಿಯ ಪ್ರತಿಯೊಂದು ಸಭೆಯಲ್ಲೂ ಹಾಜರಾಗುವ ಮತ್ತು ಕಲಾಪಗಳಲ್ಲಿ ಭಾಗವಹಿಸುವ ಹಕ್ಕುಳ್ಳುವರಾಗಿರುತ್ತಾರೆ. ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ;

(6) ಸಭೆಯಲ್ಲಿ ಎತ್ತುವ ಯಾವುದೇ ಠರಾವು ಅಥವಾ ಯಾವುದೇ ಪ್ರಶ್ನೆಗೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯ ಅಥವಾ ಸ್ಪಷ್ಟೀಕರಣ ನೀಡುವುದು;

(7) ವಾರ್ಡ್ ಸಮಿತಿಯ ಎಲ್ಲ ಠರಾವುಗಳನ್ನೂ ಅನುಷ್ಠಾನಗೊಳಿಸುವುದು;

(8) ಪಾಲಿಕೆ ಸ್ವತ್ತುಗಳನ್ನು ಸಂರಕ್ಷಿಸಲು ಜವಾಬ್ದಾರರಾಗಿರುತ್ತಾರೆ.

## 7. ಲೆಕ್ಕ ಪತ್ರ ಮತ್ತು ಆಡಿಟ್:

ವಾರ್ಡ್ ಸಮಿತಿಯು ನಡೆಸುವ ಸಭೆಗಳ ಮತ್ತು ನಿರ್ವಹಿಸುವ ಕಾರ್ಯಕ್ರಮಗಳ ಬಾಬ್ತು ಎಲ್ಲಾ ಆದಾಯ ವೆಚ್ಚಗಳ ಲೆಕ್ಕಪತ್ರಗಳನ್ನು ಕೆ.ಎಂ.ಸಿ. ಕಾಯ್ದೆ ಕಲಂ 151ರ ಅಡಿಯಲ್ಲಿ ರಚಿತವಾಗಿರುವ ಹಣಕಾಸಿನ ನಿಯಮಗಳಂತೆ ಇರಬೇಕು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾವನೆ ಕುರಿತಂತೆ, ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09-12-2013ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ (5) ವಾರ್ಡ್ ಸಮಿತಿ ಕಾರ್ಯಭಾರಗಳಲ್ಲಿ ಕಸವನ್ನು ರಸ್ತೆ ಬದಿಯಲ್ಲಿ ಅಥವಾ ಖಾಲಿ ಜಾಗಗಳಲ್ಲಿ ಬಿಸಾಡುವ ಕಸವನ್ನು ತೆಗೆಯಲು ನಾಗರೀಕರು ಅಥವಾ ಅಂತಹ ವಿಚಾರವನ್ನು ಚುನಾಯಿತ ಕೌನ್ಸಿಲರ್ ಅಥವಾ ವಾರ್ಡ್ ಸಮಿತಿಯ ಯಾರಾದರೂ ಸದಸ್ಯರ ಗಮನಕ್ಕೆ ತರುವುದೆಂದು, ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವುದೆಂದು, ಕಸವನ್ನು ತೆರವುಗೊಳಿಸುವುದೆಂದು, ಮಾರ್ಪಾಡು ಮಾಡಿ, ದಿನಾಂಕ:09-12-2013ರ ಆಯುಕ್ತರವರ ಪರಿಷ್ಕೃತ ಟಿಪ್ಪಣಿಯನ್ನು ಒಪ್ಪುವುದು".

............................4

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ (5) ವಾರ್ಡ್ ಸಮಿತಿ ಕಾರ್ಯಭಾರಗಳಲ್ಲಿ ಕಸವನ್ನು ರಸ್ತೆ ಬದಿಯಲ್ಲಿ ಅಥವಾ ಖಾಲಿ ಜಾಗಗಳಲ್ಲಿ ಬಿಸಾಡುವ ಕಸವನ್ನು ತೆಗೆಯಲು ನಾಗರೀಕರು ಅಥವಾ ಅಂತಹ ವಿಚಾರವನ್ನು ಚುನಾಯಿತ ಕೌನ್ಸಿಲರ್ ಅಥವಾ ವಾರ್ಡ್ ಸಮಿತಿಯ ಯಾರಾದರೂ ಸದಸ್ಯರ ಗಮನಕ್ಕೆ ತರುವುದೆಂದು, ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವುದೆಂದು, ಕಸವನ್ನು ತೆರವುಗೊಳಿಸುವುದೆಂದು, ಮಾರ್ಪಾಡು ಮಾಡಿ, ದಿನಾಂಕ:09-12-2013ರ ಆಯುಕ್ತರವರ ಪರಿಷ್ಕೃತ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (173)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಸಿ.ಎ.ಜಿ. ವರದಿಯ (Revenue Receipts Education & Health Cess) ಕಂಡಿಕೆಗಳಲ್ಲಿ ಕರ್ನಾಟಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ-1961 ಮತ್ತು ಕರ್ನಾಟಕ ಆರೋಗ್ಯ ಉಪಕರ ಕಾಯಿದೆ-1962 (1976 ತಿದ್ದುಪಡಿ) ಇವುಗಳ ಉಪಬಂಧಗಳಡಿ ಸ್ಥಳೀಯ ಪ್ರಾಧಿಕಾರಿಗಳು ವಸೂಲಿ ಮಾಡುವ ಆಸ್ತಿ ತೆರಿಗೆಯ ಮೇಲೆ ಅನುಕ್ರಮವಾಗಿ ಶೇಕಡ 10 ಮತ್ತು ಶೇಕಡ 15 ಶಿಕ್ಷಣ ಉಪಕರ ಮತ್ತು ಆರೋಗ್ಯ ಉಪಕರ ವಿಧಿಸಲಾಗುವುದು. ಸಂಗ್ರಹಿಸಿದ ಉಪಕರಗಳ ಶೇ.10ನ್ನು ಸಂಗ್ರಹಣಾ ವೆಚ್ಚಗಳಿಗಾಗಿ ಕಡಿತ ಮಾಡಿ ಉಳಿದ ಮೊಬಲಗನ್ನು ಸರ್ಕಾರಿ ಖಾತೆಗೆ ಜಮಾ ಮಾಡಿಲ್ಲವೆಂದು ಆಕ್ಷೇಪಿಸಲಾಗಿದೆ.

ಈ ಬಗ್ಗೆ 2002-03 ಮತ್ತು 2003-04ರಲ್ಲಿ ಬಿ.ಎಂ.ಪಿಯಿಂದ ವಸೂಲಾಗಿರುವ ಶಿಕ್ಷಣ ಕರ ರೂ.38,92,73,000-00 ಮತ್ತು ಈಗ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿಸಲಾಗಿರುವ 7 ಸಿ.ಎಂ.ಸಿ. ಮತ್ತು 1 ಟಿ.ಎಂ.ಸಿ.ಗಳಿಂದ ವಸೂಲಾಗಿರುವ ಶಿಕ್ಷಣ ಕರ ರೂ.1,02,82,539-00. ಒಟ್ಟು ರೂ.39,95,55,539-00. ಇದರಲ್ಲಿ 7 ಸಿ.ಎಂ.ಸಿ. ಮತ್ತು 1 ಟಿ.ಎಂ.ಸಿ.ಗಳಿಂದ ಒಟ್ಟು ರೂ.26,99,838-00 ಗಳನ್ನು ಸರ್ಕಾರಕ್ಕೆ ಪಾವತಿಸಲಾಗಿದೆ. ಬಿ.ಎಂ.ಪಿ.ಯ ಶಿಕ್ಷಣ ಕರ ಪಾವತಿಗೆ ಸಂಬಂಧಿಸಿದಂತೆ, ಈಗಾಗಲೇ ಕೆ.ಎಂ.ಸಿ. ಕಾಯ್ದೆ 1976ರ ಸೆಕ್ಷನ್ 58ರಂತೆ ನಿಗಮದ ನಿರ್ಬಂಧಕ ಪ್ರಕಾರ್ಯಗಳು 58(14)ರಲ್ಲಿನಂತೆ ಪ್ರಾಥಮಿಕ ಪೂರ್ವ ಶಿಕ್ಷಣಕ್ಕಾಗಿ ಶಾಲೆಗಳನ್ನು ನಿರ್ವಹಿಸುವುದು ಅಥವಾ ಅವುಗಳಿಗೆ ನೆರವು ನೀಡುವುದು ಪಾಲಿಕೆಯ ಕಾರ್ಯವಾಗಿರುತ್ತದೆ. ಶಿಶು ವಿಹಾರಗಳನ್ನು ಹೊರತುಪಡಿಸಿ ಉಳಿದ ಶಾಲಾ ಕಾಲೇಜುಗಳನ್ನು ನಿರ್ವಹಿಸುವುದು ನಗರ ಪಾಲಿಕೆಯ ಅನಿವಾರ್ಯ ಕರ್ತವ್ಯವಲ್ಲ. ಆದಾಗ್ಯೂ ಉನ್ನತ ವಲಯದ ನಿರ್ಧಾರ ಮತ್ತು ಸರ್ಕಾರದ ಆದೇಶಗಳಿಗೆ ಅನುಗುಣವಾಗಿ ಗುಣಾತ್ಮಕ ಶಿಕ್ಷಣವನ್ನು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ನಗರದ ಮಕ್ಕಳಿಗೆ ನೀಡಲು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 78 ನರ್ಸರಿ ಶಾಲೆಗಳು, 11 ಪ್ರಾಥಮಿಕ ಶಾಲೆಗಳು, 38 ಪ್ರೌಢ ಶಾಲೆಗಳು ಮತ್ತು 11 ಕಿರಿಯ ಕಾಲೇಜುಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳೊಂದಿಗೆ ಕಾರ್ಯನಿರ್ವಹಿಸುತ್ತಿವೆ. 1997-98 ನೇ ಸಾಲಿನಿಂದ ಸರ್ಕಾರದಿಂದ ಯಾವುದೇ ವೇತನ/ನಿರ್ವಹಣಾ ಅನುದಾನ ಬಿಡುಗಡೆಯಾಗಿರುವುದಿಲ್ಲ. 1998-99 ರಿಂದ 2009-10ರ ವರೆಗೆ ಶಿಕ್ಷಣಕ್ಕಾಗಿ ರೂ.231.90 ಕೋಟಿಗಳನ್ನು ಪಾಲಿಕೆಯು ಸ್ವಂತ ಸಂಪನ್ಮೂಲದಿಂದ ಭರಿಸಲಾಗಿದೆ ಎಂದು ಸಿ.ಎ.ಜಿ. ವರದಿಯ ಕಂಡಿಕೆಗೆ ಉತ್ತರವನ್ನು ನೀಡಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಈ ಬಗ್ಗೆ ದಿನಾಂಕ:21-09-2013 ಮತ್ತು 09-12-2013 ರಂದು, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಪಾಲಿಕೆಯ ಅಪರ ಆಯುಕ್ತರು (ಹಣಕಾಸು) ಮತ್ತು ಮುಖ್ಯಲೆಕ್ಕಾಧಿಕಾರಿಗಳು ಹಾಜರಾಗಿದ್ದು, ಸದರಿ ಸಭೆಯಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರು ಶಿಕ್ಷಣ ಸಂಸ್ಥೆಗಳ ಮತ್ತು ಆರೋಗ್ಯ ಘಟಕಗಳ ನಿರ್ವಹಣೆಯನ್ನು ಪಾಲಿಕೆವತಿಯಿಂದಲೇ ನಿರ್ವಹಿಸಲಾಗುತ್ತಿರುವುದರಿಂದ ವಸೂಲಿ ಮಾಡುವ ಉಪಕರ ಮೊತ್ತದಲ್ಲಿ ನಿರ್ವಹಣೆ ಕಷ್ಟವಾಗುತ್ತದೆ. ಅಲ್ಲದೆ ಕೆ.ಎಂ.ಸಿ. ನಿಯಮಾನುಸಾರ ವಸೂಲಿ ಮಾಡುವ ಶಿಕ್ಷಣ/ಆರೋಗ್ಯ ಕರವನ್ನು ಸರ್ಕಾರಕ್ಕೆ ಜಮೆ ಮಾಡಲೇಬೇಕಾಗಿರುವುದು ಕಡ್ಡಾಯವಾಗಿರುತ್ತದೆ.

............................2

ಆದುದರಿಂದ 2003-04 ರಿಂದ 2012-13ರ ವರೆಗೆ ಪಾಲಿಕೆವತಿಯಿಂದ ಆರೋಗ್ಯ/ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ಇತರೆ ಬಾಬ್ತಿಗಾಗಿ ಮಾಡಲಾಗಿರುವ ವೆಚ್ಚದ ವಿವರ ಪಟ್ಟಿಯನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿದೆ. ಹಾಗೂ ಈ ಹಿಂದಿನಿಂದ ಶಿಕ್ಷಣ/ಆರೋಗ್ಯ ಕರ ವಸೂಲಿ ಮಾಡಲಾಗಿರುವ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲು ಸಾಧ್ಯವಾಗುವುದಿಲ್ಲವೆಂದು ವರದಿ ಮಾಡಿ, ಪೂರ್ವಾನ್ವಯಗೊಳ್ಳುವಂತೆ (Retrospective), ಸದರಿ ಮೊತ್ತವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ಆದ್ದರಿಂದ, ಪಾಲಿಕೆಯು ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳು/ಆರೋಗ್ಯ ಘಟಕಗಳನ್ನು ಸಂಬಂಧಪಟ್ಟ ಸರ್ಕಾರದ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆಗಳಿಗೆ ವಹಿಸಿಕೊಟ್ಟಲ್ಲಿ ಪಾಲಿಕೆಯ ಜವಾಬ್ದಾರಿ ಕಡಿಮೆಯಾಗುತ್ತದೆ. ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲಿಕೆಯ ಅಧಿಕಾರಿ/ಸಿಬ್ಬಂದಿಗಳು ಗಮನಹರಿಸಬಹುದಾಗಿರುತ್ತದೆಯೆಂದು ಪ್ರಧಾನ ಕಾರ್ಯದರ್ಶಿಗಳು ಅಭಿಪ್ರಾಯಪಟ್ಟು, ಬಿಬಿಎಂಪಿ ಅಧಿಕಾರಿಗಳಾದ ಅಪರ ಆಯುಕ್ತರು (ಹಣಕಾಸು) ಇವರಿಗೆ ಸಭೆಯಲ್ಲಿ ಚರ್ಚಿಸಿ ಸೂಚನೆ ನೀಡಿರುತ್ತಾರೆ.

ಈ ಮೇಲಿನಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರು ನೀಡಿರುವ ಅಭಿಪ್ರಾಯದಂತೆ ಹಾಗೂ ಪ್ರಸ್ತುತದಲ್ಲಿ ಪಾಲಿಕೆಯ ಹಣಕಾಸಿನ ಸ್ಥಿತಿಯು ಸಂಕಷ್ಟದಲ್ಲಿರುವುದರಿಂದ ಶಿಕ್ಷಣ/ಆರೋಗ್ಯ ಕರ ವಸೂಲಿ ಮಾಡುತ್ತಿರುವ ಮೊತ್ತಕ್ಕಿಂತ ಶೇ.100 ರಷ್ಟು ಹೆಚ್ಚು ಪಾಲಿಕೆವತಿಯಿಂದ ವೆಚ್ಚ ಮಾಡುಲಾಗುತ್ತಿದೆ (ವೆಚ್ಚದ ವಿವರಗಳ ಪಟ್ಟಿ ಲಗತ್ತಿಸಿದೆ). ಈ ಅಧಿಕ ವೆಚ್ಚಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲ. ಆದ್ದರಿಂದ, ಪಾಲಿಕೆಯು ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಘಟಕಗಳನ್ನು ಸರ್ಕಾರದ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆ ಇವುಗಳಿಗೆ ಹಸ್ತಾಂತರಿಸುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-01-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-01-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪಾಲಿಕೆವತಿಯಿಂದ ವಸೂಲಿ ಮಾಡಲಾಗಿರುವ ಶಿಕ್ಷಣ / ಆರೋಗ್ಯ ಕರವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಕೋರಿರುವುದನ್ನು ಅನುಮೋದಿಸಿ, ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಘಟಕಗಳನ್ನು ನಗರ ಪಾಲಿಕೆಯ ವಶದಲ್ಲಿಯೇ ಉಳಿಸಿಕೊಂಡು ನಿರ್ವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪಾಲಿಕೆವತಿಯಿಂದ ವಸೂಲಿ ಮಾಡಲಾಗಿರುವ ಶಿಕ್ಷಣ / ಆರೋಗ್ಯ ಕರವನ್ನು ಮನ್ನಾ ಮಾಡಲು ಸರ್ಕಾರಕ್ಕೆ ಕೋರಿರುವುದನ್ನು ಅನುಮೋದಿಸಿ, ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಘಟಕಗಳನ್ನು ನಗರ ಪಾಲಿಕೆಯ ವಶದಲ್ಲಿಯೇ ಉಳಿಸಿಕೊಂಡು ನಿರ್ವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (178)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್-133, ಹಂಪಿನಗರ ಶ್ರೀ ವಿಶ್ವಕರ್ಮ ದೇವಾಲಯದ ರಸ್ತೆಯಲ್ಲಿ ಭಗವಾನ್ ಶ್ರೀ ವಿಶ್ವಕರ್ಮ ದೇವಾಲಯವಿದ್ದು, ಈ ಸ್ವತ್ತು ಬಿಬಿಎಂಪಿಯ ಜಾಗವಾಗಿದ್ದು, ಶ್ರೀ ಭಗವಾನ್ ವಿಶ್ವಕರ್ಮ ದೇವಾಲಯ, ಸಂಕಷ್ಟಹರ ಗಣಪತಿ, ಶ್ರೀ ಗಾಯತ್ರಿ ಅಮ್ಮನವರ ದೇವಾಲಯಗಳಿದ್ದು, ಈ ದೇವಸ್ಥಾನಕ್ಕೆ ಹೆಚ್ಚಿನ ಸೌಕರ್ಯ್ಯ ಮಾಡಿಕೊಡಬೇಕಾಗಿರುವುದರಿಂದ, ಸದರಿ ಜಾಗವನ್ನು ಶ್ರೀ ಗಾಯತ್ರಿ ವಿಶ್ವಕರ್ಮ ಪಬ್ಲಿಕ್ ಮತ್ತು ಚಾರಿಟಬಲ್ ಟ್ರಸ್ಟ್ (ರಿ) ರವರ ಹೆಸರಿಗೆ ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಕನಿಷ್ಟ ದರ ರೂಪದಲ್ಲಾಗಲೀ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಈ ದೇವಸ್ಥಾನಕ್ಕೆ ನಗರಪಾಲಿಕೆಯ ವತಿಯಿಂದಾಗಲೀ, ಘನ ಸರ್ಕಾರದ ವತಿಯಿಂದಾಗಲೀ ಜಾಗವನ್ನು ಗುತ್ತಿಗೆಗೆ ಅಥವಾ ದೇವಸ್ಥಾನಕ್ಕೆ ವಹಿಸಿಕೊಟ್ಟಿರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲವೆಂದು, ನಾಗರೀಕ ಸೌಲಭ್ಯವಾದ ವಿದ್ಯುತ್ಶಕ್ತಿ ಮತ್ತು ನೀರಿನ ಸೌಲಭ್ಯವನ್ನು ಪಡೆಯಲಾಗಿರುತ್ತದೆಂದು ವರದಿ ಮಾಡಿರುತ್ತಾರೆ.

ಸಹ ಕಂದಾಯ ಅಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು (ಗಾಳಿ ಆಂಜನೇಯ) ರವರು ಜಂಟಿ ತಪಾಸಣೆ ನಡೆಸಿ ವರದಿ ಸಲ್ಲಿಸಿರುತ್ತಾರೆ. ಈ ಕಛೇರಿಯಿಂದ ತಯಾರಿಸಿರುವ ನಕ್ಷೆಯಂತೆ 233.18 ಚ.ಮೀ.ಗಳಾಗಿರುತ್ತದೆಂದು, ಸ್ಥಳ ಮಂಜೂರು ಮಾಡುವ ಬಗ್ಗೆ ಮುಂದಿನ ಆದೇಶ ಕೋರಿರುತ್ತಾರೆ.

ಪ್ರಸ್ತುತ ಗುತ್ತಿಗೆ ಅಥವಾ ಕನಿಷ್ಟ ದರಕ್ಕೆ ಕ್ರಯಕ್ಕೆ ನೀಡಲು ಕೋರಿರುವ ಸ್ವತ್ತಿನ ಅಳತೆ 2509.61 ಚ. ಅಡಿಗಳಾಗಿದ್ದು, ಮಾರುಕಟ್ಟೆ ದರವು ಚದರಡಿ 1ಕ್ಕೆ 3900 ಇದ್ದು, ಸ್ವತ್ತಿನ ಮೌಲ್ಯ (3900x2509.016=97,85,162=00) 97,85,162/-ರೂ.ಗಳಾಗುತ್ತದೆ. ಶೇ.10% ಪರಿಗಣಿಸಿದಲ್ಲಿ, ವಾರ್ಷಿಕ 9.78,516/-ರೂ ಮಾಸಿಕ 81,543/- ರೂ. ಗಳಾಗುತ್ತದೆ.

ಆದರೆ, ದಿನಾಂಕ: 02-06-2003ರ ಸುತ್ತೋಲೆಯ ಕ್ರಮ ಸಂಖ್ಯೆ: VI ರನ್ವಯ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು. ಮೇಲ್ಕಾಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದಲ್ಲ ಎಂದಿದೆ.

ಆದುದರಿಂದ, ಶ್ರೀ ಗಾಯತ್ರಿ ವಿಶ್ವಕರ್ಮ ಪಬ್ಲಿಕ್ ಮತ್ತು ಚಾರಿಟಬಲ್ ಟ್ರಸ್ಟ್ ರವರಿಗೆ ಸಾರ್ವಜನಿಕ ಹರಾಜು ಮೂಲಕ ಗುತ್ತಿಗೆಗೆ ನೀಡುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:13-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಸ್ವತ್ತನ್ನು ಸಾರ್ವಜನಿಕ ಹರಾಜು ಮೂಲಕ ಗುತ್ತಿಗೆ ಆಧಾರದಲ್ಲಿ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-01-2014ರ ನಿರ್ಣಯ.

...........................2

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-01-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-01-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (206)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೆಂಗಳೂರು ನಗರದಲ್ಲಿರುವ ಪ್ರಾಣಿಗಳ ವಧಾಗಾರಗಳ ಹಾಲಿ ಸ್ಥಿತಿಗತಿಗಳ ಬಗ್ಗೆ ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿನ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ಕೋರಿ ಶ್ರೀ.ಬಿ.ಕೃಷ್ಣಭಟ್‌ರವರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆ ಸಂಖ್ಯೆ:5709/1997 (ALT-PIL) ರಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು ಆದೇಶ ನೀಡಿರುತ್ತದೆ.

ನಗರದಲ್ಲಿನ ಪ್ರಾಣಿಗಳ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಸ್ಥಳವನ್ನು ಗುರುತಿಸಲು ಘನ ಸರ್ಕಾರವು ಒಂದು ಅಧಿಕಾರಿಗಳ ತಂಡವನ್ನು ರಚಿಸಿದ್ದು, ಈ ತಂಡವು ಹಲವು ಸ್ಥಳಗಳನ್ನು ಪರಿಶೀಲಿಸಿ ಅಂತಿಮವಾಗಿ ಆನೇಕಲ್ (ತಾ), ಇಗ್ಗಲೂರು ಗ್ರಾಮದಲ್ಲಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ 40.28 ಎಕರೆ ಜಾಗವನ್ನು ವಧಾಗಾರ ಸ್ಥಾಪಿಸಲು ಸೂಕ್ತ ಜಾಗವೆಂದು ತೀರ್ಮಾನಿಸಲಾಗಿತ್ತು.

ಈ ಕಾಮಗಾರಿಗೆ ಅಗತ್ಯ ಯೋಜನಾ ವರದಿ, Environment Impact Assessment (EIA) ಅಧ್ಯಯನ, ಗುತ್ತಿಗೆದಾರರ ನೇಮಕಾತಿಗೆ ಸಂಬಂಧಿಸಿದಂತೆ ಹಾಗೂ ಯೋಜನೆಗೆ ಸಂಬಂಧಿಸಿದ ರೂಪುರೇಷೆಗಳನ್ನು ತಯಾರಿಸಿರುವ ಕೆಲಸವನ್ನು ಮೆ॥ ಐಡೆಕ್ ಸಂಸ್ಥೆಯವರಿಗೆ ವಹಿಸಲಾಗಿತ್ತು. ಮೆ॥ ಐಡೆಕ್ ಸಂಸ್ಥೆಯವರು ಯೋಜನಾ ವರದಿ ಹಾಗೂ ಆರ್.ಎಫ್.ಪಿ. ಗಳನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಅದರಂತೆ, ಈ ಸ್ಥಳದಲ್ಲಿ ಆಧುನಿಕ ಸೌಲಭ್ಯಗಳನ್ನೊಳಗೊಂಡ ಪ್ರಾಣಿಗಳ ವಧಾಗಾರವನ್ನು ವಿನ್ಯಾಸಗೊಳಿಸಿ ನಿರ್ಮಿಸಿ ಹಸ್ತಾಂತರಿಸುವ (ಡಿ.ಬಿ.ಓ.ಟಿ) ಆಧಾರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿ ಪಾಲಿಕೆಯಿಂದ ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನಲ್ಲಿ ಕನ್ಸೊರಿಯಂ ಆಫ್ ಚೆನ್ನೈ ಅಬಟಾಯರ್ ಪ್ರೈ.ಲಿ. ಮತ್ತು ಎಸ್.ಎ.ಜಿ.ಆರ್.ಆರ್. ಇನ್‌ಫ್ರಾ ಲಿಮಿಟೆಡ್ ರವರು ಏಕೈಕ ಅರ್ಹ ಬಿಡ್‌ದಾರರರಾಗಿದ್ದು, ಇವರ ಕನಿಷ್ಟ ಸಂಧಾನಿತ ಟೆಂಡರ್ ಅನ್ನು ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿತ್ತು.

ಘನ ಸರ್ಕಾರವು ಆದೇಶ ಸಂಖ್ಯೆ:ಯುಡಿಡಿ/240/ಎಎನ್‌ವೈ/2007, ದಿನಾಂಕ:21-08-2007 ರಲ್ಲಿ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ.

ಅ) ಈ ಯೋಜನೆಯನ್ನು ಕನ್ಸೊರಿಯಂ ಆಫ್ ಚೆನ್ನೈ ಅಬಟಾಯರ್ ಪ್ರೈವೇಟ್ ಲಿಮಿಟೆಡ್ ಮತ್ತು ಎಸ್.ಎ.ಜಿ.ಆರ್.ಆರ್. ಇನ್‌ಫ್ರಾ ಲಿಮಿಟೆಡ್ ರವರಿಗೆ ಡಿ.ಬಿ.ಓ.ಟಿ ಮತ್ತು ಅನ್ಯುಟಿ ಆಧಾರದಲ್ಲಿ 15 ವರ್ಷಗಳ Concession ಅವಧಿಗೆ ಆನೇಕಲ್ (ತಾ). ಇಗ್ಗಲೂರಿಯನಲ್ಲಿ ಗುರುತಿಸಿರುವ ಜಮೀನಿನಲ್ಲಿ ಸ್ಥಾಪಿಸಲು ಪ್ರತಿ ವರ್ಷ ರೂ.1425.00 ಲಕ್ಷ ಆನ್ಯುಟಿ ಫೀಯನ್ನು ಪಾವತಿಸಲು ಅನುಮೋದನೆ ದೊರೆತಿರುತ್ತದೆ.

ಆ) ಈ ಯೋಜನೆ ಪ್ರಾರಂಭದಲ್ಲಿ ಮೊದಲ ಮತ್ತು ಎರಡನೇ ವರ್ಷದ ಅಂತ್ಯದಲ್ಲಿ ಪ್ರತಿ ವರ್ಷ ಕ್ರಮವಾಗಿ ರೂ.500.00 ಲಕ್ಷಗಳನ್ನು ಆಫ್ ಫ್ರಂಟ್ ಫೀಯನ್ನು ಬಿಡ್ಡುದಾರರಿಗೆ ಪಾವತಿ ಮಾಡಲು ಅನುಮೋದನೆ ದೊರೆತಿರುತ್ತದೆ.

ಇ) ಈ ಯೋಜನೆಗೆ ಬೇಕಾಗಿರುವ ನೀರು ಮತ್ತು ವಿದ್ಯುತ್ ಅನ್ನು ಸರಬರಾಜು ಮಾಡಲು ಒದಗಿಸಬೇಕಾಗಿರುವ ಕೊಳವೆ ಮಾರ್ಗ ಮತ್ತು ವಿದ್ಯುತ್ ತಂತಿ ಇತ್ಯಾದಿಗಳ ವೆಚ್ಚವನ್ನು ಪಾಲಿಕೆಯಿಂದ ಭರಿಸಿ, ಬೆಂಗಳೂರು ನೀರು ಸರಬರಾಜು ನಿಗಮ ಮಂಡಳಿ ಮತ್ತು ಬೆಸ್ಕಾಂ ಸಂಸ್ಥೆಗಳಿಗೆ ಪಾವತಿ ಮಾಡಿ ಕ್ರಮವಹಿಸಬಹುದಾಗಿರುತ್ತದೆ.

..........................2

ಅದರಂತೆ, ಬಿಡ್ಡುದಾರರ ಜೊತೆಯಲ್ಲಿ ಗುತ್ತಿಗೆ ಕರಾರನ್ನು ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಯಿತು. ಈ ಸಮಯದಲ್ಲಿ ಬಿಡ್ಡುದಾರರು ತಾವು ಕೋಟ್ ಮಾಡಿದ ದರಗಳು ಸುಮಾರು 2 ವರ್ಷಗಳ ಹಿಂದಿನದಾಗಿದ್ದು, ಹಾಲಿ ಮಾರುಕಟ್ಟೆಯಲ್ಲಿ ಕಟ್ಟಡ ಸಾಮಗ್ರಿಗಳು ಹಾಗೂ ಯಂತ್ರೋಪಕರಣ ದರಗಳು ತುಂಬಾ ಹೆಚ್ಚಾಗಿದ್ದು, ಒಟ್ಟು ಯೋಜನೆ ವೆಚ್ಚ ಅಧಿಕವಾಗುವುದರಿಂದ ಹಾಲಿ ದರಗಳು ಮತ್ತು ಕೋಟ್ ಮಾಡಿದ ದರಗಳ ವ್ಯತ್ಯಾಸ ಮೊತ್ತವನ್ನು ನೀಡಬೇಕೆಂದು ಕೋರಿರುತ್ತಾರೆ. ಬಿಡ್ಡುದಾರರು ಹಾಲಿ ದರಗಳ ಆಧಾರದಲ್ಲಿ ಒಟ್ಟು ಯೋಜನೆಯ ವೆಚ್ಚವನ್ನು ರೂ.64.2 ಕೋಟಿ ಎಂದು ಅಂದಾಜಿಸಿದ್ದು, ಈ ವೆಚ್ಚವನ್ನು ಪ್ರತಿ ವರ್ಷ ಪಾವತಿ ಮಾಡುವ ಆನ್ಯುಟಿ ಫೀಯನ್ನು ಅನುಮೋದನೆಯಾಗಿರುವ ರೂ.14.24 ಕೋಟಿಗಳಿಂದ ರೂ.22.35 ಕೋಟಿಗಳಿಗೆ ಹೆಚ್ಚಿಸಿ, 13 ವರ್ಷಗಳ ಕನ್ಸೆಷನ್ ಅವಧಿಗೆ ಪಾವತಿ ಮಾಡಲು ಕೋರಲಾಗಿತ್ತು.

ಇಗ್ಗಲೂರಿನಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಿಸಲು ಕ್ಷೇತ್ರದ ಶಾಸಕರಿಂದ ಹಾಗೂ ಸ್ಥಳೀಯರಿಂದ ಬಾರಿ ವಿರೋಧವಿದ್ದು ಹಾಗೂ ನಿರ್ಮಾಣ ಮಾಡುತ್ತಿದ್ದ ಕಾಂಪೌಂಡ್ ಗೋಡೆಯನ್ನು ಸಹ ಕೆಡವಿದ್ದರಿಂದ ಕೆಲಸವನ್ನು ಸ್ಥಗಿತಗೊಳಿಸಲಾಗಿತ್ತು.

ಈ ಮಧ್ಯೆ ಬೆಂಗಳೂರು ನಗರದಲ್ಲಿರುವ ಪ್ರಾಣಿಗಳ ವಧಾಗಾರವನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಕೋರಿ ಶ್ರೀ. ಬಿ.ಕೃಷ್ಣಭಟ್‌ರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆ ಸಂಖ್ಯೆ: 5709/1997 (ALT-PIL) ರಲ್ಲಿ ಗೌರವಾನ್ವಿತ ನ್ಯಾಯಾಲಯವು ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಪ್ರಾಣಿಗಳ ವಧಾಗಾರಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ನೀಡಿದ ಆದೇಶವನ್ನು ಅನುಷ್ಠಾನಕ್ಕೆ ತರುವಲ್ಲಿ ವಿಳಂಬವಾದ್ದರಿಂದ, ನ್ಯಾಯಲಯ ನಿಂದನಾ ಮೊಕದ್ದಮೆಯನ್ನು ದಾವೆ ಸಂಖ್ಯೆ:541/2008 ರಂತೆ ಹೂಡಲಾಗಿತ್ತು.

ಈ ಯೋಜನೆ ಶೀಘ್ರವಾಗಿ ಆಗಬೇಕಾಗಿರುವುದರಿಂದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರು ದಿನಾಂಕ:26-12-2008 ರಂದು ನಡೆಸಿದ ಸಭೆಯಲ್ಲಿ ಬಿಡ್‌ದಾರರಿಗೆ ಮೊದಲನೆಯ ವರ್ಷದ ಅಪ್ರಾಂಟ್ ಫೀ ಅನ್ನು ಮೊದಲೇ ಬ್ಯಾಂಕ್ ಗ್ಯಾರಂಟಿ ಪಡೆದು ಪಾವತಿಸಲು ಸೂಚಿಸಲಾಗಿತ್ತು.

ಕರ್ನಾಟಕ ಉಚ್ಚ ನ್ಯಾಯಾಲಯವು ನ್ಯಾಯಾಲಯ ನಿಂದನಾ ಮೊಕದ್ದಮೆ ಸಂಖ್ಯೆ:541/2008 ರಲ್ಲಿ ಬಿಡ್‌ದಾರರ ಒಪ್ಪಿಗೆ ಪಡೆದು, ಇಗ್ಗಲೂರು ಬದಲಿಗೆ ಕನಕಪುರ ತಾಲ್ಲೂಕು ಹಾರೋಹಳ್ಳಿಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಂಚಿಕೆ ಮಾಡಿರುವ ಪ್ಲಾಟ್ ಸಂಖ್ಯೆ:140 ಹಾಗೂ 141ರ 40 ಎಕರೆ ಜಾಗದಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಿಸಲು ನಿರ್ದೇಶನ ನೀಡಿದೆ.

ಆಧುನಿಕ ಕಸಾಯಿಖಾನೆ ನಿರ್ಮಿಸಲು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅರ್ಜಿ ಸಲ್ಲಿಸಿದ ಮೇರೆಗೆ ಕನಕಪುರ (ತಾ) ಹಾರೋಹಳ್ಳಿ 2ನೇ ಫೇಸ್‌ನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಪ್ಲಾಟ್ ಸಂಖ್ಯೆ:140 ಹಾಗೂ 141 ರಲ್ಲಿ 40 ಎಕರೆ ಜಮೀನಿಗೆ 24.00 ಕೋಟಿ ರೂಪಾಯಿ ನಿಗದಿಪಡಿಸಿ ಹಂಚಿಕೆ ಮಾಡಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 24.00 ಕೋಟಿ ರೂಪಾಯಿ ಹಣವನ್ನು ಪಾವತಿಸಿದ ನಂತರ ಕೆ.ಐ.ಎ.ಡಿ.ಬಿ ಸಂಸ್ಥೆಯವರು ಸದರಿ ಜಾಗವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದಿನಾಂಕ:13-11-2009 ರಂದು ಸ್ವಾಧೀನ ಪತ್ರ ನೀಡಿರುತ್ತಾರೆ. ಈ ವಿಷಯವನ್ನು ನ್ಯಾಯಾಲಯಕ್ಕೆ ತಿಳಿಸಿದ ನಂತರ ಸದರಿ ನ್ಯಾಯಾಲಯವು ನಿಂದನಾ ಮೊಕದ್ದಮೆಯನ್ನು ಕೈ ಬಿಡಲಾಗಿತ್ತು.

ಈ ಮಧ್ಯೆ ಕನಕಪುರ (ತಾ) ಹಾರೋಹಳ್ಳಿಗೆ ಆಧುನಿಕ ಕಸಾಯಿಖಾನೆ ನಿರ್ಮಿಸಲು ಸ್ಥಳ ಬದಲಾವಣೆಯಾಗಿ ಮತ್ತಷ್ಟು ವಿಳಂಬವಾದ್ದರಿಂದ, ಬಿಡ್‌ದಾರರು 22.35 ಕೋಟಿಗಳ ಆನ್ಯುಟಿಯನ್ನು ನೀಡಬೇಕೆಂದು ಕೋರಿರುವ ಮೇರೆಗೆ ಆನ್ಯುಟಿ ಫೀಯನ್ನು ಪರಿಷ್ಕರಿಸಲು ವಿಶೇಷ ಆಯುಕ್ತರು (ಯೋಜನೆ)

ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ, ಸದರಿ ಸಮಿತಿಯು ದಿನಾಂಕ:21-01-2010 ರಂದು ನಡೆದ ಸಭೆಯ ನಡವಳಿಗಳ ಪ್ರಕಾರ ರೂ.21.00 ಕೋಟಿಗಳ ಆನ್ಯುಟಿ ಫೀಯನ್ನು ನಿಗಧಿಪಡಿಸಲಾಗಿತ್ತು. ತದನಂತರ ಮಾನ್ಯ ಆಡಳಿತಗಾರರು ಆನ್ಯುಟಿ ಫೀಯನ್ನು ಹೊರ ಸಲಹೆಗಾರರಿಂದ ಮೌಲೀಕರಿಸಲು ಸೂಚಿಸಿರುವ ಮೇರೆಗೆ ದಿನಾಂಕ:01-03-2010 ರಂದು ಈ ಯೋಜನೆಯ ಸಲಹೆಗಾರರಾದ ಮೆ॥ ಐಡೆಕ್ ಸಂಸ್ಥೆಯವರು ಮೌಲೀಕರಿಸಿ ರೂ.19.80 ಕೋಟಿಗಳ ಆನ್ಯುಟಿ ಫೀಯನ್ನು ನಿಗಧಿಪಡಿಸಿ ವರದಿ ನೀಡಿರುತ್ತಾರೆ. ಸದರಿ ಆನ್ಯುಟಿ ಫೀಗೆ ಬಿಡ್‌ದಾರರಾದ ಮೆ॥ ಚೆನ್ನೈ ಅಬಟಾಯರ್ ಪ್ರೈ. ಲಿ. ರವರು ದಿನಾಂಕ:01-03-2010 ರಂದು ಪತ್ರ ನೀಡಿ ಒಪ್ಪಿಕೊಂಡಿರುತ್ತಾರೆ.

ನಗರದ ಇಗ್ಗಲೂರಿನ ಬದಲಿಗೆ ಕನಕಪುರ (ತಾ) ಹಾರೋಹಳ್ಳಿಯಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡುವುದಾಗಿ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ತಿಳಿಸಿರುವುದರಿಂದ, ನ್ಯಾಯಾಲಯ ನಿಂದನಾ ಮೊಕದ್ದಮೆಯನ್ನು ಕೈಬಿಡಲಾಗಿದೆ, ಆದರೆ ಮೂಲ ದಾವೆಯು ಬಾಕಿ ಇರುತ್ತದೆ. ಆದ್ದರಿಂದಾಗಿ, ಕೂಡಲೇ ಈ ಯೋಜನೆಯನ್ನು ಪ್ರಾರಂಭಿಸಬೇಕಾಗಿದ್ದು, ಈಗಾಗಲೇ ಅನುಮೋದನೆಯಾಗಿರುವ ಆನ್ಯುಟಿ ಮೊತ್ತ ರೂ.14.25 ಕೋಟಿಗೆ ಬದಲಾಗಿ ರೂ.19.80 ಕೋಟಿಗಳಿಗೆ ಅನುಮೋದನೆಯನ್ನು ನೀಡುವ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರು ದಿನಾಂಕ:03-03-2010 ರಂದು ವಿಷಯದ ಸಂಖ್ಯೆ:591/2009-10 ರಲ್ಲಿ ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ಆನ್ಯುಟಿ ಫೀ ನೀಡಲು ಅಧಿಕ ಹಣವನ್ನು ಪಾಲಿಕೆಯ ಆಯವ್ಯಯದಿಂದ ಭರಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕೆಳಕಂಡ ಪ್ರಸ್ತಾವನೆಗಳಿಗೆ ಘನ ಸರ್ಕಾರದ ಅನುಮೋದನೆಯನ್ನು ಕೋರಿ ದಿನಾಂಕ:04-03-2010 ರಂದು ಪತ್ರ ಬರೆಯಲಾಗಿತ್ತು.

1. ಸದರಿ ಯೋಜನೆಯನ್ನು ಕನ್ಸೋರಿಯಂ ಆಫ್ ಚೆನ್ನೈ ಅಬಟಾಯರ್ ಪ್ರೈ. ಲಿ.. ಮತ್ತು ಎಸ್.ಎ.ಜಿ.ಆರ್.ಆರ್. ಇನ್‌ಫ್ರಾ ಲಿಮಿಟೆಡ್ ರವರಿಗೆ ಡಿ.ಬಿ.ಓ.ಟಿ. ಮತ್ತು ಆನ್ಯುಟಿ ಆಧಾರದಲ್ಲಿ 15 ವರ್ಷಗಳ ಕನ್ಸೆಷನ್ ಅವಧಿಗೆ ಆನೇಕಲ್ (ತಾ), ಇಗ್ಗಲೂರು ಬದಲಿಗೆ ಕನಕಪುರ (ತಾ) ಹಾರೋಹಳ್ಳಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 2ನೇ ಫೇಸ್, ಫ್ಲಾಟ್ ಸಂಖ್ಯೆ:140 ಹಾಗೂ 141 ರಲ್ಲಿ ಗುರುತಿಸಿರುವ 40 ಎಕರೆ ಜಮೀನಿನಲ್ಲಿ ಆಧುನಿಕ ಕಸಾಯಿಖಾನೆಯನ್ನು ಸ್ಥಾಪಿಸಲು ಪ್ರತಿ ವರ್ಷ ರೂ.1425.00 ಲಕ್ಷದಿಂದ ಆನ್ಯುಟಿ ಫೀಯನ್ನು ರೂ.1980.00 ಲಕ್ಷಗಳನ್ನು 13 ವರ್ಷಗಳ ಕನ್ಸೆಷನ್ ಅವಧಿಗೆ ಪಾವತಿ ಮಾಡಲು ಅನುಮೋದನೆ.
2. ಈ ಯೋಜನೆಯ ಪ್ರಾರಂಭದಲ್ಲಿ ಮೊದಲನೇ ವರ್ಷದ ಅಂತ್ಯದ ಬದಲು ಪ್ರಾರಂಭದಲ್ಲೇ ರೂ.500.00 ಲಕ್ಷಗಳ ಆಫ್ ಫ್ರಂಟ್ ಫೀಯನ್ನು ಇದೇ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಪಡೆದು ಬಿಡ್‌ದಾರರಿಗೆ ಮುಂಚಿತವಾಗಿ ಪಾವತಿಸಲು ಅನುಮೋದನೆ.
3. ಟೆಂಡರ್ ಸಿಂಧುತ್ವದ ಕಾಲಾವಧಿ ಈಗಾಗಲೇ ಮುಗಿದಿರುವುದರಿಂದ ಬಿಡ್‌ದಾರರ ಕೋರಿಕೆಯಂತೆ 2010ನೇ ಜೂನ್ ತಿಂಗಳವರೆಗೆ ವಿಸ್ತರಿಸಲು ಅನುಮೋದನೆ.

ದಿನಾಂಕ:04-03-2010ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಸ್ತಾವನೆಗೆ ಸರ್ಕಾರವು ಆದೇಶ ಸಂಖ್ಯೆ:ನಅಇ/240/ಎಂಎನ್‌ವೈ/2007. ದಿನಾಂಕ:02-11-2010 ರಂತೆ ಅನುಮೋದನೆ ನೀಡಿರುತ್ತದೆ.

ದಿನಾಂಕ:18-12-2010 ರಂದು ಏರ್‌ಪೋರ್ಟ್ ಆಥಾರಿಟಿ ಆಫ್ ಇಂಡಿಯಾರವರು ಆಧುನಿಕ ಕಸಾಯಿಖಾನೆ ನಿರ್ಮಿಸಲು ನಿರಾಪೇಕ್ಷಣಾ ಪತ್ರ ನೀಡಿರುತ್ತಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಗೆ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಸಿ.ಎಫ್.ಇ (ನಿರಾಪೇಕ್ಷಣೆ ಪತ್ರ) ನೀಡಲು ಬಿಡ್ಡುದಾರರು ಪತ್ರ ವ್ಯವಹಾರ ಮಾಡಿರುತ್ತಾರೆ.

............................4

ಸರ್ಕಾರದ ಆದೇಶ ಸಂಖ್ಯೆ:ನಅಇ/204/ಎಂಎನ್‌ವೈ/2007 ಬೆಂಗಳೂರು ದಿನಾಂಕ:02-11-2010 ರಂತೆ ಮೆ॥ ಕ್ಯಾಪ್ರಿ ಮೀಟ್ ಹೌಸ್ ಪ್ರೈ. ಲಿ. ರವರಿಗೆ ಅಪ್‌ಫ್ರಂಟ್ ಫೀ ನೀಡಬೇಕಾಗಿರುತ್ತದೆ. ಆದರೆ, ಸದರಿ ಪ್ರದೇಶದಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಸ್ಥಳೀಯರ ವಿರೋಧ ಇರುವುದರಿಂದ, ಅಪ್‌ಫ್ರಂಟ್ ಫೀ ರೂ.5.00 ಕೋಟಿ ನೀಡುವ ವಿಷಯಕ್ಕೆ ಸಂಬಂಧಪಟ್ಟಂತೆ ಬಿಡ್ಡುದಾರರಾದ ಮೆ॥ ಕ್ಯಾಪ್ರಿ ಮೀಟ್ ಹೌಸ್ ಪ್ರೈ. ಲಿ. ರವರಿಂದ ಸದರಿ ಜಾಗದಲ್ಲಿ ತಾತ್ಕಾಲಿಕ ಕಾಂಪೌಂಡ್ ನಿರ್ಮಿಸಿ ಮೂಲ ಕಟ್ಟಡದ ಕಾಮಗಾರಿ ಪ್ರಾರಂಭಿಸಿದ ನಂತರ ರೂ.5.00 ಕೋಟಿ ಅಪ್‌ಫ್ರಂಟ್ ಫೀ ಬಿಡುಗಡೆ ಮಾಡುವ ಷರತ್ತಿಗೆ ಒಳಪಡಿಸಿರುವ ಒಪ್ಪಿಗೆ ಪತ್ರ ಪಡೆದು ದಿನಾಂಕ:15-02-2012 ರಂದು ಕರಾರು ಮಾಡಿಕೊಂಡು, ಕಾರ್ಯಾದೇಶ ಸಹ ನೀಡಲಾಗಿದೆ.

ಸದರಿ ಜಾಗದಲ್ಲಿ ಬಿಡ್ಡುದಾರರು ಕಾಮಗಾರಿಯನ್ನು ಪ್ರಾರಂಭಿಸಲು ಸರಹದ್ದನ್ನು ಗುರುತಿಸಲು ಹೋದಾಗ ಸ್ಥಳೀಯರ ಪ್ರತಿಭಟನೆ ಹಾಗೂ ತೀವ್ರ ವಿರೋಧ ವ್ಯಕ್ತವಾದ್ದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.

ಈ ಮಧ್ಯೆ ಆಧುನಿಕ ಕಸಾಯಿಖಾನೆ ಬಿಡ್ಡುದಾರರು, ಸದರಿ 40 ಎಕರೆ ಜಾಗದಲ್ಲಿ ಕಾಮಗಾರಿ ವಿಳಂಬವಾಗುತ್ತಿರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:5416/2013 ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಕಾಮಗಾರಿಗೆ ಸಂಬಂಧಪಟ್ಟಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಕಾರ ಹಾಗೂ ಅಪ್‌ಫ್ರಂಟ್ ಫೀ ರೂ.5.00 ಕೋಟಿ ಬಿಡುಗಡೆ ಮಾಡುವ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ದಿನಾಂಕ:25-04-2013 ರಂದು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:5416/2013ಗೆ ಸಂಬಂಧಪಟ್ಟಂತೆ ಮಧ್ಯಂತರ ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ಆಧುನಿಕ ಕಸಾಯಿಖಾನೆ ಬಿಡ್ಡುದಾರರಿಗೆ 40 ಎಕರೆ ಜಾಗದ ಸರಹದ್ದನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಗುರುತಿಸಿಕೊಂಡು ಬಿಡ್ಡುದಾರರಿಗೆ ಹಸ್ತಾಂತರಿಸುವ ಬಗ್ಗೆ ಕ್ರಮಕೈಗೊಳ್ಳಲು ಹಾಗೂ ಬಿಡ್ಡುದಾರರು ಕಾಮಗಾರಿ ಪ್ರಾರಂಭಿಸುವ ಸಮಯದಲ್ಲಿ ಪೊಲೀಸ್ ಬಂದೋಬಸ್ತ್ ನೀಡುವಂತೆ ಹಾರೋಹಳ್ಳಿ ಪೊಲೀಸ್ ಅಧೀಕ್ಷಕರಿಗೆ ನಿರ್ದೇಶನ ನೀಡಲಾಗಿರುತ್ತದೆ.

ದಿನಾಂಕ:22-05-2013 ರಂದು ಹಾರೋಹಳ್ಳಿ ಪೊಲೀಸ್ ಸಹಯೋಗದೊಂದಿಗೆ, ಸದರಿ 40 ಎಕರೆ ಜಾಗದ ಸರಹದ್ದನ್ನು ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಗುರುತಿಸಿರುತ್ತಾರೆ. ಅದರಂತೆ, ಸದರಿ ಜಾಗವನ್ನು ಆಧುನಿಕ ಕಸಾಯಿಖಾನೆ ಬಿಡ್ಡುದಾರರಿಗೆ ಹಸ್ತಾಂತರಿಸಿ ಕಾಮಗಾರಿ ಪ್ರಾರಂಭಿಸಲು ಸೂಚಿಸಲಾಗಿರುತ್ತದೆ.

ಆದುದರಿಂದ, ಮೆ॥ ಕ್ಯಾಪ್ರಿ ಮೀಟ್ ಹೌಸ್ ಪ್ರೈ. ಲಿ. ರವರು ಹಾರೋಹಳ್ಳಿಯ ಕೆ.ಐ.ಎ.ಡಿ.ಬಿ. ಜಾಗದಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಿರುವುದರಿಂದ, ಸದರಿ ಯೋಜನೆಯ ಟೆಂಡರ್‌ನ ಸಿಂಧುತ್ವವನ್ನು ಐದು ವರ್ಷಗಳ ಅವಧಿಗೆ ಮುಂದುವರೆಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-01-2014ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:28-01-2014ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:28-01-2014ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (207)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.69, ಈಜಿಪುರ ಕೋರಮಂಗಲ ರಸ್ತೆಯಲ್ಲಿನ 120x128 ಅಡಿಗಳ ಪಾಲಿಕೆಯ ಜಾಗವನ್ನು ಶ್ರೀಮತಿ ವಸುಮತಿ ರೆಡ್ಡಿ, ಆರ್.ಆರ್.ಎಂಟರ್‌ಪ್ರೈಸಸ್ ರವರಿಗೆ ಸರ್ಕಾರದ ಆದೇಶ ಸಂಖ್ಯೆ:ವನಇ 517 ಎಂಎನ್‌ಜಿ 1993, ದಿನಾಂಕ: 11-01-1994ರ ಆದೇಶದಂತೆ 30 ವರ್ಷಗಳ ಅವಧಿಗೆ ವಾರ್ಷಿಕ ರೂ.1000/- ಗಳಿಗೆ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿಯು ದಿನಾಂಕ:25-02-1995 ರಿಂದ 24-02-2025 ರವರೆಗೆ ಗುತ್ತಿಗೆ ಕರಾರು ನೊಂದಾಯಿಸಿದ್ದು, ಗುತ್ತಿಗೆ ಅವಧಿಯು ಚಾಲ್ತಿಯಲ್ಲಿರುತ್ತದೆ.

ಪಾಲಿಕೆ ಆಡಳಿತಗಾರರು ದಿನಾಂಕ:20-10-1995ರ ಸಭೆಯ ವಿಷಯ ಸಂಖ್ಯೆ:99ರ ನಿರ್ಣಯದಲ್ಲಿ ಈಗಾಗಲೇ ನಿಗಧಿಪಡಿಸಲಾಗಿರುವ ಗುತ್ತಿಗೆ ಹಣ ಕಡಿಮೆ ಇರುವುದರಿಂದ ವಾರ್ಷಿಕ ರೂ.25000/- ಗಳಿಗೆ ನಿಗಧಿಪಡಿಸಬೇಕೆಂದು ತೀರ್ಮಾನ ಕೈಗೊಳ್ಳಲಾಗಿದ್ದು, ಸದರಿ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ನೀಡುವಂತೆ ಆಯುಕ್ತರು ಕೋರಿದ್ದರು. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 26-10-2010 ರಂದು ನಡೆದ ಸಲಹಾ ಸಮಿತಿಯಲ್ಲಿ ಪೂರ್ವ ವಲಯದ ಪ್ರಕರಣ ಸಂಖ್ಯೆ:4 ರಲ್ಲಿ ಗುತ್ತಿಗೆದಾರರು ಸಲ್ಲಿಸಿರುವ ತೆರಿಗೆ ವರದಿಯನ್ನು ಪಡೆದು, ಅವರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮರು ಪರಿಶೀಲಿಸಿ, ಹೆಚ್ಚುವರಿ ಗುತ್ತಿಗೆ ಹಣದ ಪ್ರಸ್ತಾವನೆ ಅಥವಾ ಅವರಿಗೆ ಕ್ರಯಕ್ಕೆ ನೀಡಿರುವ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ತೀರ್ಮಾನಿಸಲಾಗಿತ್ತು.

ಶ್ರೀಮತಿ. ವಸುಮತಿ ರೆಡ್ಡಿ, ಆರ್.ಆರ್.ಎಂಟರ್‌ಪ್ರೈಸಸ್ ರವರು ಗುತ್ತಿಗೆ ನೀಡಿರುವ ಸ್ವತ್ತನ್ನು ಕ್ರಯಕ್ಕೆ ನೀಡುವಂತೆ ಕೋರಿದ್ದು, ಸ್ವತ್ತಿನ ಒಟ್ಟು ಮೌಲ್ಯ ರೂ.5,37,60,000/- ಗಳಾಗುತ್ತದೆಂದು, ಸದರಿ ಸ್ವತ್ತನ್ನು ಸಾರ್ವಜನಿಕ ಹರಾಜು ಮಾಡಿದಲ್ಲಿ ಬರುವಂತಹ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡಲು ಪಾಲಿಕೆಯ ಆಯುಕ್ತರು ದಿನಾಂಕ:18-01-2013 ರಂದು ಪಾಲಿಕೆಯ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ಪ್ರಸ್ತಾವನೆಯ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದರಿಂದ, ಕೌನ್ಸಿಲ್ ಸಭೆಯ ದಿನಾಂಕ:16-03-2013ರ ವಿಷಯ ಸಂಖ್ಯೆ:468/12-13 ರಲ್ಲಿ ಏಕ ಪಕ್ಷೀಯ (Suo-motto) ನಿರ್ಣಯ ಕೈಗೊಂಡಿದ್ದು, ಸದರಿ ನಿರ್ಣಯವು ನಿಯಮಾವಳಿಗೆ ವಿರುದ್ಧವಾಗಿದ್ದು, ಪಾಲಿಕೆಯ ನಿರ್ಣಯವನ್ನು ಜಾರಿಗೊಳಿಸದೇ ಇರಲು ಆಯುಕ್ತರ ದಿನಾಂಕ:25-06-2013ರ ಪ್ರಸ್ತಾವನೆಯಲ್ಲಿ ಗುತ್ತಿಗೆ ಅವಧಿಯು ದಿನಾಂಕ: 24-02-2025 ರವರೆಗೆ ಜಾಲ್ತಿಯಲ್ಲಿದ್ದು, ಗುತ್ತಿಗೆಯನ್ನು ರದ್ದುಪಡಿಸದೇ ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಸಲ್ಲಿಸಲು ಸಾಧ್ಯವಾಗುವುದಿಲ್ಲ ಹಾಗೂ ದಿನಾಂಕ:02-06-2013ರ ಮಾರ್ಗಸೂಚಿಗಳಂತೆ ಸಾರ್ವಜನಿಕ ಹರಾಜು ಮೂಲಕವೇ ಮಾರಾಟ ಮಾಡಬೇಕಾಗಿರುತ್ತದೆ.

ಆದ್ದರಿಂದ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳು ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನವೇ ಕೌನ್ಸಿಲ್ ಸಭೆಯಲ್ಲಿ ಏಕ ಪಕ್ಷೀಯ (Suo-motto) ತೀರ್ಮಾನ ಕೈಗೊಂಡಿದ್ದು, ಈ ತೀರ್ಮಾನವು ನಿಯಮಾವಳಿಗೆ ವಿರುದ್ಧವಾಗಿದ್ದು, ಕೆ.ಎಂ.ಸಿ. ಕಾಯ್ದೆ 1977ರ ಕಲಂ-72 ರನ್ವಯ ಪಾಲಿಕೆಯ ಸಭೆಯ ನಿರ್ಣಯವನ್ನು ಜಾರಿಗೊಳಿಸದೇ (Annual) ನಲ್ಲಿರಿಸಲು ಸೂಕ್ತ ನಿರ್ದೇಶನ ನೀಡುವಂತೆ ಕೋರಲಾಗಿರುತ್ತದೆ.

...........................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:16-03-2013ರ ವಿಷಯದ ಸಂಖ್ಯೆ:468/12-13 ರಲ್ಲಿ ಏಕ ಪಕ್ಷೀಯ (Suo-motto) ಕೈಗೊಂಡಿರುವ ನಿರ್ಣಯವು ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003ರ ಆದೇಶ ಹಾಗೂ ರಿಟ್ ಅರ್ಜಿ ಸಂಖ್ಯೆ:15552/2006ರ ಮತ್ತಿತರ ಪ್ರಕರಣದಲ್ಲಿ ದಿನಾಂಕ:07-02-2013 ರಂದು ನೀಡಿರುವ ಆದೇಶದಲ್ಲಿ ಪಾಲಿಕೆಯ ಸ್ವತ್ತುಗಳನ್ನು ಬೇರೆಯವರಿಗೆ ಕ್ರಯಕ್ಕೆ / ಮಾರಾಟ ಮಾಡುವುದು ಶಾಸನಾತ್ಮಕ ಉಲ್ಲಂಘನೆಯಾಗುವ ಕಾರಣ, ಮೇಲ್ಕಂಡ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕೆ.ಎಂ.ಸಿ.ಕಾಯ್ದೆ 1976ರ ಕಲಂ-98(2) ರನ್ವಯ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಿದ್ದು, ಸದರಿ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಕೌನ್ಸಿಲ್‌ನ ಹೇಳಿಕೆ / ಸಮಜಾಯಿಷಿಗಳೇನಾದರೂ ಇದ್ದಲ್ಲಿ, ನೋಟೀಸು ತಲುಪಿದ 15 ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತವಾಗಿ ಕಳುಹಿಸಿಕೊಡುವಂತೆ ಸೂಚಿಸುತ್ತಾ, ಸಮಜಾಯಿಷಿ ಬಾರದಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಏಕಪಕ್ಷಿಯವಾಗಿ ತೀರ್ಮಾನ ಕೈಗೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ.

ಆದುದರಿಂದ, ಸರ್ಕಾರವು ಕೆ.ಎಂ.ಸಿ. ಅಧಿನಿಯಮ 1976ರ ಕಲಂ 98(2) ರಡಿ ಕಾರಣ ಕೇಳುವ ನೋಟೀಸಿಗೆ ಸಮಜಾಯಿಷಿ ನೀಡುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-01-2014ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಕಾನೂನು ಪ್ರಕಾರ ಆಯುಕ್ತರು ಸೂಕ್ತ ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಕಾನೂನು ಪ್ರಕಾರ ಆಯುಕ್ತರು ಸೂಕ್ತ ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (210)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಕಾರ್ಯವನ್ನು ಉತ್ತಮ ರೀತಿಯಲ್ಲಿ ಮತ್ತು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಪಾಲಿಕೆಯು ಹಲವು ಕ್ರಮಗಳನ್ನು ಕೈಗೊಂಡಿದ್ದು, ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ 50 ಮಂದಿ ಪರಿಸರ ಅಭಿಯಂತರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಕಛೇರಿ ಸಂಖ್ಯೆ:ಬಿ12(6ಎ)ಪಿಆರ್/391/2012-13, ದಿನಾಂಕ:18-10-2012 ರಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 768 ಎಂಎನ್‌ವೈ 2012, ದಿನಾಂಕ:19-10-2012ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ನಿರ್ವಹಣೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಅನುವಾಗುವಂತೆ ಮತ್ತು ಪ್ರಸಕ್ತ ಕಸ ವಿಲೇವಾರಿಯಲ್ಲಿ ಉದ್ಭವವಾಗಿರುವ ಸಮಸ್ಯೆಗಳ ಹಿನ್ನಲೆಯಲ್ಲಿ 50 ಪರಿಸರ ಅಭಿಯಂತರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಷರತ್ತಿಗೊಳಪಟ್ಟು ನೇಮಕ ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿರುತ್ತದೆ.

1. ಪರಿಸರ ಅಭಿಯಂತರರುಗಳನ್ನು ಮಾನವ ಸಂಪನ್ಮೂಲ ಸಂಸ್ಥೆ (Manpower Agency) ಯಿಂದ ಹೊರಗುತ್ತಿಗೆ ಆಧಾರದ ಮೂಲಕ ಒಂದು ವರ್ಷದ ಅವಧಿಗೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.
2. ಈ ಅಭಿಯಂತರರುಗಳನ್ನು ಸದರಿ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದಲೇ ನೇಮಕ ಮಾಡಿಕೊಳ್ಳತಕ್ಕದ್ದು.
3. ಈ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ. ಯಲ್ಲಿ ಖಾಯಂ ಆಗಿ ಮುಂದುವರೆಯುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
4. ಈ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಬಿ.ಬಿ.ಎಂ.ಪಿ. ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು. ಯಾವುದೇ ಕಾರಣದಿಂದಲೂ ಸರ್ಕಾರದ ಅನುದಾನವನ್ನು ನೀಡಲಾಗುವುದಿಲ್ಲ.

ಇದರಂತೆ, ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರರುಗಳನ್ನು ನೇಮಿಸಿಕೊಳ್ಳುವ ಸಂಬಂಧ ಸಂಖ್ಯೆ:ಬಿ12(6ಎ)ಪಿಆರ್/391/2012-13, ದಿನಾಂಕ: 25-10-2012ರ ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಒಬ್ಬರು ಮಾತ್ರ ಭಾಗವಹಿಸಿರುವ ಹಿನ್ನಲೆಯಲ್ಲಿ ಸಂಖ್ಯೆ:ಬಿ12(6ಎ)ಪಿಆರ್/391/2012-13, ದಿನಾಂಕ:09-11-2012ರ ರೀತ್ಯಾ ಮರು ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ಮಾನವ ಸಂಪನ್ಮೂಲ ಸಂಸ್ಥೆಗಳು ಭಾಗವಹಿಸಿರುತ್ತಾರೆ.

1. **M/s. Wisdom Security Services**
2. **Transvision software and data solutions Pvt. Ltd.**

ಸದರಿ ಟೆಂಡರಿನ ತಾಂತ್ರಿಕ ಬಿಡ್ ಅನ್ನು ದಿನಾಂಕ:24-11-2012 ರಂದು ತೆರೆದು, ಟೆಂಡರ್ ನಿಯಮಾವಳಿಗಳಂತೆ ಮೌಲ್ಯಮಾಪನವನ್ನು ಮಾಡಲಾಗಿ, **M/s. Wisdom Security Services** ಸಂಸ್ಥೆಯವರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.

.........................2

**Transvision software and data solutions Pvt. Ltd.** ಸಂಸ್ಥೆಯವರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ನೊಂದಣಿಯಾಗಿರುವುದಿಲ್ಲವಾದ್ದರಿಂದ ತಾಂತ್ರಿಕವಾಗಿ ಅರ್ಹರಾಗಿರುವುದಿಲ್ಲ.

ದಿನಾಂಕ:29-11-2012 ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, **M/s. Wisdom Security Services** ಸಂಸ್ಥೆಯವರು ಸಲ್ಲಿಸಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ. (ಸೇವಾ ಶುಲ್ಕವನ್ನು ಹೊರತುಪಡಿಸಿ).

| Description of Posts | Qualification | Approved amount per person per month (in Rs.) | No. of Days | Rate | Basic | DA | Conveyance | Gross | P.F. | E.S.I | Service Charges | Total |
|---|---|---|---|---|---|---|---|---|---|---|---|---|
| Environmental Engineer | B.E/M.Tech (Environment)/B.E (Civil) with Minimum 2 elected subjected in Environmental Engineering | 15000-00 | Per month | 15,000-00 | 8,000-00 | 4,000-00 | 3,000-00 | 15,000-00 | 1,636-00 | 713-00 | 1,500-00 | 18,846-00 |

**Plus Service Tax as applicable will be charged on Total Billing.**

ಇದರಂತೆ, ಒಬ್ಬ ಪರಿಸರ ಅಭಿಯಂತರರಿಗೆ ಮಾಸಿಕವಾಗಿ ರೂ.18,846-00 ಪಾವತಿಸಬೇಕಾಗಿದ್ದು, ಒಟ್ಟು 50 ಮಂದಿ ಪರಿಸರ ಅಭಿಯಂತರರುಗಳಿಗೆ ಪ್ರತಿ ಮಾಹೆ ರೂ.9,42,300-00 ಗಳನ್ನು ಪಾವತಿಸಬೇಕಾಗಿರುತ್ತದೆ. ಇದರಂತೆ, 18,846-00 * 50 * 12 (ಒಂದು ವರ್ಷಕ್ಕೆ) = ರೂ.1,13,07,600-00 ಪಾವತಿಸಬೇಕಾಗಿರುತ್ತದೆ (ಸೇವಾ ಶುಲ್ಕವನ್ನು ಹೊರತುಪಡಿಸಿ).

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ **M/s. Wisdom Security Services** ಸಂಸ್ಥೆಯಿಂದ ಹೊರ ಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರರುಗಳನ್ನು ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸಂಬಂಧ ಕಾರ್ಯಾದೇಶ ನೀಡುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ದಿನಾಂಕ:04-12-2012 ರಂದು ಮಂಡಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯ ಸಂಖ್ಯೆ:01(343)/2012-13 ರಲ್ಲಿ ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಟೆಂಡರ್ ಪ್ರಕ್ರಿಯೆಯನ್ನು **e-Procurement Portal** ಮುಖಾಂತರ ರದ್ದುಗೊಳಿಸಲಾಗಿದೆ.

ಪ್ರಸ್ತುತ ಶ್ರೀ. ಟಿ.ತಿಮ್ಮೇಗೌಡ, ಜೆ.ಡಿ(ಎಸ್) ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮನವಿ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಹೊರಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರರುಗಳನ್ನು ನೇಮಿಸಿಕೊಳ್ಳುವ ಸಂಬಂಧ ಪಾಲಿಕೆ ಸಭೆಯಲ್ಲಿ ಚರ್ಚಿಸಬೇಕಾಗಿರುವುದರಿಂದ ಕೆ.ಎಂ.ಸಿ. ಕಾಯ್ದೆ ರೂಲ್-51ರ ಅಡಿಯಲ್ಲಿ ಮಹಾನಗರ ಪಾಲಿಕೆ ಸಭೆಯ ಮುಂದೆ ಪುನರ್ ಮಂಡಿಸಲು ಕೋರಿರುತ್ತಾರೆ.

ಅದರಂತೆ, ಸದರಿ ಕಡತವನ್ನು ಕೆ.ಎಂ.ಸಿ. ಕಾಯ್ದೆ ರೂಲ್-51 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-01-2014ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಕೆ.ಎಂ.ಸಿ.ಕಾಯ್ದೆ ನಿಯಮ 51ರ ಅಡಿಯಲ್ಲಿ ಪುನರ್ ಮಂಡಿಸಿರುವ ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (214)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾರುಕಟ್ಟೆ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಪಾಲಿಕೆ ಮಾರುಕಟ್ಟೆಗಳ ಸ್ಥಳ ತಪಾಸಣೆ ನಡೆಸಿದಾಗ ಪಾಲಿಕೆ ಮಾರುಕಟ್ಟೆ ಮಳಿಗೆಗಳಿಗೆ ವಿಧಿಸಿರುವ ಪರವಾನಗಿ ಶುಲ್ಕವು ಬೇರೆ ವಾಣಿಜ್ಯ ಕಟ್ಟಡಗಳ ಮಳಿಗೆಗಳ ಮಾಲೀಕರು ವಸೂಲಿ ಮಾಡುತ್ತಿರುವ ಬಾಡಿಗೆಗೆ ಹೋಲಿಸಿದ್ದಲ್ಲಿ ಬಹಳ ಕಡಿಮೆಯದಾಗಿದ್ದು, ಪಾಲಿಕೆಯ ನಿರ್ಮಾಣಕ್ಕಾಗಿ ಮಾಡಿರುವ ಹಾಗೂ ಮಾರುಕಟ್ಟೆಗಳ ನಿರ್ವಹಣೆಗೆ ಮಾಡುತ್ತಿರುವ ನಿರ್ವಹಣೆ ವೆಚ್ಚವನ್ನು ಪರಿಗಣಿಸಿದಾಗ ಪಾಲಿಕೆಯ ಮಾರುಕಟ್ಟೆ ಮಳಿಗೆಗಳಿಂದ ವಸೂಲಿ ಮಾಡುತ್ತಿರುವ ಅದಾಯವು ಬಹಳ ನಗಣ್ಯವಾಗಿದ್ದು, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಎಲ್ಲಾ ಮಳಿಗೆಗಳ ಶುಲ್ಕವನ್ನು ಗಣನೀಯವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಪಾಲಿಕೆಯ ಮಾರುಕಟ್ಟೆಗಳನ್ನು ಬಹಳ ಹಿಂದಿನ ಕಾಲದಲ್ಲಿ ನಿರ್ಮಿಸಲಾಗಿದ್ದು, ಹಂಚಿಕೆ ಸಮಯದಲ್ಲಿ ಪರವಾನಗಿ ಕರಾರು ಪತ್ರ ಜಾರಿ ಮಾಡಿದಾಗ ಪ್ರತಿ ಹನ್ನೊಂದು ತಿಂಗಳ ಅವಧಿಗೆ ಕರಾರು ಪತ್ರವನ್ನು ನವೀಕರಿಸಿ ಪರವಾನಗಿ ಶುಲ್ಕವನ್ನು ಹೆಚ್ಚುವರಿ ಮಾಡಬೇಕೆಂಬ ಕರಾರನ್ನು ವಿಧಿಸಿದ್ದರೂ ಬಹಳಷ್ಟು ಮಳಿಗೆಗಳ ಕರಾರು ಪತ್ರಗಳನ್ನು ನವೀಕರಣ ಮಾಡದೇ ಮರುಹಂಚಿಕೆ ಮಾಡುವ ಸಮಯದಲ್ಲಿ ನಿಗಧಿಸಿದ ಪರವಾನಗಿ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ. ಉದಾ: ರಸಲ್ ಮಾರುಕಟ್ಟೆಯ ಪಕ್ಕದಲ್ಲಿರುವ ರಿಚರ್ಡ್ ಸ್ಕ್ವಯರ್ ಮೀಟರ್ ಸುಮಾರು 30,000 ಚ.ಅಡಿ ವಿಸ್ತೀರ್ಣವಾಗಿದ್ದು, ಕೇವಲ 60 ಅಂಗಡಿಗಳನ್ನು ದಶಕಗಳ ಹಿಂದೆ ನಿರ್ಮಾಣ ಮಾಡಿದ್ದು, ಇವುಗಳಿಂದ ಮಾಸಿಕ ಕೇವಲ ರೂ.18500/-ಆದಾಯ ಉಂಟಾಗುತ್ತಿದ. ಇದೇ ಪರಿಸ್ಥಿತಿ ಪಾಲಿಕೆಯ ಹಲವಾರು ಮಾರುಕಟ್ಟೆಗಳಲ್ಲಿ ಅಸ್ತಿತ್ವದಲ್ಲಿದೆ.

ಕರ್ನಾಟಕ ಸರ್ಕಾರವು ದಿನಾಂಕ:26-11-2009ರ ಸುತ್ತೋಲೆಯ ಸಂಖ್ಯೆ:ಯುಡಿಡಿ 21 ಜಿಇಎಲ್ 2009 ರಲ್ಲಿ ಪಾಲಿಕೆಯು ನಿರ್ಮಿಸಿರುವ ಮಳಿಗೆಗಳ ಬಾಡಿಗೆ/ಪರವಾನಗಿ ಶುಲ್ಕ/ಗುತ್ತಿಗೆ ಮೊತ್ತ ನಿಗಧಿಪಡಿಸಲು ಒಂದು ವೈಜ್ಞಾನಿಕ ಸೂತ್ರವನ್ನು ರೂಪಿಸಿದ್ದು, ಈ ಸೂತ್ರದ 3 ಕಲಂನಲ್ಲಿ ಅಸ್ತಿತ್ವದಲ್ಲಿರುವ ಪಾಲಿಕೆಯ ಮಾರುಕಟ್ಟೆಗಳಲ್ಲಿ ಈಗಾಗಲೇ ಹಂಚಿಕೆ ಮಾಡಿ ಪರವಾನಗಿ ಮುಕ್ತಾಯಗೊಂಡು ನವೀಕರಣ ಆಗದೇ ಇರುವ ಬಾಡಿಗೆ/ಗುತ್ತಿಗೆ ಕರಾರು ಪತ್ರಗಳಿಗೆ ಅರ್ಜಿ ಸಲ್ಲಿಸಿರುವ ಮಳಿಗೆಗಳ ನವೀಕರಣ ಶುಲ್ಕ ಹೆಚ್ಚಿಸುವ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದಂತೆ, 1954ರಲ್ಲಿ ನೋಟಿಫಿಕೇಷನ್ ನಂ.ಎ(52)/52-53, ದಿನಾಂಕ:20-2-1994 ರಂದು ರಚಿಸಿರುವ ಮಾರುಕಟ್ಟೆಗಳ ಬೈಲಾದಲ್ಲಿ ಅಂಗಡಿ ಮಳಿಗೆಗಳಿಂದ ವಸೂಲಾದ ಶುಲ್ಕವನ್ನು ಬಾಡಿಗೆ ಅಥವಾ ಗುತ್ತಿಗೆ ಮೊತ್ತ ಎಂದು ನಾಮಕರಣ ಮಾಡಲಾಗಿದೆಯೇ ಹೊರತು ಪರವಾನಗಿ ಶುಲ್ಕ ಎಂದು ನಮೂದಿಸದೇ ಇರುವ ಹಿನ್ನೆಲೆಯಲ್ಲಿ ಪರವಾನಗಿ ಶುಲ್ಕ ಎಂಬುದರ ಬದಲಾಗಿ ಮಾಸಿಕ ಬಾಡಿಗೆ ಎಂದು ನಾಮಕರಣ ಮಾಡಿದಲ್ಲಿ ಪ್ರಸ್ತಾಪಿತ ಸರ್ಕಾರದ ಸುತ್ತೋಲೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. 1954ರಲ್ಲಿ ರಚಿಸಿರುವ ಮಾರುಕಟ್ಟೆ ಬೈಲಾ ನಂತರ ಪಾಲಿಕೆ ಮಾರುಕಟ್ಟೆ ಸಂಬಂಧಿಸಿದ ಯಾವುದೇ ಬೈಲಾ ರಚಿಸಲಾಗಿರುವುದು.

ಅಸ್ತಿತ್ವದಲ್ಲಿ ಪಾಲಿಕೆ ಮಾರುಕಟ್ಟೆ ಮಳಿಗೆಗಳಿಗೆ ಬಾಡಿಗೆ ನಿಗಧಿಪಡಿಸಲು ಈ ಕೆಳಕಂಡಂತೆ ನವೀಕರಣವನ್ನು ನಿಗಧಿಪಡಿಸಲಾಗಿದೆ.

=(1.96Pr-0.96D)/110.26

X = ಮಾಸಿಕ ಬಾಡಿಗೆ

G = ನೆಲ ಬಾಡಿಗೆ/ಪಾಲಿಕೆ ನಿರ್ಧರಿಸಬೇಕಾಗಿದ್ದು,

Interest free Deposit = ಕಟ್ಟಡದ ನಿರ್ಮಾಣ ವೆಚ್ಚ/ಮಳಿಗೆ ಜಾಗದ ಅಳತೆ

Refundable Deposit PWD rate ಅನ್ನು ಆಧಾರವಾಗಿಟ್ಟುಕೊಳ್ಳಬಹುದಾಗಿದೆ.

Pr = Present Value of the calculated expense of construction

Pr.wq Maximum rent R = X+G

R = X + G

$$X = \frac{(1.96x13,50,000)-(0.96x3,37,500) = 26}{110.26}$$

= 21.060

$$G = \frac{2\% \text{ of guidance value (sq.ft x total area of the complex)}}{12 \text{ x refundable area of the complex (sq.ft)}}$$

$$= \frac{108 \times 10,000}{12 \times 300}$$

$$= \frac{10,80,000}{3600}$$

= 300

R = X + G

= 21060 + 300

= 21,360

ಹಾಲಿ ಮಳಿಗೆದಾರರು ಸುಮಾರು ರೂ.115/- ಗಳ ಮಾಸಿಕ ಬಾಡಿಗೆ ಪಾವತಿಸುತ್ತಿದ್ದು, ಮೇಲ್ಕಂಡ ಸೂತ್ರದ ಮೇರೆಗೆ ಮಾಸಿಕ ಬಾಡಿಗೆಯನ್ನು ಏಕಾಏಕಿ ರೂ.21,360/-ಗಳನ್ನು ನಿಗಧಿಪಡಿಸಿದ್ದಲ್ಲಿ ವ್ಯಾಪಾರಸ್ಥರು ತೀರ್ಮಾನದ ವಿರುದ್ಧ ಹೋರಾಟ ನಡೆಸಬಹುದಾಗಿದ್ದು ಕಾನೂನು ತೊಡಕುಗಳು ಉಂಟಾಗುವ ಸಂಭವವಿದ್ದು ಜಂಟಿ ಸಮಿತಿಯು ತಮಗಿರುವ ವಿವೇಚನ ಅಧಿಕಾರವನ್ನು ಚಲಾಯಿಸಿ ಮಾಸಿಕ ಬಾಡಿಗೆಯನ್ನು ಲೆಕ್ಕಾಚಾರದ ಶೇಕಡ 25% ರಷ್ಟು ಅಂದರೆ ರೂ.5,340/-ಕ್ಕೆ ನಿಗಧಿಪಡಿಸಿದ್ದಲ್ಲಿ ಪಾಲಿಕೆಯ ಬೊಕ್ಕಸಕ್ಕೆ ಆದಾಯ ಉಂಟಾಗುವುದಲ್ಲದೇ ಅನಾವಶ್ಯಕ ಕಾನೂನು ತೊಡಕನ್ನು ತಡೆಗಟ್ಟಬಹುದಾಗಿದೆ.

ಮುಂದುವರೆದಂತೆ ಮಾರುಕಟ್ಟೆ ಮಳಿಗೆಗಳ ಪರವಾನಗಿ ಶುಲ್ಕ ಪರಿಷ್ಕರಣೆಯ ಎರಡನೇಯ ಪ್ರಸ್ತಾವನೆಯನ್ನು ಕೆಳಕಂಡಂತೆ ಮಂಡಿಸಿದೆ.

ದಿನಾಂಕ:03-03-2012ರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 29(326)/11-12ರ ತೀರ್ಮಾನದ ಹಿನ್ನೆಲೆಯಲ್ಲಿ ಈಗಾಗಲೇ ಪಾವತಿ ಹೊಂದಿರುವ/ಪರಭಾರೆ ಮಾಡಿರುವ ಮಳಿಗೆದಾರರ ಪರವಾನಗಿಯನ್ನು ರದ್ದುಪಡಿಸಿ, ಕೆ.ಎಂ.ಸಿ.ಕಾಯ್ದೆ 1976 ಕಲಂ 176ರ ಅಡಿಯಲ್ಲಿ ಪಾಲಿಕೆ ಸಭೆಗೆ ಪ್ರತ್ಯಾಯೋಜನೆ ಮಾಡಲಾಗಿರುವ ಅಧಿಕಾರವನ್ನು ಚಲಾಯಿಸಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದ್ದು, ಪ್ರಸ್ತುತ ಮಳಿಗೆಗಳನ್ನು ಪಾವತಿ ಹೊಂದಿರುವ ಪರವಾನಗಿದಾರರ, ವಾರಸುದಾರರಿಗೆ ಹಾಗೂ ಪರಭಾರೆ ಹೊಂದಿ ಹಾಲಿ ವ್ಯಾಪಾರ ನಡೆಸುತ್ತಿರುವವರಿಗೆ ಹನ್ನೊಂದು ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಬಹುದಾಗಿರುತ್ತದೆ.

ಈ ರೀತಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಮಯದಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಬಹುದಾಗಿದೆ.

1. ಹಿಂದೆ ಪಾವತಿಸಲಾದ ಪರವಾನಗಿ ಶುಲ್ಕವನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಮಯದಲ್ಲಿ ಪರವಾನಗಿ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಬಹುದಾಗಿದೆ.

ಅ) ರೂ.1000/- ವರೆಗಿನ ಮಾಸಿಕ ಪರವಾನಗಿ ಶುಲ್ಕವನ್ನು ಮಾರುಕಟ್ಟೆ ಇರುವ ಪ್ರದೇಶದ ಆಧಾರದ ಮೇಲೆ ಕನಿಷ್ಟ 100% ಹೆಚ್ಚಿಸಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.

ಆ) ರೂ.1001/- ರಿಂದ ರೂ.5000/-ರವರೆಗಿನ ಮಾಸಿಕ ಪರವಾನಗಿ ಶುಲ್ಕವನ್ನು ಮಾರುಕಟ್ಟೆ ಇರುವ ಪ್ರದೇಶದ ಆಧಾರದ ಮೇಲೆ ಕನಿಷ್ಟ 75% ಹೆಚ್ಚಿಸಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.

ಇ) ರೂ.5000/-ಕ್ಕೂ ಅಧಿಕ ಇರುವ ಮಾಸಿಕ ಪರವಾನಗಿ ಶುಲ್ಕವನ್ನು ಮಾರುಕಟ್ಟೆ ಇರುವ ಪ್ರದೇಶದ ಆಧಾರದ ಮೇಲೆ ಕನಿಷ್ಟ 50% ಹೆಚ್ಚಿಸಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಬಹುದಾಗಿದೆ.

ಈ) ಗುತ್ತಿಗೆಯನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ನವೀಕರಿಸಿ, ಗುತ್ತಿಗೆ ಮೊತ್ತವನ್ನು ವಾರ್ಷಿಕ 10% ಹೆಚ್ಚಿಸಿ, ಪರಿಷ್ಕರಿಸಿ ನಿಗಧಿಪಡಿಸಬಹುದಾಗಿದೆ.

ಉ) ಹಂಚಿಕೆ ಪಡೆದ ವ್ಯಕ್ತಿಗಳು 12 ತಿಂಗಳ ಭದ್ರತಾ ಠೇವಣಿಯನ್ನು ಹಾಗೂ 6 ತಿಂಗಳ ಮುಂಗಡ ಗುತ್ತಿಗೆ ಮೊತ್ತವನ್ನು ಪಾವತಿಸತಕ್ಕದ್ದು.

ಆದುದರಿಂದ, ಪರವಾನಗಿ ಅವಧಿ ಮುಗಿದಿರುವ ಹಾಗೂ ಕರಾರುಗಳು ಊರ್ಜಿತಾವಸ್ಥೆಯಲ್ಲಿ ಇರುವುದಿಲ್ಲ ಎಂಬುದರ ಬಗ್ಗೆ ಪ್ರತಿ ಹಂಚಿಕೆದಾರರಿಗೂ ಪ್ರತ್ಯೇಕವಾಗಿ ತಿಳಿಯಪಡಿಸುವುದು ಹಾಗೂ ಪ್ರತಿ ಹಂಚಿಕೆದಾರರು ತಾವು ತಮಗೆ ಹಂಚಿಕೆಯಾದ ಮಳಿಗೆಯಲ್ಲಿ ಬಾಡಿಗೆದಾರರಾಗಿ ಮುಂದುವರೆಯಲು ಇಚ್ಛಿಸುವುದಾದರೆ ಬೃಹತ್ ಮಹಾನಗರ ಪಾಲಿಕೆಯು ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ ನಿಗಧಿತ ಅರ್ಜಿ ದರವನ್ನು ಪಾವತಿಸಿ ಅರ್ಜಿ ಪಡೆದು, ತಮ್ಮ ಭಾವ ಚಿತ್ರವನ್ನು ಲಗತ್ತಿಸಿ, ಕೋರಿಕೆ ಸಲ್ಲಿಸಲು ಸೂಚಿಸಬಹುದು. ಅರ್ಜಿ ಸಲ್ಲಿಸುವುದರ ಜೊತೆಗೆ ಒಪ್ಪಿಕೊಂಡಿರುವ ದರದಲ್ಲಿ ತಹಲ್‌ವರೆವಿಗೂ ಬಾಕಿ ಇರುವ ಮೊತ್ತವನ್ನು ಪಾವತಿ ಮಾಡಿ ರಸೀದಿಯ ನಕಲನ್ನು ಲಗತ್ತಿಸಬೇಕಾಗುತ್ತದೆ. ಹಾಗೂ ಮುಂದಿನ ಅವಧಿಗೆ ತಾವು ಪಾವತಿ ಮಾಡಲು ಇಚ್ಛಿಸಬಹುದಾದ ಮೊತ್ತವನ್ನು ನಮೂದಿಸಬೇಕಾಗುತ್ತದೆ. ಈ ಷರತ್ತುಗಳೊಂದಿಗೆ ಪ್ರತಿಯೊಂದು ಮಳಿಗೆಯ ಬಾಡಿಗೆದಾರರಿಂದಲೂ ಪ್ರತ್ಯೇಕವಾಗಿ ಅರ್ಜಿ ಪಡೆದು ನಗರಪಾಲಿಕೆ ದಾಖಲಾತಿಗಳಲ್ಲಿ ನೊಂದಾವಣೆ ಮಾಡಿಕೊಳ್ಳಬೇಕಾಗುತ್ತದೆ. ಹಾಗೂ ಶಾಶ್ವತ ದಾಖಲೆಗಳನ್ನು ನಗರಪಾಲಿಕೆಯ ಕಛೇರಿಯಲ್ಲಿ ಸುರಕ್ಷಿತಪಡಿಸಿಕೊಳ್ಳಬೇಕಾಗುತ್ತದೆ. ಸ್ವಇಚ್ಛೆಯಿಂದ ನಿಗಧಿತ ಅವಧಿಯಲ್ಲಿ ಅರ್ಜಿ ಸಲ್ಲಿಸದಿದ್ದ ಬಾಡಿಗೆದಾರರು ನಗರಪಾಲಿಕೆಯ ಮಳಿಗೆಯಲ್ಲಿ ತಾವು ಮುಂದುವರೆಯಲು ಇಚ್ಛಸಿರುವುದಿಲ್ಲ ಎಂಬುದಾಗಿ ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಜರುಗಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪಾಲಿಕೆಯ ಆರ್ಥಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಪಾವತಿ ಹೊಂದಿರುವ ಹಿಂದಿನ ಪರವಾನಗಿದಾರರ ವಾರಸುದಾರರಿಗೆ ಹಾಗೂ ಪಾಲುದಾರಿಕೆ ಆಧಾರದ ಮೇಲೆ ಹಾಲಿ ವ್ಯಾಪಾರ ನಡೆಸುತ್ತಿರುವವರಿಗೆ ಸೂಕ್ತ ದಾಖಲಾತಿಗಳ ಆಧಾರದ ಮೇಲೆ ಬಾಕಿ ಇರುವ ಪರವಾನಗಿ ಶುಲ್ಕವನ್ನು ದಂಡ ಸಹಿತ ಪಾವತಿಸುವ ಹಾಗೂ ಪರವಾನಗಿ ಶುಲ್ಕವನ್ನು ಹೆಚ್ಚಿಸಿ, ನಿಗಧಿಪಡಿಸಿ ಪ್ರತಿ ವರ್ಷ ನವೀಕರಿಸುವ ಸಂದರ್ಭದಲ್ಲಿ ಪರವಾನಗಿ ಶುಲ್ಕವನ್ನು ಶೇಕಡ 10% ರಷ್ಟು ಪರಿಷ್ಕರಿಸುವ ಷರತ್ತಿನೊಂದಿಗೆ ಹಿಂದಿನ ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ವಾರಸುದಾರರಿಗೆ/ಪರಭಾರೆ ಹೊಂದಿ ವ್ಯಾಪಾರ ನಡೆಸುತ್ತಿರುವವರಿಗೆ ಕೆ.ಎಂ.ಸಿ. ಕಾಯ್ದೆ 1976ರ ಕಲಂ 176ರ ಅಡಿಯಲ್ಲಿ ಹನ್ನೊಂದು ತಿಂಗಳ ಅವಧಿಗೆ ಗುತ್ತಿಗೆ ಮಾಡುವ ಅಧಿಕಾರವನ್ನು ಒಂದು ತಿಂಗಳ ಕಾಲಾವಕಾಶ ನೀಡಿ, ಉಪ ಆಯುಕ್ತರು (ಮಾರುಕಟ್ಟೆ) ರವರ ಹಂತದಲ್ಲಿಯೇ ತೀರ್ಮಾನಿಸುವ ಬಗ್ಗೆ ತೀರ್ಮಾನಕ್ಕಾಗಿ ಮಾರುಕಟ್ಟೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09-01-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಹಾಲಿ ಮಾರುಕಟ್ಟೆಗಳಲ್ಲಿ ಮಳಿಗೆದಾರರಿಗೆ ಬಹಳ ಹಿಂದಿನ ಕಾಲದಲ್ಲಿ ನಿಗಧಿಪಡಿಸಲಾಗಿದ್ದ ಪರವಾನಗಿ ಶುಲ್ಕವನ್ನೇ, ಪರಿಷ್ಕರಣೆ ಮಾಡದೆ ಮುಂದುವರೆಸಿಕೊಂಡು ಬಂದಿದ್ದು, ಈಗಿನ ಸೂಚ್ಯಾಂಕ (Cost of living) ಕ್ಕೆ

.............................4

ಹೋಲಿಸಿದಲ್ಲಿ ಹಾಲಿ ಪಾವತಿಸುತ್ತಿರುವ ಪರವಾನಗಿ ಶುಲ್ಕವು ಅಪ್ರಸ್ತುತವಾಗಿದ್ದು, ಇದರಿಂದ ಪಾಲಿಕೆಗೆ ನಿಯಮಿತವಾಗಿ ಬರಬೇಕಾದ ಆದಾಯದಲ್ಲಿ ಅಪಾರ ಸೋರಿಕೆ ಉಂಟಾಗುತ್ತಿರುವುದು ಹಾಗೂ ಮಾರುಕಟ್ಟೆಗಳಿಂದ ಬರುತ್ತಿರುವ ಆದಾಯಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಮಾರುಕಟ್ಟೆಗಳ ನಿರ್ವಹಣೆಗೆ ವೆಚ್ಚ ಮಾಡಲಾಗುತ್ತಿದ್ದು, ಪಾಲಿಕೆಯ ಬೊಕ್ಕಸಕ್ಕೆ ಅಪಾರ ನಷ್ಟ ಉಂಟಾಗುತ್ತಿರುವುದನ್ನು ಜಂಟಿ-ಸಮಿತಿ ಸಭೆಯು ಅತೀ ಗಂಭೀರವಾಗಿ ಪರಿಗಣಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

ದಿನಾಂಕ: 26.10.2009ರ ಘನ ಸರ್ಕಾರದ ಸುತ್ತೋಲೆ ಸಂಖ್ಯೆ: ಯುಡಿಡಿ 221 ಜಿಇಎಲ್ 2009ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಪರವಾನಗಿ ಶುಲ್ಕವನ್ನು "ಗುತ್ತಿಗೆ ಮೊತ್ತ" ಎಂದು ಪುನರ್ ನಾಮಕರಣ ಮಾಡಿ. 'ಪ್ರಸಂಗ 1'ರಲ್ಲಿ ಸೂಚಿಸಿರುವ ಸಮೀಕರಣದ ಮೇರೆಗೆ ಪ್ರಸ್ತುತ ಗುತ್ತಿಗೆ ಮೊತ್ತವನ್ನು 1) ಹಳೆಯ ಮಾರುಕಟ್ಟೆಗಳಿಗೆ 'ಪ್ರಸಂಗ 3'ರ ಮೇರೆಗೆ ಹಾಗೂ 2) ನೂತನವಾಗಿ ಹಂಚಿಕೆ ಮಾಡಲಾಗುವ ಮಳಿಗೆಗಳಿಗೆ 'ಪ್ರಸಂಗ 2'ರಂತೆಯೂ ಪಾಲಿಕೆ ಸಭೆಯ ನಿರ್ಣಯ ದಿನಾಂಕದಿಂದ ಅನ್ವಯವಾಗುವಂತೆ ನಿಗಧಿಪಡಿಸುವುದು.

ಮುಂದುವರೆದಂತೆ, ಸರ್ಕಾರಿ ಸುತ್ತೋಲೆ ಸಂಖ್ಯೆ : ಯುಡಿಡಿ 221 ಜಿಇಎಲ್ 2009. ದಿನಾಂಕ: 26-10-2009ಅನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪರವಾನಗಿ ಶುಲ್ಕವನ್ನು "ಗುತ್ತಿಗೆ ಮೊತ್ತ" ಎಂದು ಪುನರ್ ನಾಮಕರಣ ಮಾಡಿ, ಮೂಲ ಹಂಚಿಕೆದಾರರಿಗೆ ನೂತನವಾಗಿ ಗುತ್ತಿಗೆ ಕರಾರು ಪತ್ರವನ್ನು ನೊಂದಾಯಿಸಿ, ಸರ್ಕಾರಿ ಸುತ್ತೋಲೆ ಮೇರೆಗೆ, ಎಸ್.ಆರ್ ಮತ್ತು ಗೈಡನ್ಸ್ ವ್ಯಾಲ್ಯೂ ಆಧಾರದ ಮೇಲೆ ನಿಗಧಿಪಡಿಸಬೇಕಾದ ಗುತ್ತಿಗೆ ಮೊತ್ತವನ್ನು ಜಯನಗರ ವಾಣಿಜ್ಯ ಸಂಕೀರ್ಣ ಮತ್ತು ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡದ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ 2006-2007ರಲ್ಲಿ ಈಗಾಗಲೇ ಪರಿಷ್ಕೃತ ದರದಲ್ಲಿ ಬಾಡಿಗೆಯನ್ನು ನಿಗದಿಪಡಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಈ ಎರಡು ಸಂಕೀರ್ಣದ ಮಳಿಗೆಗಳಿಗೆ ಮಾತ್ರ ಮುಂದುವರೆಸಿ, ಬಹಳ ಹಿಂದಿನಿಂದಲೂ ವಾರ್ಷಿಕವಾಗಿ ಹೆಚ್ಚಿಸಬೇಕಾದ ಗುತ್ತಿಗೆ ಮೊತ್ತವನ್ನು ಹೆಚ್ಚಿಸದೇ ಸರ್ಕಾರದ ಸುತ್ತೋಲೆ ಮೇರೆಗೆ ಪುನರ್ ನಿಗಧಿಪಡಿಸಿದಲ್ಲಿ ಮಳಿಗೆದಾರರಿಗೆ ಏಕಾಏಕಿ ಅತೀ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದನ್ನು ಗಣನೆಗೆ ತೆಗೆದುಕೊಂಡು, ಸಮೀಕರಣದ ಲೆಕ್ಕಾಚಾರದಂತೆ Guidance Value & SR rate ಆಧಾರದ ಮೇಲೆ ಗುತ್ತಿಗೆ ಮೊತ್ತದ ಕನಿಷ್ಠ ಶೇ.25% ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಮಳಿಗೆಗಳನ್ನು ಗುತ್ತಿಗೆಗೆ ನೀಡಿ, ನಿಯಮಾವಳಿಗಳ ಮೇರೆಗೆ ಪ್ರತೀ ವರ್ಷ ಗುತ್ತಿಗೆ ಕರಾರು ಪತ್ರವನ್ನು ನವೀಕರಿಸಿ, ನವೀಕರಣ ಸಂದರ್ಭದಲ್ಲಿ ನಿಗಧಿಪಡಿಸಲಾದ ಗುತ್ತಿಗೆ ಮೊತ್ತವನ್ನು ಶೇ 5% ರಷ್ಟು ಹೆಚ್ಚಿಸುವುದೆಂದು ಜಂಟಿ ಸಮಿತಿಯ ಸಭೆಯು ನಿರ್ಣಯಿಸಿತು. ಸದರಿ ನಿರ್ಣಯವನ್ನು ಪಾಲಿಕೆಯ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸುವುದೆಂದು ತೀರ್ಮಾನಿಸಿರುವ ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:04-02-2014ರ ಜಂಟಿ ಸಮಿತಿಯ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮಾರುಕಟ್ಟೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿನಾಂಕ:04-02-2014ರ ಜಂಟಿ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................5

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಮಾರುಕಟ್ಟೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿನಾಂಕ:04-02-2014ರ ಜಂಟಿ ನಿರ್ಣಯವನ್ನು ಒಪ್ಪುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (215)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಣ್ಣ ಮತ್ತು ದೊಡ್ಡ ಮಾರುಕಟ್ಟೆ ಅಂಗಡಿಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗಿದ್ದು, ಈ ಹಿಂದೆ ಮಳಿಗೆ ಹಂಚಿಕೆಯು 11 ತಿಂಗಳ ಅವಧಿಗೆ ಎಂದು ಕರಾರು ಪತ್ರ ಪಡೆಯಲಾಗಿರುತ್ತದೆ. ಆದರೆ, ಇದುವರೆಗೆ ಈ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಮಳಿಗೆಯನ್ನು ನಗರಪಾಲಿಕೆ ವಶಕ್ಕೆ ಪಡೆದು ಹೊಸದಾಗಿ ಟೆಂಡರ್ ಕರೆದು ಹಂಚಿಕೆ ಮಾಡಿರುವುದಿಲ್ಲ ಹಾಗೂ ಹಿಂದಿನ ಹಂಚಿಕೆದಾರರೇ ಮುಂದುವರೆದಿದ್ದು, ಹಳೆಯ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವುದರಿಂದ ನಗರಪಾಲಿಕೆಗೆ ಇದರಿಂದ ಆದಾಯ ಹೆಚ್ಚಾಗಿರುವುದಿಲ್ಲ.

ಕೆಲವೊಂದು ಮಳಿಗೆಗಳ ಪರವಾನಗಿದಾರರು ಬೇರೆಯವರೊಂದಿಗೆ ಪಾಲುದಾರಿಕೆ ಮಾಡಿಕೊಂಡಿದ್ದು, ಈ ಆಧಾರದ ಮೇಲೆ ಮಳಿಗೆಗಳಲ್ಲಿ ವ್ಯಾಪಾರ ಮಾಡುತ್ತಿದ್ದು, ಮೂಲ ಹಂಚಿಕೆದಾರರು ಪಾಲುದಾರಿಕೆಯಿಂದ ಹೊರಬಂದು ಇನ್ನೊಬ್ಬ ಪಾಲುದಾರರ ಹೆಸರಿಗೆ ವರ್ಗಾವಣೆ ಮಾಡಲು ಕೋರಿರುವ ಮೇರೆಗೆ ವರ್ಗಾವಣೆ ಮಾಡಿರುವ ಪ್ರಕರಣಗಳಲ್ಲಿ ಪರವಾನಗಿಯನ್ನು ಶೇಕಡ 25 ರಷ್ಟು ಹೆಚ್ಚಿಸಿ, ವರ್ಗಾವಣೆ ಮಾಡಿರುವುದರಿಂದ ನಗರಪಾಲಿಕೆಗೆ ಆದಾಯವು ಸಹ ಹೆಚ್ಚಾಗುತ್ತದೆ.

ಈ ಹಿಂದೆ ದಿನಾಂಕ: 24-08-1987ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ನಡೆದ ಜಂಟಿ ಸಮಿತಿಯ ನಡವಳಿಯ ವಿಷಯದ ಸಂಖ್ಯೆ:14(73)ರಲ್ಲಿ ನಿರ್ಣಯಿಸಿರುವಂತೆ ವರ್ಗಾವಣೆ ಸಮಯದಲ್ಲಿ ಇರುವ ಪರವಾನಗಿ ದರಕ್ಕೆ ಶೇಕಡ 25ರಷ್ಟನ್ನು ಹೆಚ್ಚಿಸಿ, 12 ತಿಂಗಳ ಭದ್ರತಾ ಠೇವಣಿ, ಒಂದು ತಿಂಗಳ ಮುಂಗಡ ಮತ್ತು 6 ತಿಂಗಳ ದಂಡವನ್ನು ವಿಧಿಸಿ ವರ್ಗಾವಣೆ ಮಾಡಲು ತೀರ್ಮಾನಿಸಿರುವ ಅಂಶಗಳ ಆಧಾರದ ಮೇಲೆ ವರ್ಗಾವಣೆಯನ್ನು ಸಹ ಮಾಡಲಾಗಿರುತ್ತದೆ.

ಈ ರೀತಿಯ ವರ್ಗಾವಣೆಯನ್ನು ಮಾಡಿದ್ದಲ್ಲಿ ಪಾಲಿಕೆಗೆ ಮಾಸಿಕ ಬಾಡಿಗೆ, 19 ತಿಂಗಳ ಬಾಡಿಗೆ ಮೊತ್ತವು ಬರುವುದಲ್ಲದೆ ಮಳಿಗೆಯ ಬಾಕಿ ಪರವಾನಗಿ ಶುಲ್ಕವೇನಾದರೂ ಇದ್ದಲ್ಲಿ ಅದನ್ನು ಸಹ ಪಾವತಿ ಮಾಡಿಕೊಳ್ಳಲಾಗುತ್ತದೆ. ಜೊತೆಗೆ ಹಿಂದಿನ ಪರವಾನಗಿದಾರರು ಪಾವತಿಸಿದ್ದ 12 ತಿಂಗಳ ಭದ್ರತಾ ಠೇವಣಿ, ಆರು ತಿಂಗಳ ದಂಡ ಮತ್ತು ಒಂದು ತಿಂಗಳ ಮುಂಗಡವು ಸಹ ಪಾಲಿಕೆಗೆ ಉಳಿಯಲಿದೆ ಇದನ್ನು ಗಮನಿಸಿದರೆ ಪಾಲಿಕೆಗೆ ಸಾಕಷ್ಟು ಆದಾಯವು ಸಹ ಬರುವುದರ ಜೊತೆಗೆ ಅನಧಿಕೃತ ಪರವಾನಗಿಯನ್ನು ತಡೆಗಟ್ಟಿದಂತಾಗುತ್ತದೆ. ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ:ಬಿ12(6)ಪಿಆರ್/23/10-11, ದಿ:21-04-2010 ರಲ್ಲಿ ಮಳಿಗೆ ಪರವಾನಗಿದಾರರ ಅವಧಿಯು ಮುಕ್ತಾಯಗೊಂಡ ಪ್ರಕರಣಗಳಲ್ಲಿ ನವೀಕರಣ ಇತ್ಯಾದಿ ಕಾರ್ಯಗಳನ್ನು ಉಪ ಆಯುಕ್ತರು (ಮಾರುಕಟ್ಟೆ) ರವರು ಕ್ರಮ ಕೈಗೊಳ್ಳಲು ಆದೇಶಿಸಲಾಗಿದ್ದು, ಇದುವರೆಗೆ ಅವಧಿ ಮುಕ್ತಾಯಗೊಂಡ ಯಾವುದೇ ಮಳಿಗೆಗಳಿಗೆ ನವೀಕರಣ ಮಾಡಿರುವುದಿಲ್ಲ ಮತ್ತು ಹಿಂದಿನ ಪರವಾನಗಿ ಶುಲ್ಕವನ್ನು ಇಂದಿನವರೆಗೆ ಪಾವತಿಸಿರುತ್ತಾರೆ. ಹಾಗೂ ಹಲವು ಹಂಚಿಕೆದಾರರು ಪರವಾನಗಿ ಶುಲ್ಕ ಬಾಕಿ ಉಳಿಸಿಕೊಂಡಿರುತ್ತಾರೆ. ಆದುದರಿಂದ, ಹಾಲಿ ವ್ಯಾಪಾರ ಮಾಡುತ್ತಿರುವವರನ್ನು ಗುರುತಿಸಿ ಪ್ರತಿ ಹಂಚಿಕೆದಾರರಿಗೆ ಒಂದು ಮಳಿಗೆಗೆ ಸೀಮಿತಗೊಳಿಸಿ, ಮಳಿಗೆ ಪರವಾನಗಿ ಶುಲ್ಕವನ್ನು ಶೇ.100 ರಷ್ಟು ಹೆಚ್ಚಿಸಿ, 3 ವರ್ಷಗಳ ಅವಧಿಗೆ ಮೀರದಂತೆ ಪ್ರತಿ ವರ್ಷ ನವೀಕರಿಸುವ ಬಗ್ಗೆ ಮತ್ತು ಮರಣ ಪತ್ರದ ಆಧಾರದ ಅಥವಾ ಪಾಲುದಾರರ ಅಡಿಯಲ್ಲಿ ವರ್ಗಾವಣೆಯನ್ನು ಉಪ ಆಯುಕ್ತರು (ಮಾರುಕಟ್ಟೆ) ರವರು ಅಧೀನದಲ್ಲಿಯೇ ನಿರ್ವಹಿಸುವ ಬಗ್ಗೆ ಮಾರುಕಟ್ಟೆ ಸ್ಥಾಯಿ ಸಮಿತಿಯ ಅಧ್ಯಕ್ಷರು ದಿನಾಂಕ: 19-07-2011 ರಂದು ಆಯುಕ್ತರವರಿಗೆ ಬರೆದಿರುವ ಪತ್ರದಲ್ಲಿ

ಕೋರಿರುವ ಮೇರೆಗೆ, ಸದರಿ ಪ್ರಸ್ತಾವನೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾರುಕಟ್ಟೆ ಸ್ಥಾಯಿ ಸಮಿತಿ ಮುಂದೆ ಆಯುಕ್ತರವರ ದಿನಾಂಕ:08-12-2011ರ ಟಿಪ್ಪಣಿ ಮಂಡಿಸಿದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾರುಕಟ್ಟೆ ಇಲಾಖೆಯಲ್ಲಿ ಬರುವ ಮಳಿಗೆಗಳ ಪರವಾನಗಿಯನ್ನು ನವೀಕರಿಸುವ ಕುರಿತು ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ಮಳಿಗೆಗಳಲ್ಲಿ ಹಾಲಿ ಪರವಾನಗಿದಾರರಲ್ಲದೆ ಬೇರೆಯವರು ಅನಧಿಕೃತವಾಗಿ ವ್ಯಾಪಾರ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಆದರೂ ಕೂಡ ಎಲ್ಲಾ ಮಾರುಕಟ್ಟೆಗಳಿಂದ ಪೂರ್ಣ ಮಾಹಿತಿಗಳನ್ನು ಪಡೆದು ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ ಒಬ್ಬರ ಪರವಾನಗಿಯನ್ನು ಮತ್ತೊಬ್ಬರ ಹೆಸರಿಗೆ ವರ್ಗಾವಣೆ ಮಾಡಲು ಕೆ.ಎಂ.ಸಿ. ಕಾಯ್ದೆ 1976ರ ಅಡಿಯಲ್ಲಿ ಅವಕಾಶವಿಲ್ಲ. ಈ ಮೇಲೆ ತಿಳಿಸಿರುವಂತೆ ಪರವಾನಗಿದಾರರು ಬೇರೊಬ್ಬರನ್ನು ಪಾಲುದಾರರನ್ನಾಗಿ ಮಾಡಿಕೊಂಡು ತಾವು ಪಾಲುದಾರಿಕೆಯಿಂದ ಹೊರ ಹೋದ ಮೇಲೆ ಇವರು ಅಂಗಡಿಯ ಮಾಲೀಕರಾಗುತ್ತಾರೆ. ಆದರೆ ನಗರಪಾಲಿಕೆ ಲೆಕ್ಕದಲ್ಲಿ ಇವರು ಅನಧಿಕೃತ ವ್ಯಾಪಾರಸ್ಥರಾಗುತ್ತಾರೆ. ಇಂತಹ ಅನಧಿಕೃತ ವ್ಯಾಪಾರಸ್ಥರು ನಗರಪಾಲಿಕೆ ಮಾರುಕಟ್ಟೆಗಳಲ್ಲಿ ಸರ್ವೇಸಾಮಾನ್ಯವಾಗಿದೆ.

ಏಕೆಂದರೆ ಇವರನ್ನು ತೆರವುಗೊಳಿಸಲು ನಗರಪಾಲಿಕೆ ನೋಟೀಸು ಜಾರಿ ಮಾಡಿದರೆ ಇದರ ಆಧಾರ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು ಸದರಿ ಅನಧಿಕೃತ ವ್ಯಾಪಾರಸ್ಥರು ಮುಂದುವರಿಯುತ್ತಾರೆ. ಇಷ್ಟಲ್ಲದೆ ಕಾನೂನು ತೊಡಕು, ರಾಜಕೀಯ ಒತ್ತಡ ಇವೆಲ್ಲವುಗಳ ತೊಡಕಾಟದಲ್ಲಿ ಈ ಅನಧಿಕೃತ ಮಳಿಗೆದಾರರು ಹಳೆ ಪರವಾನಗಿ ಶುಲ್ಕವನ್ನು ಪಾವತಿಸಿಕೊಂಡು ಈವರೆಗೆ ಮುಂದುವರಿದಿರುವುದು ಕಂಡು ಬಂದಿದೆ. ಇಂತಹ ಅನಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ, ಈ ಎಲ್ಲಾ ತೊಡಕುಗಳಿಂದ ಮಹಾನಗರ ಪಾಲಿಕೆಯು ನಷ್ಟವನ್ನು ಅನುಭವಿಸುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ, ಇಂತಹ ಮಳಿಗೆದಾರರಿಗೆ ಶೇಕಡ 100% ರಷ್ಟು ಹೆಚ್ಚಿಸಿ, 19 ತಿಂಗಳ ಪರವಾನಗಿ ಮೊತ್ತ ನಗರ ಪಾಲಿಕಗೆ ಒಂದೇ ಸಾರಿ ಬರುವುದರಿಂದ, ನಗರಪಾಲಿಕೆ ಆದಾಯ ಹೆಚ್ಚಾಗುವುದು.

ಈ ಹಿಂದೆ ದಿನಾಂಕ:24-08-1987ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ನಡೆದ ಜಂಟಿ ಸಭೆಯ ನಡವಳಿಯ ವಿಷಯದ ಸಂಖ್ಯೆ: 14(73) ರಲ್ಲಿ ನಿರ್ಣಯಿಸಿರುವಂತೆ ಈವರೆಗೆ ಕ್ರಮ ಕೈಗೊಂಡು, ಈಗ್ಗೆ ಕೆಲವು ವರ್ಷಗಳಿಂದ ಇದನ್ನು ತಡೆಹಿಡಿಯಲಾಗಿದೆ. ಆದ್ದರಿಂದ ಈ ಬಗ್ಗೆ ಹಾಲಿ ಮಳಿಗೆಯಲ್ಲಿ ವ್ಯಾಪಾರ ಮಾಡುತ್ತಿರುವ ಅನಧಿಕೃತ ವ್ಯಾಪಾರಸ್ಥರನ್ನು ಕ್ರಮಬದ್ಧಗೊಳಿಸುವ ಬಗ್ಗೆ ಸ್ಪಷ್ಟ ನಿಲುವನ್ನು ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ:15-02-2012ರ ನಿರ್ಣಯ ಹಾಗೂ ದಿನಾಂಕ:28-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಕೆಳಕಂಡ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮಾರುಕಟ್ಟೆ ಸ್ಥಾಯಿ ಸಮಿತಿಯ ದಿ: 15-02-2012ರ ನಿರ್ಣಯವನ್ನು ಪರಿಶೀಲಿಸುತ್ತಾ, ಈಗಾಗಲೇ ಮಳಿಗೆಗಳ ಹಂಚಿಕೆ ಅವಧಿಯು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಮಳಿಗೆಗಳನ್ನು ಪಾಲಿಕೆಯ ವಶಕ್ಕೆ ಪಡೆದು, ಟೆಂಡರ್ ಕರೆದು ನಿಯಮಾನುಸಾರ ಹಂಚಿಕೆ ಮಾಡುವುದು".

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ: 15-02-2012ರ ನಿರ್ಣಯವನ್ನು ಪರಿಶೀಲಿಸುತ್ತಾ, ಈಗಾಗಲೇ ಮಳಿಗೆಗಳ ಹಂಚಿಕೆ ಅವಧಿಯು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಮಳಿಗೆಗಳನ್ನು ಪಾಲಿಕೆಯ ವಶಕ್ಕೆ ಪಡೆದು, ಟೆಂಡರ್ ಕರೆದು ನಿಯಮಾನುಸಾರ ಹಂಚಿಕೆ ಮಾಡುವುದೆಂದು ತೀರ್ಮಾನಿಸಲಾಯಿತು".

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೂರ್ವ, ಪಶ್ಚಿಮ, ಮತ್ತು ದಕ್ಷಿಣ ವಲಯಗಳಲ್ಲಿ ಒಟ್ಟು 121 ಮಾರುಕಟ್ಟೆಗಳಿದ್ದು ಇವುಗಳಲ್ಲಿ ಕೆಲವು ಮಾರುಕಟ್ಟೆಗಳ ಮಳಿಗೆಗಳನ್ನು ಬಹಳ ಹಿಂದೆ ಹಂಚಿಕೆ ಮಾಡಲಾಗಿದ್ದು, ನಿಯಾಮವಳಿಗಳ ಮೇರೆಗೆ ಪ್ರತಿ ಮಳಿಗೆ ಹಂಚಿಕೆದಾರರು 11 ತಿಂಗಳಿಗೊಮ್ಮೆ ಪರವಾನಗಿ ಕರಾರು ಪತ್ರವನ್ನು ನವೀಕರಿಸಿಕೊಳ್ಳ ಬೇಕಾಗಿದ್ದು ಬಹಳಷ್ಟು ಮಳಿಗೆಗಳ ಕರಾರು ಪತ್ರ ನವೀಕರಣವಾಗಿರುವುದಿಲ್ಲ. ಇದರಿಂದ ಪ್ರತಿ ನವೀಕರಣ ಸಮಯದಲ್ಲಿ ಪರವಾನಗಿ ಶುಲ್ಕವನ್ನು ಹೆಚ್ಚಿಸಲು ಸಾಧ್ಯವಾಗದೆ ಹಳೆ ಪರವಾನಗಿ ಶುಲ್ಕವನ್ನೇ ಪಾವತಿಸಿಕೊಳ್ಳುತ್ತಿರುವುದರಿಂದ ಪಾಲಿಕೆ ಬೊಕ್ಕಸಕ್ಕೆ ಅಪಾರ ಆರ್ಥಿಕ ನಷ್ಟ ಉಂಟಾಗುತ್ತಿದೆ.

ಮುಂದುವರೆದಂತೆ ಕರಾರುಪತ್ರ ನವೀಕರಣ ಮಾಡಿದ್ದಲ್ಲಿ ಮಳಿಗೆಗಳಲ್ಲಿ ಮೂಲ ಹಂಚಿಕೆದಾರರೇ ವ್ಯಾಪಾರ ನಡೆಸುತ್ತಿರುವರೇ ಅಥವಾ ಪರಭಾರೆ ಆಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಬಹುದಾಗಿದ್ದು, ಇದರಿಂದ ಅನಧಿಕೃತ ವ್ಯಾಪಾಸ್ಥರನ್ನು ತಡೆಗಟ್ಟಬಹುದಾಗಿದೆ.

ಮೇಲ್ಕಂಡ ವರದಿಯನ್ನು ಅವಗಾಹನೆಗೆ ಇರಿಸಿ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 221 ಜಿಇಎಲ್ 2009, ದಿನಾಂಕ:26-10-2009ರ ಅನ್ವಯ ಪರಿಷ್ಕರಣೆ ಮಾಡಿ ಕರಾರು ಪತ್ರ ನವೀಕರಣ ಸಮಯದಲ್ಲಿ ಪರಿಷ್ಕರಿಸಿದ ದರದ ಮೇಲೆ ಕನಿಷ್ಟ 10% ಪರವಾನಗಿ ಶುಲ್ಕವನ್ನು ಹೆಚ್ಚಿಸಬಹುದಾಗಿದೆ. ಅಲ್ಲದೇ ನವೀಕರಣ ಸಮಯದಲ್ಲಿ ಬಾಕಿ ಇರುವ ಪರವಾನಗಿ ಶುಲ್ಕ ಪಾವತಿಯನ್ನು ಕಡ್ಡಾಯಗೊಳಿಸಿದ್ದಲ್ಲಿ ಪಾಲಿಕೆ ಬಾಕಿ ಇರುವ ಕೋಟ್ಯಾಂತರ ರೂಪಾಯಿಗಳ ಆದಾಯ ಉಂಟಾಗುತ್ತದೆ.

ಇನ್ನುಳಿದಂತೆ ಹಲವಾರು ಮಳಿಗೆಗಳಲ್ಲಿ ಮೂಲ ಹಂಚಿಕೆದಾರರ ಬದಲಿಗೆ ಅವರ ವಾರಸುದಾರರು ಅಥವಾ ಪಾಲುದಾರಿಕೆ ಕರಾರು ಪತ್ರದ ಆಧಾರದ ಮೇಲೆ ಮೂಲ ಹಂಚಿಕೆದಾರರ ಬದಲಿಗೆ ಪಾಲುದಾರರು ವ್ಯಾಪಾರ ನಡೆಸುತ್ತಿದ್ದು, ಇವರಿಗೆ ಪರವಾನಗಿ ನವೀಕರಣ ಮಾಡಲು ನಿಯಮಾವಳಿಗಳಲ್ಲಿ ಅವಕಾಶ ಇರುವುದಿಲ್ಲ ಹಾಗೂ ಬಾಕಿ ವಸೂಲಾತಿಗೆ ಕೆ.ಎಂ.ಸಿ ಕಾಯ್ದೆ 1976ರ ಕಲಂ 470 ಮತ್ತು 370ರ ಮೇರೆಗೆ ಮೂಲ ಹಂಚಿಕೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ವಸೂಲಾತಿಗಾಗಿ ಕ್ರಮ ಜರುಗಿಸಬೇಕಾಗಿದ್ದು, ವಾರಸುದಾರರಿಗೆ ಅಥವಾ ಪಾಲುದಾರರಿಗೆ ನೋಟೀಸ್ ನೀಡಲು ಅವಕಾಶ ಇರುವುದಿಲ್ಲ ಹಾಗೂ ಇದರಿಂದ ಪಾಲಿಕೆ ಅನಾವಶ್ಯಕ ಕಾನೂನು ತೊಡಕುಗಳನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಗುವ ಸಾಧ್ಯತೆಗಳಿರುತ್ತದೆ. ಈ ಸಮಸ್ಯೆಗಳನ್ನು ನಿವಾರಿಸಬೇಕಾದ್ದಲ್ಲಿ ವಾರಸುದಾರರು ಅಥವಾ ಪಾಲುದಾರರನ್ನು ಮೂಲ ಹಂಚಿಕೆದಾರರನ್ನಾಗಿ ಕ್ರಮಬದ್ಧಗೊಳಿಸಬೇಕಾಗುತ್ತದೆ. ಈ ಹಿಂದೆ 2013ರಲ್ಲಿ ಮಲ್ಲೇಶ್ವರಂ ಮಾರುಕಟ್ಟೆ ಪುನರ್ ನಿರ್ಮಾಣ ಸಮಯದಲ್ಲಿ 48 ಜನ ವಾರಸುದಾರರಿಗೆ/ಪಾಲುದಾರರಿಗೆ ಮೂಲ ಹಂಚಿಕೆದಾರರಿಗೆ ಸರಿಸಮವಾಗಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿಕೊಡುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಡಬ್ಲ್ಯೂಪಿ ಸಂಖ್ಯೆ:13410-13450, ಡಬ್ಲ್ಯೂಪಿ ಸಂಖ್ಯೆ: 13191-13194, ಡಬ್ಲ್ಯೂಪಿ ಸಂಖ್ಯೆ: 13410-13415/2013. ದಿನಾಂಕ:28-6-2013ರಲ್ಲಿ ಆದೇಶ ಜಾರಿ ಮಾಡಿರುತ್ತದೆ ಹಾಗೂ ಜಾಹಿರಾತು ಬೈಲಾ-2006ರ ಕರಡು ತಿದ್ದುಪಡಿಯಲ್ಲಿ ಒಬ್ಬ ಅಧಿಕೃತ ಜಾಹಿರಾತುದಾರರ ಫಲಕದ ಪರವಾನಗಿಯನ್ನು ರೂ.50000/- ವರ್ಗಾವಣೆ ಶುಲ್ಕ ಪಾವತಿಸಿಕೊಂಡು ಬೇರೆ ಜಾಹಿರಾತುದಾರರಿಗೆ ಪರವಾನಗಿ ವರ್ಗಾವಣೆ ಪ್ರಸ್ತಾವನೆಗೆ ಘನ ಸರ್ಕಾರವು ದಿ: 9-7-2013 ರ ಆದೇಶದ ಸಂಖ್ಯೆ: ನಇ362 ಎಂಎನ್‌ಯು 2010ರಲ್ಲಿ ಅನುಮೋದನೆ ನೀಡಿರುತ್ತದೆ. ಈ ಆದೇಶಗಳ ಹಿನ್ನೆಲೆಯಲ್ಲಿ ಮಳಿಗೆಗೆ ಬಾಕಿ ಪರವಾನಗಿ ಶುಲ್ಕ ಪಾವತಿ ಹಾಗೂ ವರ್ಗಾವಣೆ ಶುಲ್ಕ ರೂ.50,000/-ದ ಸಹಿತ ಅರ್ಜಿ

.........4

ಸಲ್ಲಿಸಿಕೊಂಡು ನೂತನವಾಗಿ ಹಂಚಿಕೆ ಮಾಡಿ 12 ತಿಂಗಳ ಮುಂಗಡ ಹಾಗೂ 6 ತಿಂಗಳ ಭದ್ರತಾ ಶುಲ್ಕ ಪಾವತಿಸಿಕೊಳ್ಳಬಹುದಾಗಿದೆ. ಇದರಿಂದ ಪಾಲಿಕೆಗೆ ಉಂಟಾಗಬಹುದಾದ ಅನಾವಶ್ಯಕ ಕಾನೂನು ತೊಡಕುಗಳನ್ನು ನಿವಾರಿಸಬಹುದು. ಪಾಲಿಕೆ ಬೊಕ್ಕಸಕ್ಕೆ ಒಂದೇ ಬಾರಿಗೆ ಅಪಾರ ಆದಾಯ ಉಂಟಾಗುವುದಲ್ಲದೇ ಮಾರುಕಟ್ಟೆ ಕಛೇರಿಗಳ ದಾಖಲಾತಿಗಳನ್ನು ಕ್ರಮಬದ್ಧಗೊಳಿಸಲು ಅನುವು ಮಾಡಿಕೊಟ್ಟಂತಾಗುತ್ತದೆ.

ಮೇಲ್ಕಂಡ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-01-2014ರ ಟಿಪ್ಪಣಿ.

1) ಬಾಕಿ ಇರುವ ಪೂರ್ಣ ಮೊತ್ತವನ್ನು ವರ್ಗಾವಣೆ ಅರ್ಜಿಯ ಜೊತೆಯಲ್ಲಿ ಮುಂಗಡವಾಗಿ ಒಂದೇ ಕಂತಿನಲ್ಲಿ ಡಿ.ಡಿ.ಮುಖಾಂತರ ಪಾವತಿಸುವ ಹಾಗೂ ಸರ್ಕಾರದ ಆದೇಶದ ಸಂಖ್ಯೆ: ಯುಡಿಡಿ 221 ಜಿಇಎಲ್ 2009, ದಿನಾಂಕ:26-10-2009ರ ಅನ್ವಯ ಪರಿಷ್ಕರಿಸಿದ ದರದ ಪರವಾನಗಿ ಶುಲ್ಕವನ್ನು ಶೇ.10% ಹೆಚ್ಚಿಸುವ ಷರತ್ತಿಗೊಳಪಡಿಸಿ ಮೂಲ ಹಂಚಿಕೆದಾರರ ಪರವಾನಗಿಯನ್ನು 11(ಹನ್ನೊಂದು)ತಿಂಗಳ ಅವಧಿಗೆ ನವೀಕರಿಸಲು ಅನುಮೋದನೆ.

2) ಬಾಕಿ ಇರುವ ಪೂರ್ಣ ಮೊತ್ತವನ್ನು ವರ್ಗಾವಣೆ ಅರ್ಜಿಯ ಜೊತೆಯಲ್ಲಿ ಮುಂಗಡವಾಗಿ ಒಂದೇ ಕಂತಿನಲ್ಲಿ ಡಿ.ಡಿ ಮುಖಾಂತರ ಪಾವತಿಸುವ ಹಾಗೂ ಸರ್ಕಾರದ ಆದೇಶದ ಸಂಖ್ಯೆ: ಯುಡಿಡಿ 221 ಜಿಇಎಲ್ 2009, ದಿನಾಂಕ:26-10-2009ರ ಅನ್ವಯ ಪರಿಷ್ಕರಿಸಿದ ದರದ ಪರವಾನಗಿ ಶುಲ್ಕವನ್ನು ಶೇ.10% ಹೆಚ್ಚಿಸುವ, ಮಳಿಗೆ ಪರವಾನಗಿ ವರ್ಗಾವಣೆ ಕೋರುವ ಅರ್ಜಿಯ ಜೊತೆ ರೂ.5000/-ವರ್ಗಾವಣೆ ಶುಲ್ಕ ಮತ್ತು 12 ತಿಂಗಳ ಮುಂಗಡ ಹಣ ಹಾಗೂ 6 ತಿಂಗಳ ಭದ್ರತಾ ಠೇವಣಿ ಮೊತ್ತ ಪಾವತಿಸುವ ಷರತ್ತಿನ ಮೇಲೆ ವಾರಸುದಾರರ/ಪಾಲುದಾರರ ಹೆಸರಿಗೆ ನೂತನವಾಗಿ ಸದರಿ ಮಳಿಗೆಯನ್ನು 11 (ಹನ್ನೊಂದು) ತಿಂಗಳ ಅವಧಿಗೆ ಹಂಚಿಕೆ ಮಾಡಿ ಸಕ್ರಮಗೊಳಿಸುವ ಪ್ರಸ್ತಾವನೆಗೆ ಪಾಲಿಕೆಯ ಆರ್ಥಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಅನುಮೋದನೆ.

ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸರ್ಕಾರದ ಸುತ್ತೋಲೆ ಸಂಖ್ಯೆ: ಯುಡಿಡಿ. 221 ಜಿಇಎಲ್ 2009, ದಿನಾಂಕ:26-10-2009ನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪರವಾನಗಿ ಶುಲ್ಕವನ್ನು "ಗುತ್ತಿಗೆ ಮೊತ್ತ" ಎಂದು ಪುನರ್ ನಾಮಕರಣ ಮಾಡಿ ಮೂಲ ಹಂಚಿಕೆದಾರರಿಗೆ ನೂತನವಾಗಿ ಗುತ್ತಿಗೆ ಕರಾರು ಪತ್ರವನ್ನು ನೊಂದಾಯಿಸಿ, ಸರ್ಕಾರದ ಆದೇಶದ ಮೇರೆಗೆ, ಎಸ್.ಆರ್. ಮತ್ತು ಗೈಡೆನ್ಸ್ ವ್ಯಾಲ್ಯೂ ಆಧಾರದ ಮೇಲೆ ನಿಗಧಿಪಡಿಸಬೇಕಾದ ಗುತ್ತಿಗೆ ಮೊತ್ತವನ್ನು ಜಯನಗರ ವಾಣಿಜ್ಯ ಸಂಕೀರ್ಣ ಮತ್ತು ನೇತಾಜಿ ಸುಭಾಷ್ ಚಂದ್ರಬೋಸ್ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ 2006-07ರಲ್ಲಿ ಈಗಾಗಲೇ ಪರಿಷ್ಕೃತ ದರದಲ್ಲಿ ಪರವಾನಗಿ ಶುಲ್ಕ ನಿಗಧಿಪಡಿಸಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಈ ಎರಡು ಸಂಕೀರ್ಣದ ಮಳಿಗೆಗಳಿಗೆ ಮಾತ್ರ ಮುಂದುವರೆಸಿ, ಇನ್ನುಳಿದ ಮಾರುಕಟ್ಟೆಗಳ ಮಳಿಗೆಗಳಿಗೆ ಬಹಳ ಹಿಂದಿನಿಂದಲೂ ದರ ಪರಿಷ್ಕರಣೆ ಆಗಿಲ್ಲದೆ, ಎಸ್.ಆರ್ ಮತ್ತು ಗೈಡೆನ್ಸ್ ವ್ಯಾಲ್ಯೂ ದರದಲ್ಲಿ ನಿಗಧಿಪಡಿಸಿದ್ದಲ್ಲಿ ಮಳಿಗೆದಾರರಿಗೆ ಏಕಾಏಕಿ ಆರ್ಥಿಕ ಹೊರೆ ಉಂಟಾಗುವುದನ್ನು ಪರಿಗಣನೆಗೆ ತೆಗೆದುಕೊಂಡು ಪರಿಷ್ಕೃತ ದರದ ಶೇಕಡ. 25% ರಷ್ಟು ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದು ಹಾಗೂ ವಾರಸುದಾರರ/ಪಾಲುದಾರರ ಹೆಸರಿನಲ್ಲಿ ವರ್ಗಾವಣೆ ಮಾಡುವ ಸಂದರ್ಭಗಳಲ್ಲಿ ಹಿಂದಿನ ಹಂಚಿಕೆದಾರರ ಬಾಕಿ ಮೊತ್ತವನ್ನು ಮುಂಗಡವಾಗಿ ಒಂದೇ ಕಂತಿನಲ್ಲಿ ಪಾವತಿಸಿಕೊಂಡು ಪರಿಷ್ಕೃತ ದರದಲ್ಲಿ 12 ತಿಂಗಳ ಹಿಂದಿರುಗಿಸುವ "ಭದ್ರತಾ ಠೇವಣಿ" ಮತ್ತು ಹಿಂದಿರುಗಿಸದ 6 ತಿಂಗಳ ವರ್ಗಾವಣೆ ಶುಲ್ಕ ಮತ್ತು ಒಂದು ತಿಂಗಳ ಮುಂಗಡ ಮೊತ್ತವನ್ನು ಪಾವತಿಸಿಕೊಳ್ಳುವುದು ಹಾಗೂ ಎಲ್ಲಾ ವರ್ಗಾವಣೆಗಳ ಪ್ರಸ್ತಾವನೆಗೆ ಮಾರುಕಟ್ಟೆ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಕ್ರಮವಹಿಸತಕ್ಕದ್ದು.

ಮೇಲ್ಕಂಡ ರೀತಿಯಲ್ಲಿ ನೊಂದಾಯಿಸಲಾದ ಎಲ್ಲಾ ಮಳಿಗೆಗಳ ಗುತ್ತಿಗೆ ಕರಾರು ಪತ್ರವನ್ನು ಪ್ರತಿ 11 ತಿಂಗಳಿಗೆ ನವೀಕರಿಸಿ, ನಿಗಧಿತ ಪರಿಷ್ಕೃತ ಶುಲ್ಕದ ಶೇಕಡ 5ರಷ್ಟನ್ನು ಹೆಚ್ಚಿಸುವುದು ಎಂದು ಜಂಟಿ ಸಮಿತಿಯ ಸಭೆಯು ನಿರ್ಣಯಿಸಿ, ಸದರಿ ವಿಷಯದ ಬಗ್ಗೆ ನಿರ್ಣಯವನ್ನು ಅನುಮೋದನೆಗಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುವ ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿನಾಂಕ:04-02-2014ರ ಜಂಟಿ ಸಮಿತಿಯ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮಾರುಕಟ್ಟೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿನಾಂಕ:04-02-2014ರ ಜಂಟಿ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಮಾರುಕಟ್ಟೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ದಿನಾಂಕ:04-02-2014ರ ಜಂಟಿ ನಿರ್ಣಯವನ್ನು ಒಪ್ಪುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 22 (217)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೆ.ಆರ್.ರಸ್ತೆಯು ಒಂದು ಪ್ರಮುಖ ರಸ್ತೆಯಾಗಿದ್ದು, ಸದರಿ ರಸ್ತೆಯ ಎರಡೂ ಬದಿಗಳಲ್ಲಿನ ಚರಂಡಿಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆ ನಿಂತು ರಸ್ತೆಯು ಹಾಳಾಗಿದ್ದು ಹಾಗೂ ಪಾದಚಾರಿ ಮಾರ್ಗವು ದುಸ್ಥಿತಿಯಲ್ಲಿರುತ್ತದೆ. ಪಾದಚಾರಿಗಳಿಗೆ ಹಾಗೂ ವಾಹನ ಸವಾರರಿಗೆ ತುಂಬಾ ಅಡಚಣೆಯಾಗುತ್ತಿರುತ್ತದೆ. ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ತುಂಬಾ ತೀವ್ರವಾಗಿದ್ದು, ಸಾರ್ವಜನಿಕರು ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಸದರಿ ರಸ್ತೆಯ ಪಾದಚಾರಿ ಮಾರ್ಗವನ್ನು, ಚರಂಡಿಗಳನ್ನು ಹಾಗೂ ರಸ್ತೆಯನ್ನು ದುರಸ್ಥಿಗೊಳಿಸುವ ಅವಶ್ಯಕತೆ ಇದ್ದು, ತುರ್ತಾಗಿ ಡಾಂಬರೀಕರಣ ಕೈಗೊಳ್ಳಲು, Improvements and Asphalting to K.R.Road from Netkallappa Circle to 27th cross (Hunsemara stop) ಕಾಮಗಾರಿಗೆ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಕಾರ್ಯಪಾಲಕ ಅಭಿಯಂತರರುವರು (ರಸ್ತೆ ಮೂಲ ಸೌಕರ್ಯ-ದಕ್ಷಿಣ) ರವರು ರೂ.350.00 ಲಕ್ಷಗಳ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಆಯುಕ್ತರಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಮತ್ತು ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.350.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 14-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (218)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ವ್ಯಾಪ್ತಿಯಲ್ಲಿ Remodelling of storm water drains - Improvements to bed from Chainage 400m to 1650m and Chainlink fencing from Ch:400m to 1400m of Secondary Storm Water Drain - V122 (drain starting from Nagendra Block to Timberyard layout i.e., Ch 0m to 1650m) in Vrushabhavathi valley, Package-ರ ಕಾಮಗಾರಿಗೆ Revised Detailed Project Report (RDPR) ಅಡಿಯಲ್ಲಿ ಕೈಗೊಂಡಿದ್ದು, ಸದರಿ ಕಾಮಗಾರಿಗಳ ಅಂದಾಜನ್ನು CSMC ಯು ದಿನಾಂಕ:15-03-2011 ರಂದು ನಡೆದ 95ನೇ ಸಭೆಯಲ್ಲಿ ಬೃಹತ್ ನೀರುಗಾಲುವೆಯ ಆರ್‌ಡಿಪಿಆರ್ ಗಾಗಿ ರೂ.925.38 ಕೋಟಿಗಳ ಮೊತ್ತಕ್ಕೆ ಅನುಮೋದನೆ ನೀಡಿದ್ದ ಮೇರೆಗೆ, ಪ್ರಸ್ತುತ ರೂ.347.38 ಕೋಟಿಗಳ ಗಾತ್ರದ ಕಾಮಗಾರಿಗಳಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.256.00 ಲಕ್ಷಗಳ ಅಂದಾಜಿಗೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆಸಿ ಪ್ರಸ್ತಾವನೆಯನ್ನು ಸಿದ್ಧಪಡಿಸಿಕೊಳ್ಳಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ e-procurement ಅಡಿಯಲ್ಲಿ ಕಾರ್ಯಪಾಲಕ ಅಭಿಯಂತರರು (ದಕ್ಷಿಣ ವಲಯ, ಬೃಹತ್ ನೀರು ಗಾಲುವೆ) ಮೂರು ಬಾರಿ ಟೆಂಡರ್ ಕರೆದಿದ್ದು, ಮೂರನೇ ಕರೆಯ ಟೆಂಡರ್‌ನಲ್ಲಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿ ಸಿಂಧುತ್ವ ಹೊಂದಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ತಾಂತ್ರಿಕ ಬಿಡ್ ಅನ್ನು ದಿನಾಂಕ:26-08-2013 ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹರಾದ ಮೇರೆಗೆ ಮುಖ್ಯ ಅಭಿಯಂತರರಿಂದ ಅನುಮೋದನೆ ಪಡೆದು ಸದರಿಯವರ ಆರ್ಥಿಕ ಬಿಡ್ಡನ್ನು ತೆರೆಯಲಾಗಿದ್ದು, ಗುತ್ತಿಗೆದಾರರಾದ ಶ್ರೀ. ಬಿ.ಎನ್.ಸೋಮಶೇಖರ್ ರವರು ಕಡಿಮೆ ದರಗಳನ್ನು ನಮೂದಿಸಿ L1 ಆಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2010-11ನೇ ಸಾಲಿನ ದರಪಟ್ಟಿಯಂತೆ) | ರೂ.2,50,24,031.25 |
| 2 | ಬಿಡ್ದುದಾರರಾದ ಶ್ರೀ. ಬಿ.ಎನ್.ಸೋಮಶೇಖರ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,24,70,965.00 |
| 3 | ಅಂದಾಜು ಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ | ಶೇ.29.76% ಹೆಚ್ಚುವರಿ |
| 4 | 2013-14ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ | ಶೇ.0.76% ಹೆಚ್ಚುವರಿ |

ಶ್ರೀ. ಬಿ.ಎನ್.ಸೋಮಶೇಖರ್, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.29.76% ರಷ್ಟು ಹೆಚ್ಚುವರಿ ಇದ್ದು, 2013-14ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.076%ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ. ಮೇಲಿನ ವಿಷಯದ ಹಿನ್ನಲೆಯಲ್ಲಿ, ಶ್ರೀ. ಬಿ.ಎನ್.ಸೋಮಶೇಖರ್, ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.3,24,70,965.00 ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:25-11-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ. ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 14-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 24 (83)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:67ರ ನಾಗಪುರ ವಿಭಾಗದ ವ್ಯಾಪ್ತಿಯಲ್ಲಿರುವ ಕಮಲಮ್ಮ ಗುಡಿ ಆಟದ ಮೈದಾನಕ್ಕೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ "ರಾಣಿ ಅಬ್ಬಕ್ಕದೇವಿ ಆಟದ ಮೈದಾನ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ:30-01-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:384/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:02-08-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ ಮೂವತ್ತು ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:67ರ ನಾಗಪುರ ವಿಭಾಗದ ವ್ಯಾಪ್ತಿಯಲ್ಲಿರುವ ಕಮಲಮ್ಮ ಗುಡಿ ಆಟದ ಮೈದಾನಕ್ಕೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ "ರಾಣಿ ಅಬ್ಬಕ್ಕದೇವಿ ಆಟದ ಮೈದಾನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-10-2013ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂ.67ರ ನಾಗಪುರ ವಿಭಾಗದ ವ್ಯಾಪ್ತಿಯಲ್ಲಿರುವ ಕಮಲಮ್ಮ ಗುಂಡಿ ಆಟದ ಮೈದಾನಕ್ಕೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ "ರಾಣಿ ಅಬ್ಬಕ್ಕದೇವಿ ಆಟದ ಮೈದಾನ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ ಸಂ.67ರ ನಾಗಪುರ ವಿಭಾಗದ ವ್ಯಾಪ್ತಿಯಲ್ಲಿರುವ ಕಮಲಮ್ಮ ಗುಂಡಿ ಆಟದ ಮೈದಾನಕ್ಕೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ "ರಾಣಿ ಅಬ್ಬಕ್ಕದೇವಿ ಆಟದ ಮೈದಾನ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (219)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶದಂತೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಬಗ್ಗೆ ಹೊರಡಿಸಿರುವ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಅಧಿಸೂಚನೆ ರೀತ್ಯಾ ರಚಿಸಿರುವ ನಿಯಮಗಳು ಈ ಕೆಳಕಂಡಂತಿರುತ್ತದೆ

### ನಿಯಮಗಳು

1. ಶೀರ್ಷಿಕೆ, ಪ್ರಾರಂಭ ಮತ್ತು ಅನ್ವಯ:- (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ವಾಹನ ಚಾಲಕರು, ಪ್ರಾಥಮಿಕ ಶಾಲಾ ಶಿಕ್ಷಕರು, ಪೋಲೀಸ್ ಕಾನ್ಸ್‌ಟೇಬಲ್‌ಗಳು, ನರ್ಸ್‌ಗಳು, ರೇಷ್ಮೆ ಪ್ರದರ್ಶಕರು, ಅರಣ್ಯ ರಕ್ಷಕರು, ಅಬಕಾರಿ ರಕ್ಷಕರು, ಆರೋಗ್ಯ ಕಾರ್ಯಕರ್ತರು, ಅರಣ್ಯ ವೀಕ್ಷಕರು, ಬೇಲಿಫ್ಸ್ ಮತ್ತು ಪ್ರೋಸಸ್ ಸರ್ವರ್‌ಗಳು ಮತ್ತು ಡಿ ಗುಂಪಿನ ಹುದ್ದೆಗಳು ಈ ಹುದ್ದೆಗಳಿಗೆ ಆಯ್ಕೆಗೊಳ್ಳುವ ಅಥವಾ ಈ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳಿಗೆ ಹಾಗೂ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ಈ ನಿಯಮಗಳು ಅನ್ವಯವಾಗತಕ್ಕದ್ದಲ್ಲ.

2. ನೇರ ನೇಮಕಾತಿಗೆ ಆಯ್ಕೆ ಪ್ರಕ್ರಿಯೆ:- ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ14)ರಡಿಯಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಿರುವ ಅಥವಾ ರಚಿಸಲಾಗಿದೆ ಎಂದು ಭಾವಿಸಲಾದ, ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಯಾವುದೇ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯು, ನಿಯಮ 1ರ ಉಪನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊರತುಪಡಿಸಿ, ಸರ್ಕಾರವು ನಿಗಧಿಪಡಿಸಿರುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಶೇಕಡ 60 ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು ಆಯ್ಕೆಯಾದ ಮೂರು ತಿಂಗಳೊಳಗೆ ಪಾಸು ಮಾಡದಿದ್ದಲ್ಲಿ, ಅಂತಹ ಅಭ್ಯರ್ಥಿಯನ್ನು ನೇಮಕ ಮಾಡತಕ್ಕದ್ದಲ್ಲ. ಅಂತಹ ಪರೀಕ್ಷೆಯನ್ನು ಸರ್ಕಾರ ಅಥವಾ ಅದು ಅನುಮೋದಿಸಿದ ಏಜೆನ್ಸಿಯು ನಡೆಸತಕ್ಕದ್ದು.

3. ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಅನ್ವಯಿಸುವುದು:-1. ಪ್ರತಿಯೊಬ್ಬ ಸರ್ಕಾರಿ ನೌಕರನು, ನಿಯಮ 1ರ ಉಪ ನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳಲ್ಲಿರುವವರನ್ನು ಹೊರತುಪಡಿಸಿ, ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಹಾಜರಾಗಿ ಶೇಕಡ 35ಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಗಳಿಸಿ ಪಾಸು ಮಾಡುವುದು ಕಡ್ಡಾಯ ಮಾಡತಕ್ಕದ್ದು. ಈ ಪರೀಕ್ಷೆಯನ್ನು ಸರ್ಕಾರ ಅಥವಾ ಅದು ಅನುಮೋದಿಸಿದ ಏಜೆನ್ಸಿಯು ನಡೆಸತಕ್ಕದ್ದು. ಯಾವುದೇ ಸರ್ಕಾರಿ ನೌಕರನು, ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಪರೀಕ್ಷೆಯಲ್ಲಿ ಉತ್ತೀರ್ಣನಾಗದೇ ಇದ್ದಲ್ಲಿ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲ. ಯಾವುದೇ ಸರ್ಕಾರಿ ನೌಕರನು ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಯೊಳಗೆ ಪರೀಕ್ಷೆಯಲ್ಲಿ ಉತ್ತೀರ್ಣನಾಗದೇ ಇದ್ದಲ್ಲಿ ವಾರ್ಷಿಕ ವೇತನ ಬಡ್ತಿ ಗಳಿಸಲು ಅರ್ಹನಾಗತಕ್ಕದ್ದಲ್ಲ.

..........................2

ಪರಂತು, ಈ ಉಪ-ನಿಯಮದಲ್ಲಿರುವುದಾವುದೂ, ಈ ನಿಯಮಗಳ ಪ್ರಾರಂಭದ ದಿನಾಂಕದಂದು 50 ವರ್ಷಗಳ ವಯಸ್ಸಾಗಿರುವ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.

(2) ಯಾವುದೇ ವಾಹನ ಚಾಲಕ ಅಥವಾ ಡಿ ಸಮೂಹದ ನೌಕರನು, ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣನಾಗದ ಹೊರತು, ಕಿರಿಯ ಸಹಾಯಕ/ದ್ವಿತೀಯ ದರ್ಜೆ ಸಹಾಯಕ ಅಥವಾ ಸಮಾನ ಅಥವಾ ಉನ್ನತ ಹುದ್ದೆಯ ವೃಂದಕ್ಕೆ ವರ್ಗಾವಣೆಗೆ ಅಥವಾ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲ.

(3) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತಹ 50 ವರ್ಷ ವಯಸ್ಸು ದಾಟಿದ ಸರ್ಕಾರಿ ನೌಕರರನ್ನೂ ಒಳಗೊಂಡಂತೆ ಸೇವಾನಿರತ ನೌಕರರು ಸರ್ಕಾರವು ಅಥವಾ ಸರ್ಕಾರದಿಂದ ಅನುಮೋದಿತ ಏಜೆನ್ಸಿಯು ನೀಡುವ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು ಅವರುಗಳಿಗೆ ರೂ. 5,000/-ಗಳ (ಐದು ಸಾವಿರ ರೂಪಾಯಿಗಳು) ಪ್ರೋತ್ಸಾಹ ಧನವನ್ನು ಸಂದಾಯ ಮಾಡತಕ್ಕದ್ದು.

(4) ಯಾವುದೇ ವ್ಯಕ್ತಿಯು ನೇರ ನೇಮಕಾತಿ ಸಮಯದಲ್ಲಾಗಲೀ ಅಥವಾ ಸೇವಾನಿರತ ಅಭ್ಯರ್ಥಿಯಾಗಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಒಂದು ಸಲ ಉತ್ತೀರ್ಣನಾದಲ್ಲಿ, ಈ ನಿಯಮದಡಿ ಯಾವುದೇ ಉದ್ದೇಶಕ್ಕಾಗಿ ಮತ್ತೊಮ್ಮೆ ಇದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ಅವಶ್ಯಕತೆಯಿಲ್ಲ.

(5) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಪಠ್ಯಕ್ರಮ:- ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಪಠ್ಯಕ್ರಮವು, ಸರ್ಕಾರವು ಅಧಿಸೂಚಿಸಬಹುದಾದಂತ ಸಂಖ್ಯೆಯ ಪತ್ರಿಕೆಗಳು, ಅಂತಹ ಪರೀಕ್ಷೆ ಪತ್ರಿಕೆಗೆ ಅವಧಿ, ಗರಿಷ್ಟ ಅಂಕಗಳನ್ನು ಒಳಗೊಂಡಿರತಕ್ಕದ್ದು. ಪಠ್ಯಕ್ರಮವನ್ನು ವೆಬ್‌ಸೈಟ್ ನಲ್ಲಿಯೂ ಸಹ ಪ್ರಕಟಿಸತಕ್ಕದ್ದು.

ಈ ಸರ್ಕಾರದ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ 21.10.2013ರಂದು ನಡೆದ ಸಭೆಯ ನಡವಳಿಕೆಯ ವಿಷಯ ಸಂಖ್ಯೆ ಸಿಅಸುಸ್ಥಾಸ/07/2013.14 ರನ್ವಯ ಮಾನ್ಯ ಆಯುಕ್ತರವರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಮುಂದುವರೆದು ಸರ್ಕಾರವು ಅಧಿಸೂಚನೆ ಹೊರಡಿಸಿ ಕರ್ನಾಟಕ ಸಿವಿಲ್ ಸೇವಾ(ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು,2012 ಇದನ್ನು ತಿದ್ದುಪಡಿ ಮಾಡಿ ಈ ಕೆಳಕಂಡಂತೆ ನಿಯಮಗಳನ್ನು ರಚಿಸಿರುತ್ತದೆ.

1. <u>ಶೀರ್ಷಿಕೆ ಮತ್ತು ಪ್ರಾರಂಭ</u> (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) (ತಿದ್ದುಪಡಿ) ನಿಯಮಗಳು,2012 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ದಿನಾಂಕ 22.03.2012ರಿಂದ (ಮುಖ್ಯ ನಿಯಮಗಳು ಜಾರಿಗೆ ಬಂದ ದಿನಾಂಕ) ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

2. <u>ನಿಯಮ 2ಕ್ಕೆ ತಿದ್ದುಪಡಿ:</u> ಕರ್ನಾಟಕ ಸಿವಿಲ್ ಸೇವಾ(ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು,2012ರ ನಿಯಮ 2 ರ ಬದಲು ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು ಅಂದರೆ:-

"(2) <u>ನೇರ ನೇಮಕಾತಿಯಾದ ಅಭ್ಯರ್ಥಿಗಳಿಗೆ ಅನ್ವಯಿಸುವಿಕೆ :</u> ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು,1977 ಅಥವಾ ವಿಶೇಷವಾಗಿ ರಚಿಸಲಾದ ನೇಮಕಾತಿ ನಿಯಮಗಳು ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978( 1990ರ ಕರ್ನಾಟಕ ಅಧಿನಿಯಮ 14)ರಡಿಯಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ರಚಿಸಲಾದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಈ

............................3

ನಿಯಮಗಳ ನಿಯಮ1ರ ಉಪನಿಯಮ(3)ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಹುದ್ದೆಗಳನ್ನು ಹೊರತುಪಡಿಸಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿಯ ಮುಖಾಂತರ ನೇಮಕಾತಿ ಹೊಂದಿದ ನೌಕರನು/ಳು ಸರ್ಕಾರ ನಿಗಧಿಪಡಿಸಬಹುದಾದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅವರ ಪರಿವೀಕ್ಷಣಾವಧಿಯಲ್ಲಿ ಪಾಸು ಮಾಡತಕ್ಕದ್ದು ಮತ್ತು ಆ ಪರೀಕ್ಷೆಯನ್ನು ಪಾಸು ಮಾಡದ ಹೊರತು ಅವರ ಪರಿವೀಕ್ಷಣಾವಧಿಯನ್ನು ಘೋಷಿಸತಕ್ಕದ್ದಲ್ಲ. ಈ ಪರೀಕ್ಷೆಯನ್ನು ಸರ್ಕಾರವು ಅಥವಾ ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆಯು ನಡೆಸತಕ್ಕದ್ದು."

ಆದುದರಿಂದ, ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-12-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

C

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (220)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ. ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಡವಳಿಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ತಿದ್ದುಪಡಿ) ನಿಯಮಗಳು 2012ನ್ನು ಈ ಕೆಳಕಂಡ ಪ್ರಸ್ತಾವನೆ ಮತ್ತು ಆದೇಶದಂತೆ ರದ್ದುಗೊಳಿಸಿರುತ್ತದೆ.

<u>ಪ್ರಸ್ತಾವನೆ:</u>

ಸರ್ಕಾರಿ ಸೇವೆಯಲ್ಲಿರುವ ನೌಕರರು ಮೃತರಾದಲ್ಲಿ ಅವರ ಅವಲಂಬಿತರಲ್ಲೊಬ್ಬರಿಗೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡುವ ಬಗ್ಗೆ ಕರ್ನಾಟಕ ಸಿವಿಲ್ ಸೇವೆ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು. 1996ನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ 12.09.96ರ ಅಧಿಸೂಚನೆಯ ಮೂಲಕ ಹೊರಡಿಸಲಾಗಿದೆ.

ಸರ್ಕಾರಿ ನೌಕರರು ಸಾರ್ವಜನಿಕ ಸೇವೆಯ ಕರ್ತವ್ಯದ ಮೇಲೆ ಇರುವಾಗ ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥರಾದ ಪ್ರಕರಣಗಳಲ್ಲಿ ಅವರ ಅವಲಂಬಿತರಿಗೆ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರದ ಆಧಾರದ ಮೇಲೆ ನೇಮಿಸಬಹುದೆಂದು ಸರ್ಕಾರವು ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011. ದಿನಾಂಕ 13.10.2011ರಲ್ಲಿ. ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 100 ಎಸ್‌ಸಿಎ 95 ದಿನಾಂಕ 12.09.96ರಲ್ಲಿ ಸೂಚಿಸಿರುವ ನಿಯಮಗಳಿಗೆ ತಿದ್ದುಪಡಿ ಮಾಡಲಾಯಿತು.

ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ಕ್ಕೆ ತಿದ್ದುಪಡಿ ಮಾಡಲು ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) (ತಿದ್ದುಪಡಿ) ಕರಡು ನಿಯಮಗಳು 2012ನ್ನು ದಿನಾಂಕ 27.12.2012ರ ಅಧಿಸೂಚನೆ ಸಂಖ್ಯೆ ಸಿಆಸುಇ 46 ಸೇಅನೇ 2012ರಲ್ಲಿ ಹೊರಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು, ಇದು ಇನ್ನೂ ಅಂತಿಮವಾಗಿಲ್ಲ.

ಸರ್ಕಾರಿ ನೌಕರರು ತಮ್ಮ ಹುದ್ದೆಗೆ ಸಂಬಂಧಿಸಿದ ಕರ್ತವ್ಯವನ್ನು ನಿರ್ವಹಿಸುವಾಗ ಸಂಭವಿಸುವ ಅಪಘಾತದಿಂದ ಅಥವಾ ಕ್ಷತಿಯಿಂದ ದೈಹಿಕವಾಗಿ ಅಥವಾ ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾದವರಿಗೆ ಪ್ರೋತ್ಸಾಹ ಅಥವಾ ರಿಯಾಯಿತಿ ನೀಡುವುದು 2011ರಂದು ಹೊರಡಿಸಿದ ತಿದ್ದುಪಡಿಯ ಉದ್ದೇಶವಾಗಿತ್ತು. ಈ ಅಸಮರ್ಥತೆಯ ಸಾರ್ವಜನಿಕ ಸೇವೆಯ ಮೇಲೆ ಅದರಲ್ಲೂ ಕರ್ತವ್ಯ ನಿರ್ವಹಿಸುವಾಗ ಸಂಭವಿಸುವ ಕಾರಣದಿಂದ ಉಂಟಾಗಿರಬೇಕು. ವಯಸ್ಸಿಗೆ ಅನುಗುಣವಾಗಿ ಬರುವ ಕಾಯಿಲೆಗಳಿಂದ/ಇತರೆ ಕಾಯಿಲೆಗಳಿಂದ ಕರ್ತವ್ಯದ ಮೇಲಿಲ್ಲದಿರುವಾಗ ಉಂಟಾಗುವ ಅಪಘಾತದಿಂದ ಉಂಟಾಗುವ ಅಸಮರ್ಥತೆಯ ಆಧಾರದ ಮೇಲೆ ಸರ್ಕಾರಿ ನೌಕರರ ಅವಲಂಬಿತರಿಗೆ ನೌಕರಿ ನೀಡುವುದು ಇದರ ಉದ್ದೇಶವಲ್ಲ. ನಕ್ಸಲ್ ಕಾರ್ಯಾಚರಣೆಯಲ್ಲಿ ಶಾಶ್ವತವಾಗಿ ಅಂಗವಿಕಲನಾದ ಪೋಲಿಸ್ ಪೇದೆಯ ಕುಟುಂಬಕ್ಕೆ ಸೌಲಭ್ಯ ನೀಡುವ ಉದ್ದೇಶದಿಂದ ಮೂಲತವಾಗಿ ಈ ನಿಯಮಗಳನ್ನು ರೂಪಿಸಲಾಯಿತು.

ಆದರೆ. ಈ ಅಧಿಸೂಚನೆಯ ಆಧಾರದ ಮೇಲೆ ಅನೇಕ ಸರ್ಕಾರಿ ನೌಕರರನ್ನು ಅವರು ನಿವೃತ್ತರಾಗುವ ಸ್ವಲ್ಪ ಸಮಯದ ಮುಂಚೆ ಸಾಮಾನ್ಯ ಸ್ವರೂಪದ ಕಾಯಿಲೆಗಳಾದ ಡಯಾಬಿಟಿಸ್. ರಕ್ತದೊತ್ತಡ ಇತ್ಯಾದಿ ಕಾಯಿಲೆಗಳ ನೆಪವೊಡ್ಡಿ ಅನುಮತಿ ನೀಡುತ್ತಿರುವುದನ್ನು ಮತ್ತು ಅವರ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ನೇಮಕಾತಿ ನೀಡುವ ಅರ್ಜಿಗಳನ್ನು ಪರಿಗಣಿಸುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದ ಅನರ್ಹ ವ್ಯಕ್ತಿಗಳು ಒಂದು ರೀತಿ ಸರ್ಕಾರಿ ನೌಕರಿಯನ್ನು ಅನುವಂಶಿಕ ಸ್ವರೂಪ/ಆಧಾರದ ಮೇಲೆ ಪಡೆಯುತ್ತಿದ್ದು

............................2

ಸಾಮಾನ್ಯ ಸಾರ್ವಜನಿಕರು ಸರ್ಕಾರಿ ನೌಕರಿಯನ್ನು ಪಡೆಯುವ ಅವಕಾಶವನ್ನು ಮೊಟಕುಗೊಳಿಸಿದಂತಾಗುತ್ತದೆ. ಮುಂದುವರಿದು ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದಲ್ಲಿದ್ದ ಆಡಳಿತ ಸುಧಾರಣಾ ಆಯೋಗವೂ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗ ಮೃತಪಟ್ಟರೆ ಅವರ ಅವಲಂಬಿತರಿಗೆ ಅನುಕಂಪದ ಆಧಾರದ ನೌಕರಿ ನೀಡುವ ಬದಲು ಕೆಲವು ನಿವೃತ್ತಿ ಸೌಲಭ್ಯಗಳನ್ನು ನೀಡುವುದು ಒಳಿತೆಂದು ಶಿಫಾರಸ್ಸು ಮಾಡಿತ್ತು.

ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ತನ್ನ ಹಕ್ಕು ಎಂಬುದಾಗಿ ಕ್ಲೇಮು ಮಾಡತಕ್ಕದ್ದಲ್ಲ ಮತ್ತು ಯಥಾಕ್ರಮದಲ್ಲಿ ನೀಡುವಂತಹುದು ಎಂಬಂತೆ ನೀಡತಕ್ಕದ್ದಲ್ಲ ಎಂದು ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ರ ನಿಯಮ3(1)ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಸರ್ಕಾರಿ ನೌಕರನ ಮರಣದಿಂದ ಆತನ ಕುಟುಂಬಕ್ಕೆ ಉಂಟಾಗುವ ನಷ್ಟ ಮತ್ತು ನಿರಾಶ್ರಿತತೆಯನ್ನು ತಡೆಯುವುದು ಅನುಕಂಪದ ಆಧಾರದ ನೇಮಕಾತಿ ನೀಡುವ ಉದ್ದೇಶವಾಗಿದೆ.

ಮುಂದುವರೆದು, ಭಾರತದ ಸರ್ವೋಚ್ಚ ನ್ಯಾಯಾಲಯದ 5 ಸದಸ್ಯರ ಸಂವಿಧಾನ ಪೀಠವು ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ದಿನಾಂಕ 10.04.2006ರಂದು ನೀಡಿದ ತೀರ್ಪಿನಲ್ಲಿ ಸಿವಿಲ್ ಸೇವೆಗಳ ಎಲ್ಲ ಹುದ್ದೆಗಳಿಗೆ ನೇರ ನೇಮಕಾತಿಯನ್ನು ಸದರಿ ಹುದ್ದೆಗಳಿಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇಮಕಾತಿ ವಿಧಾನವನ್ನು ಅನುಸರಿಸಿಯೇ ಎಲ್ಲ ಸಾರ್ವಜನಿಕರಿಗೆ ಅವಕಾಶ ನೀಡುವ ಮೂಲಕವೇ ಮಾಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದೆ. ಈ ತೀರ್ಪು ಈ ನೆಲದ ಕಾನೂನಾಗಿದೆ ಮತ್ತು ಅನರ್ಹ ವ್ಯಕ್ತಿಗಳು ವಂಶ ಪಾರಂಪರ್ಯವಾಗಿ ಸರ್ಕಾರಿ ಸೇವೆಗೆ ಸೇರುವುದು ಮೇಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ತಿಳಿಸಿರುವ ನೀತಿಗೆ ವಿರುದ್ಧವಾಗಿರುವುದರಿಂದ ಅದನ್ನು ತಡೆಗಟ್ಟಬೇಕಾಗಿರುತ್ತದೆ. ಈಗ ಚಾಲ್ತಿಯಲ್ಲಿರುವ ನಿಯಮಗಳು ದುರುಪಯೋಗವಾಗುತ್ತಿರುವುದರಿಂದ ಸರ್ಕಾರವು ಉದ್ದೇಶಿತ ಫಲಾನುಭವಿಗಳಿಗೆ ಮಾತ್ರ ಇದರ ಪ್ರಯೋಜನವಾಗುವಂತೆ ನಿಯಮಗಳನ್ನು ಪರಿಷ್ಕರಿಸಲು ಕ್ರಮಕೈಗೊಳ್ಳುತ್ತಿದೆ. ಆದುದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ಯನ್ನು ಮುಂದಿನ ತಿದ್ದುಪಡಿಯಾಗುವವರೆಗೆ ಹಿಂಪಡೆಯಬೇಕಾಗಿದೆ ಮತ್ತು ಅದರ ಚಾಲ್ತಿ ಸಮಯದಲ್ಲಿ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಮಾತ್ರ ಈ ನಿಯಮಗಳು ಸೀಮಿತವಾಗಿವೆ.

## ಆದೇಶ

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011 ದಿನಾಂಕ 13.10.2011 ರನ್ವಯ ಹೊರಡಿಸಿದ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ)ನಿಯಮಗಳು 2011ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮುಂದುವರೆದು. ಈ ದಿನಾಂಕದಂದು ಬಾಕಿ ಇದ್ದ ಪ್ರಕರಣಗಳಲ್ಲಿ ಅಸಮರ್ಥತೆ ಮತ್ತು ಹಾನಿಯು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಉಂಟಾಗಿರುವ ಪ್ರಕರಣಗಳಲ್ಲಿ ಮಾತ್ರ ಹಾಗೂ ಅನುಕಂಪದ ಆಧಾರದ ನೇಮಕಾತಿಯನ್ನು ಹಕ್ಕೆಂದು ಕ್ಲೇಮು ಮಾಡತಕ್ಕದ್ದಲ್ಲವಾದ್ದರಿಂದ ನೇಮಕಾತಿ ಪ್ರಾಧಿಕಾರಗಳು ಈ ನಿಯಮದಡಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಪ್ರತಿ ಪ್ರಕರಣದಲ್ಲೂ ಸಚಿವಾಲಯದ ಆಡಳಿತ ಇಲಾಖೆಗಳ ಮೂಲಕ ಮೇಲೆ ಸೂಚಿಸಿರುವಂತೆ ಪರಿಶೀಲಿಸಿ ನೌಕರರ ಸೇವೆಯನ್ನು ಇತರೆ ಹುದ್ದೆಗಳಲ್ಲಿ ಬಳಸುವುದು ಸಾಧ್ಯವಿಲ್ಲವೆಂದು ಖಚಿತಪಡಿಸಿಕೊಂಡ ನಂತರವೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮ) ದ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ನಡವಳಿಯಲ್ಲಿ ತಿಳಿಸಿದೆ.

ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಸಭೆಯ ದಿನಾಂಕ 07.10.2013ರ ನಡವಳಿಯಲ್ಲಿ (ವಿಷಯ ಸಂಖ್ಯೆ : ಸಿಆಸುಸ್ಥಾಸ/29/2011.12)

..........................3

ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಒಪ್ಪಿರುತ್ತದೆ.

ಅಲ್ಲದೆ, ದಿನಾಂಕ 28.10.2013ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಯಲ್ಲಿ (ವಿಷಯದ ಸಂಖ್ಯೆ: 01(87)/2013.14) ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011ನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಒಪ್ಪಿರುವ ದಿನಾಂಕ:07.10.2013ರ ನಿರ್ಣಯವನ್ನು ಒಪ್ಪಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ್ದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸೇಅನೇ 2011, ದಿನಾಂಕ 13.10.2011 ರನ್ವಯ ಹೊರಡಿಸಿರುವ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 2011ನ್ನು ಹಿಂಪಡೆದು, ಕರ್ನಾಟಕ ಸಿವಿಲ್ ಸೇವಾ(ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ಕ್ಕೆ ತಿದ್ದುಪಡಿ ಮಾಡಲು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ)(ತಿದ್ದುಪಡಿ) ನಿಯಮಗಳು 2012ನ್ನು ರದ್ದುಗೊಳಿಸಿರುವ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಡವಳಿ ಆದೇಶದ ಸಂಖ್ಯೆ ಸಿಆಸುಇ 46 ಸೇಅನೇ 2012, ಬೆಂಗಳೂರು ದಿನಾಂಕ 25.10.2013 ನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-01-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 03 (221)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಖ್ಯೆ: 10ರ ರಾಮಚಂದ್ರಪುರ ಮುಖ್ಯರಸ್ತೆಯಲ್ಲಿ ಏಳುಮಂದಮ್ಮ ಬಡಾವಣೆ ಹತ್ತಿರ ಸುಮಾರು 100 ಮೀ. ಉದ್ದದಲ್ಲಿ ನೀರು ಸರಬರಾಜು ಪೈಪುಗಳನ್ನು ಅಳವಡಿಸಲಾಗಿದ್ದು, ರಸ್ತೆ ಅಗಲ ಕೇವಲ 5.30 ಮೀಟರ್‌ನಿಂದ 6.50 ವರೆಗೆ ಮಾತ್ರ ಇದ್ದು ಈ ಸ್ಥಳದಲ್ಲಿ ರಸ್ತೆ ಅಗಲೀಕರಣಕ್ಕಾಗಿ ತುರ್ತಾಗಿ ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಜಂಟಿ ಆಯುಕ್ತರು (ಯಲಹಂಕ) ರವರು ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಈಗಾಗಲೇ ಟಿಪ್ಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯು ಭೂಸ್ವಾಧೀನ ಶಾಖೆಯಿಂದ ಮಂಡಿಸಿದ ಟಿಪ್ಪಣಿಯಾಗಿರುವುದಿಲ್ಲ. ಬದಲಿಗೆ ಮುಖ್ಯ ಅಭಿಯಂತರರು (ಬ್ಯಾಟರಾಯನಪುರ) ರವರು ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಗೆ ವಿಶೇಷ ಆಯುಕ್ತರು (ಯೋಜನೆ) ರವರು ಒಟ್ಟು ವೆಚ್ಚದ ಪೈಕಿ ಶೇ.50ರಷ್ಟು ಮೊತ್ತವನ್ನು BWSSB ಸಂಸ್ಥೆ ಭರಿಸುವ ಷರತ್ತುಗೊಳಪಟ್ಟು ಹಾಗೂ ಉಳಿದ 50% ಮೊತ್ತವನ್ನು ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಒಪ್ಪಿದಲ್ಲಿ ಟಿಪ್ಪಣಿಯನ್ನು ಮಂಡಿಸಲು ವಿಶೇಷ ಆಯುಕ್ತರು (ಯೋಜನೆ) ರವರು ಅನುಮೋದಿಸಿರುತ್ತಾರೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯ ಸಂಖ್ಯೆ:ತೆಆಸ್ಥಾಸ/232/2012-13, ದಿನಾಂಕ:22-02-2013 ರಲ್ಲಿ ನಿರ್ಣಯವು ಈ ಕೆಳಕಂಡಂತೆ ವಿವರಿಸಿದೆ.

ಕೆ.ಎಂ.ಸಿ.ಕಾಯ್ದೆ ಕಲಂ 175 Proviso (a) ರಂತೆ ಅಗಲೀಕರಣಕ್ಕೆ ಒಳಪಡುವ 14 ಸ್ವತ್ತುಗಳ ಒಟ್ಟು ವಿಸ್ತೀರ್ಣಕ್ಕೆ ನೊಂದಣಿ ಮಾರ್ಗಸೂಚಿ ಬೆಲೆ ಚದರ ಅಡಿ ಒಂದಕ್ಕೆ ರೂ.1200.00 ಇದ್ದು, ಭೂಸ್ವಾಧೀನ ಕಾಯ್ದೆ ನಿಯಮ 129 ರಂತೆ ನೀಡಬಹುದಾಗಿದೆ. Solatium 30% Additional Market Value 12% ಒಟ್ಟು 42% ಹೆಚ್ಚುವರಿಯಾಗಿ ನೀಡಿದಲ್ಲಿ ಚ.ಅಡಿ ವಿಸ್ತೀರ್ಣಕ್ಕೆ ರೂ.1704.00 ಆಗುತ್ತದೆ. ಈ ಭೂಮಿಯನ್ನು ಕಳೆದುಕೊಳ್ಳುವ ಜನ ಹೆಚ್ಚಾಗಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರಾಗಿದ್ದು, ಚ.ಅಡಿ 1ಕ್ಕೆ ರೂ.1800.00 ರಂತೆ ನೀಡಬಹುದಾಗಿದ್ದು, 4441.50 ಚ.ಅಡಿ ವಿಸ್ತೀರ್ಣದ ಮೌಲ್ಯ ರೂ.79,94,700.00 ಗಳಷ್ಟಿದ್ದು, ಸದರಿ ಕಟ್ಟಡಗಳ ಅಂದಾಜು ಮೌಲ್ಯಮಾಪನ ಮಾಡಬೇಕಾಗಿದ್ದು, ಮೇಲ್ನೋಟಕ್ಕೆ ರೂ.10,05,300.00 ಗಳಷ್ಟಿದ್ದು, ಇದರ ಒಟ್ಟು ಕ್ರಯದ ಮೌಲ್ಯ ರೂ.90.00 ಲಕ್ಷಗಳಷ್ಟು ಆಗುತ್ತದೆ.

ಪುಟ 14 ರಲ್ಲಿ ಲಗತ್ತಿಸಿರುವ ನಿರ್ಣಯದಂತೆ ಈ ಒಟ್ಟು ವೆಚ್ಚದಲ್ಲಿ ಶೇ.50%ರಷ್ಟು BWSSB ಯಿಂದ ಭರಿಸಿ, ಉಳಿಕೆ ಶೇ.50% ರಷ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಭರಿಸಲು ತೀರ್ಮಾನಿಸಿದಂತೆ ಬಿಬಿಎಂಪಿ ಭರಿಸುವ ಹಣ ರೂ.45.00 ಲಕ್ಷಗಳು ಆಗುತ್ತದೆ.

ಭೂಸ್ವಾಧೀನಕ್ಕಾಗಿ ನಮೂನೆ 'ಡಿ' ಯನ್ನು ಭರ್ತಿಮಾಡಿ ರೂ.45.00 ಲಕ್ಷಗಳನ್ನು 2013-14 ನೇ ಸಾಲಿನ ಬಿಬಿಎಂಪಿ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-0001 ರಲ್ಲಿ ಅನುಮೋದನೆ ಹಾಗೂ ಜಾಬ್ ಕೋಡ್ ಸಂಖ್ಯೆ ನೀಡಲು ಮಾನ್ಯ ಆಯುಕ್ತರ ಆದೇಶ ಕೋರಿ ಜಂಟಿ ಆಯುಕ್ತರು (ಯಲಹಂಕ) ರವರು ಕಡತವನ್ನು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರಿಗೆ ಮಂಡಿಸಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಕಡತವನ್ನು ಉಪ ಆಯುಕ್ತರು (ಭೂಸ್ವಾಧೀನ) ರವರಿಗೆ ಸಲ್ಲಿಸಿರುತ್ತಾರೆ.

### ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರ ಈ ಕೆಳಕಂಡಂತಿರುತ್ತದೆ.

**ವಾರ್ಡ್ ನಂ.10, ರಾಮಚಂದ್ರ ಪುರ ಗ್ರಾಮ**

| ಕ್ರ ಸಂ | ಗ್ರಾಮದ ಹೆಸರು | ಮಾಲೀಕರ/ ಅನುಭವದಾರರ ಹೆಸರು | ಖಾತೆ ಸಂಖ್ಯೆ | ಭೂಸ್ವಾಧೀನಕ್ಕೆ ಒಳಪಡುವ ಅಂದಾಜು ವಿಸ್ತೀರ್ಣ ಚ.ಅಡಿಗಳಲ್ಲಿ | ಷರಾ |
|---|---|---|---|---|---|
| 1 | ರಾಮಚಂದ್ರಪುರ | ಶ್ರೀ.ಡಿ.ಮುನಿರಾಜು | 186/1<br>184/1 | 372 ಚ.ಅಡಿ | ಖಾಲಿ ಜಾಗ |

..........2

| | | | | | |
|---|---|---|---|---|---|
| 2 | ರಾಮಚಂದ್ರಪುರ | ಶ್ರೀ.ತಿಮ್ಮರಾಯಪ್ಪ ಬಿನ್ ಬಜ್ಜಪ್ಪ | 186/185 | 349 ಚ.ಅಡಿ | ಕಟ್ಟಡ+ ಖಾಲಿ ಜಾಗ |
| 3 | ರಾಮಚಂದ್ರಪುರ | ಶ್ರೀ.ಡಿ.ಮುನಿರಾಜು | 183/181 | 355 ಚ.ಅಡಿ | ಖಾಲಿ ಜಾಗ |
| 4 | ರಾಮಚಂದ್ರಪುರ | ಶ್ರೀ.ಡಿ.ಲೋಕೇಶ್ | 180/178<br>182/180 | 414 ಚ.ಅಡಿ | ಕಟ್ಟಡ+ ಖಾಲಿ ಜಾಗ |
| 5 | ರಾಮಚಂದ್ರಪುರ | ಶ್ರೀ.ಟಿ.ರವಿಕುಮಾರ್ | 178/176 | 335 ಚ.ಅಡಿ | ಕಟ್ಟಡ+ ಖಾಲಿ ಜಾಗ |
| 6 | ರಾಮಚಂದ್ರಪುರ | ಶ್ರೀ.ಜಾಯ್ ಥಾಮಸ್ | 175/173 | 218 ಚ.ಅಡಿ | ಕಟ್ಟಡ+ ಖಾಲಿ ಜಾಗ |
| 7 | ರಾಮಚಂದ್ರಪುರ | ಖಾಲಿ | - | 108 ಚ.ಅಡಿ | ಖಾಲಿ ಜಾಗ |
| 8 | ರಾಮಚಂದ್ರಪುರ | ಶ್ರೀ.ಸಲೀಮ್ | ಸರ್ವೆ ನಂ.4 | 60 ಚ.ಅಡಿ | ಕಟ್ಟಡ |
| 9 | ರಾಮಚಂದ್ರಪುರ | ಶ್ರೀ.ಎಂ.ಶ್ರೀರಾಮ್ | 163/161 | 440 ಚ.ಅಡಿ | ಖಾಲಿ ಜಾಗ |
| 10 | ರಾಮಚಂದ್ರಪುರ | ಶ್ರೀ.ಎಂ.ಮುನಿಯಪ್ಪ | 163/161 | 253 ಚ.ಅಡಿ | ಕಟ್ಟಡ+ ಖಾಲಿಜಾಗ |
| 11 | ರಾಮಚಂದ್ರಪುರ | ಹೇಮಾವತಿ | ಖಾತಾ ಇಲ್ಲ | 312 ಚ.ಅಡಿ | ಖಾಲಿ ಜಾಗ |
| 12 | ರಾಮಚಂದ್ರಪುರ | ಶ್ರೀ.ಗುಂಡಪ್ಪ ಬಿನ್ ತಿಪ್ಪಯ್ಯ | 174/172 | 661-50 ಚ.ಅಡಿ | ಕಟ್ಟಡ + ಖಾಲಿ ಜಾಗ |
| 13 | ರಾಮಚಂದ್ರಪುರ | ನ್ಯಾಯಾಲಯದಲ್ಲಿ ಪ್ರಕರಣ | - | 192 ಚ.ಅಡಿ | ಕಟ್ಟಡ + ಖಾಲಿ ಜಾಗ |
| 14 | ರಾಮಚಂದ್ರಪುರ | ಶ್ರೀ.ಆರ್.ಸಿ.ರವೀಂದ್ರ | 197/198/8 | 372 ಚ.ಅಡಿ | ಕಟ್ಟಡ + ಖಾಲಿ ಜಾಗ |

ಮೇಲ್ಕಂಡ ಸ್ವತ್ತುಗಳು ಪಾಲಿಕೆ ವ್ಯಾಪ್ತಿಯಲ್ಲಿರುವುದರಿಂದ ಹಾಗೂ ಸದರಿ ಸ್ವತ್ತು ಭೂಪರಿವರ್ತನೆಯಾಗಿರುವ ಜಮೀನಾಗಿರುವುದರಿಂದ ಈ ಸ್ವತ್ತಿಗೆ ವಾಸೋಪಯೋಗಿ ನಿವೇಶನಗಳಿಗೆ ನಿಗಧಿ ಪಡಿಸಲಾಗಿರುವ ದರವನ್ನು ಪರಿಹಾರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಸರ್ಕಾರದ ದಿನಾಂಕ:21-09-2011 ರ ಕೇಂದ್ರ ಮೌಲ್ಯಮಾಪನ ಸಮಿತಿಯ ಅಧಿಸೂಚನೆ ಸಂಖ್ಯೆ:ಸಿವಿಸಿ/19/2010-11 ರ ಮಾರ್ಗಸೂಚಿ ದರದನ್ವಯ ಪ್ರಸ್ತಾಪಿತ ಸ್ವತ್ತಿಗೆ ಚ.ಅಡಿ ಒಂದಕ್ಕೆ ರೂ.1800/- ರಂತೆ ನಿಗಧಿಪಡಿಸಿ ಭೂಪರಿಹಾರ ಮತ್ತು ಇತರೆ ವೆಚ್ಚಗಳನ್ನು ಲೆಕ್ಕಾಚಾರ ಮಾಡಲಾಗಿದ್ದು, ವಿವರ ಈ ಕೆಳಕಂಡಂತಿದೆ.

## "ಅ"- ಭೂಪರಿಹಾರ ವೆಚ್ಚ

| ಕ್ರ.ಸಂ | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ:21-09-2011 ರ ಸರ್ಕಾರದ ಮಾರ್ಗಸೂಚಿ ದರದಂತೆ ಚ.ಅಡಿ ಒಂದಕ್ಕೆ ರೂ. 1800/- ರಂತೆ 4441.50 ಚ.ಅಡಿಗಳಿಗೆ | 79,94,700/- |
| 2 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶೇ.30 ರಂತೆ ಶಾಸನಬದ್ಧ ಭತ್ಯೆ | 23,98,410/- |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರನ್ವಯ ಮಾರುಕಟ್ಟೆ ಬೆಲೆ ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 9,59,364/- |
| | ಒಟ್ಟು (1+2+3) | 1,13,52,474/- |

## "ಆ"- ಇತರೆ ವೆಚ್ಚ

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇ.10 ರಷ್ಟು | - |
| 5 | ಆಡಿಟ್ ವೆಚ್ಚ ಶೇ.1 ರಷ್ಟು | - |
| 6 | ಪ್ರಕಟಣಾ ವೆಚ್ಚ (ಅಂದಾಜು) | 2,00,000/- |
| | ಒಟ್ಟು (1+2+3+6) | 1,15,52,474 |

ಷರಾ: ದಿನಾಂಕ: 05-09-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60 ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

(ಒಂದು ಕೋಟಿ ಹದಿನೈದು ಲಕ್ಷದ ಐವತ್ತೆರಡು ಸಾವಿರದ ನಾಲ್ಕುನೂರ ಎಪ್ಪತ್ನಾಲ್ಕು ರೂ.ಗಳು ಮಾತ್ರ)

.........................3

ಮೇಲೆ ನಮೂದಿಸಿರುವ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯ ಕಲಂ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲು ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. ಒಂದು ಕೋಟಿ ಹದಿನೈದು ಲಕ್ಷದ ಐವತ್ತೆರಡು ಸಾವಿರದ ನಾಲ್ಕುನೂರ ಎಪ್ಪತ್ನಾಲ್ಕು ರೂ.ಗಳು ಮಾತ್ರಗಳನ್ನು ಪಾಲಿಕೆಯ 2013-14 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವಂತೆ ಆಯುಕ್ತರವರ ದಿನಾಂಕ: 13-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-02-2014ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:24-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 04 (222)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಕೆ. ಉಮೇಶ್ ಶೆಟ್ಟಿ, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಮನವಿ ಪತ್ರ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 128, ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆ 2ನೇ ಮುಖ್ಯರಸ್ತೆಗೆ **"ಕಾಳಿಮಂದಿರ ರಸ್ತೆ"** ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ನಾಮಕರಣ ಮಾಡಲು ಉದ್ದೇಶಿಸಲಾಗಿರುವ ರಸ್ತೆಯಲ್ಲಿ ಕಾಳಿಮಂದಿರ ಇರುತ್ತದೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 108 ಮಂದಿ, ವಿರೋಧವಾಗಿ 10 ಜನ ಸಹಿ ಮಾಡಿರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 128, ನಾಗರಬಾವಿ ವ್ಯಾಪ್ತಿಯಲ್ಲಿ ಚಂದ್ರಾ ಬಡಾವಣೆ 2ನೇ ಮುಖ್ಯ ರಸ್ತೆಗೆ **"ಕಾಳಿಮಂದಿರ ರಸ್ತೆ"** ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 24-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:128, ನಾಗರಬಾವಿ ವ್ಯಾಪ್ತಿಯಲ್ಲಿ ಚಂದ್ರಾ ಬಡಾವಣೆ 2ನೇ ಮುಖ್ಯರಸ್ತೆಗೆ "ಕಾಳಿಮಂದಿರ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:128 ನಾಗರಬಾವಿ ವ್ಯಾಪ್ತಿಯಲ್ಲಿ ಚಂದ್ರಾ ಬಡಾವಣೆ 2ನೇ ಮುಖ್ಯರಸ್ತೆಗೆ "ಕಾಳಿಮಂದಿರ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 05 (223)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಕೆ. ಉಮೇಶ್ ಶೆಟ್ಟಿ, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಮನವಿ ಪತ್ರ ಸಲ್ಲಿಸಿ ವಾರ್ಡ್ ಸಂಖ್ಯೆ : 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಹಳೆಯ ಜನತಾ ಕಾಲೋನಿ ಪ್ರದೇಶಕ್ಕೆ "ಹೊಯ್ಸಳ ನಗರ ನಾಗರಬಾವಿ ಪ್ರದೇಶವೆಂದು" ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 117 ಮಂದಿ, ವಿರೋಧವಾಗಿ 15 ಮಂದಿ ಸಹಿ ಮಾಡಿರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಹಳೆಯ ಜನತಾ ಕಾಲೋನಿ ಪ್ರದೇಶಕ್ಕೆ "ಹೊಯ್ಸಳ ನಗರ ನಾಗರಬಾವಿ ಪ್ರದೇಶ" ವೆಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 24-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಹಳೆಯ ಜನತಾ ಕಾಲೋನಿ ಪ್ರದೇಶಕ್ಕೆ "ಹೊಯ್ಸಳ ನಗರ ನಾಗರಬಾವಿ ಪ್ರದೇಶ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

............................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಜನತಾ ಕಾಲೋನಿ ಪ್ರದೇಶಕ್ಕೆ "ಹೊಯ್ಸಳ ನಗರ ನಾಗರಬಾವಿ ಪ್ರದೇಶ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ : 06 (224)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಕೆ. ಉಮೇಶ್ ಶೆಟ್ಟಿ, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಮನವಿ ಪತ್ರ ಸಲ್ಲಿಸಿ ವಾರ್ಡ್ ಸಂಖ್ಯೆ : 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆಯಲ್ಲಿರುವ ಮುಖ್ಯ ವೃತ್ತವನ್ನು "ಸ್ವಾಮಿ ವಿವೇಕಾನಂದ ವೃತ್ತ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 129 ಮಂದಿ, ವಿರೋಧವಾಗಿ 7 ಮಂದಿ ಸಹಿ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆಯಲ್ಲಿರುವ ಮುಖ್ಯ ವೃತ್ತವನ್ನು "ಸ್ವಾಮಿ ವಿವೇಕಾನಂದ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:24-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆಯಲ್ಲಿರುವ ಮುಖ್ಯ ವೃತ್ತವನ್ನು "ಸ್ವಾಮಿ ವಿವೇಕಾನಂದ ವೃತ್ತ" ಎಂದು ನಾಮಕರಣ ಮಾಡುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆಯಲ್ಲಿರುವ ಮುಖ್ಯ ವೃತ್ತವನ್ನು "ಸ್ವಾಮಿ ವಿವೇಕಾನಂದ ವೃತ್ತ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 07 (225)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅಧ್ಯಕ್ಷರು-ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಗರದ ನಾಗರೀಕರಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದರೊಂದಿಗೆ ರಾಜ್ಯಕ್ಕೆ ಹಾಗೂ ಬೆಂಗಳೂರು ನಗರಕ್ಕೆ ಕೊಡುಗೆ ನೀಡಿದ ವಿವಿಧ ಗಣ್ಯರಿಗೆ ಗೌರವ ಸಲ್ಲಿಸುವುದು ಸಹ ಪ್ರಮುಖ ಆದ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಗೌರವಪೂರ್ವಕವಾಗಿ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಗೋಚರಿಸುವಂತೆ ಗಣ್ಯರ ಭಾವಚಿತ್ರವನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸುತ್ತಾ, ಪಾಲಿಕೆಯ ಕೇಂದ್ರ ಕಛೇರಿ ಮತ್ತು 8 ವಲಯದ ಜಂಟಿ ಆಯುಕ್ತರ ಕಛೇರಿಗಳನ್ನೊಳಗೊಂಡಂತೆ 9 ಕಡೆಗಳಲ್ಲಿ ಒಂದೇ ಮಾದರಿ (3X2 ಅಳತೆಯ) ನಾಡಪ್ರಭು ಕೆಂಪೇಗೌಡರು, ಡಾ॥ ಬಿ.ಆರ್.ಅಂಬೇಡ್ಕರ್ ಮತ್ತು ಶ್ರೀ ಸರ್.ಎಂ.ವಿಶ್ವೇಶ್ವರಯ್ಯ ರವರ ಭಾವಚಿತ್ರಗಳನ್ನು ಹಾಗೂ ಇದೇ ರೀತಿ ಎಲ್ಲಾ ವಲಯದ ಅಧೀನ ಕಛೇರಿಗಳಲ್ಲಿಯೂ ಸಹ ಒಂದೇ ಮಾದರಿ (2X1 ½ ಅಳತೆಯ) ಭಾವಚಿತ್ರಗಳನ್ನು ಅಳವಡಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಈಗಾಗಲೇ ಕೇಂದ್ರ ಕಛೇರಿ ವಲಯ ಮತ್ತು ಉಪ ವಿಭಾಗದ ಕಛೇರಿಗಳಲ್ಲಿ ನಾಡಪ್ರಭು ಕೆಂಪೇಗೌಡರ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್ ರವರ 12" X16" ಅಳತೆಯ ಭಾವಚಿತ್ರಗಳನ್ನು ಅಳವಡಿಸಲಾಗಿದೆ. ಕೆಲವೊಂದು ಕಛೇರಿಗಳು ನವೀಕರಣ ಮತ್ತು ಸ್ಥಳಾಂತರಗೊಂಡಿರುವುದರಿಂದ ಅಂತಹ ಕಛೇರಿಗಳಲ್ಲಿ ಭಾವಚಿತ್ರಗಳು ಇಲ್ಲದೇ ಇರಬಹುದು. ವಲಯ ಮತ್ತು ಉಪ ವಿಭಾಗಗಳಿಂದ ಭಾವಚಿತ್ರಗಳ ಅವಶ್ಯಕತೆ ಬಗ್ಗೆ ಮಾಹಿತಿ ಪಡೆದುಕೊಂಡು, ಅವಶ್ಯವಿರುವ ಪಾಲಿಕೆಯ ಕೇಂದ್ರ ಕಛೇರಿ ಮತ್ತು 8 ವಲಯದ ಜಂಟಿ ಆಯುಕ್ತರ ಕಚೇರಿಗಳನ್ನೊಳಗೊಂಡಂತೆ 9 ಕಡೆಗಳಲ್ಲಿ ಒಂದೇ ಮಾದರಿಯ (3X2 ಅಳತೆಯ) ನಾಡಪ್ರಭು ಕೆಂಪೇಗೌಡರು, ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಶ್ರೀ ಸರ್.ಎಂ. ವಿಶ್ವೇಶ್ವರಯ್ಯರವರ ಭಾವಚಿತ್ರಗಳನ್ನು ಹಾಗೂ ಇದೇ ರೀತಿ ಅವಶ್ಯವಿರುವ ಎಲ್ಲಾ ವಲಯದ ಅಧೀನ ಕಛೇರಿಗಳಲ್ಲಿಯೂ ಸಹ ಒಂದೇ ಮಾದರಿ (2X1 ½ ಅಳತೆಯ) ಭಾವಚಿತ್ರಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಅನುಮೋದನೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-01-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ : 08 (226)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಹನ ದಟ್ಟಣೆಯು ಅಧಿಕವಾಗಿದ್ದು, ಸುಲಭ ಸಂಚಾರ ವ್ಯವಸ್ಥೆಗೆ ಅಡಚಣೆ ಉಂಟಾಗುತ್ತಿರುತ್ತದೆ. ಇದಲ್ಲದೇ ಬಹುತೇಕ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆಯಿಂದ ವಾಹನ ಸವಾರರ ಅಧಿಕ ಸಮಯವು ವ್ಯಯವಾಗುತ್ತಿರುತ್ತದೆ ಹಾಗೂ ಇಂಧನ ವ್ಯಯವು ಸಹ ಆಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ ಮತ್ತು ಅಪರ ಆಯುಕ್ತರು (ಸಂಚಾರ)ರವರು ಮತ್ತು ಸರ್ವಜ್ಞನಗರ (ಕಾಕ್ಸ್‌ಟೌನ್) ಸಿಟಿಜೆನ್ಸ್ ಫೋರಂ (ರಿ.) ರವರು ನಗರದ ಸರ್ವಜ್ಞನಗರ (ಕಾಕ್ಸ್‌ಟೌನ್) ವ್ಯಾಪ್ತಿಯ ಅಸ್ಸೈ ರಸ್ತೆ(ಕೋಮಲ), ಜಂಕ್ಷನ್ ವ್ಹೀಲರ್ ರಸ್ತೆ, ಲಿಂಕ್ ರಸ್ತೆಯಿಂದ ದೇವನಹಳ್ಳಿ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಕಡೆಗೆ ಹೋಗಲು ಮತ್ತು ಸಾರ್ವಜನಿಕರ ಓಡಾಟದಿಂದ ಅನಾಹುತಗಳನ್ನು ತಪ್ಪಿಸಲು ಸದರಿ ಜಂಕ್ಷನ್‌ನನ್ನು ಅಭಿವೃದ್ಧಿಪಡಿಸಲು ಹಾಗೂ ಸದರಿ ಜಂಕ್ಷನ್‌ನಲ್ಲಿ ಹಾದು ಹೋಗಿರುವ ದೊಡ್ಡ Storm Water Drain ನ ಸ್ವಲ್ಪಭಾಗವನ್ನು ಉಪಯೋಗಿಸಿಕ್ಕೊಂಡು ರಸ್ತೆಯನ್ನು ಮತ್ತು ಪಾದಚಾರಿ ರಸ್ತೆ ಮೇಲಿರುವ ಅಡಚಣೆಗಳನ್ನು ತೆರವುಗೊಳಿಸಿ / ಸರಿಪಡಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಹಾಗೂ ಪಾದಚಾರಿಗಳ ಸುರಕ್ಷಿತ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿಯನ್ನು ಕೋರಿರುತ್ತಾರೆ.

ಪಾಲಿಕೆಯ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಜಂಕ್ಷನ್‌ಗಳ ಅಭಿವೃದ್ಧಿಗಾಗಿ ರೂ. 10.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

ಆದುದರಿಂದ, ಅಸ್ಸೈ ಜಂಕ್ಷನ್‌ನ್ನು ಅಭಿವೃದ್ಧಿಪಡಿಸಿದ್ದಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವ ಹಿತದೃಷ್ಟಿಯಿಂದ ಕಾರ್ಯಪಾಲಕ ಅಭಿಯಂತರರು, ರ.ಮೂ.ಸೌ - ಟಿ.ಇ.ಸಿ ವಿಭಾಗದವರು ಜಂಕ್ಷನ್ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಲು ರೂ. 250.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಸದರಿ ಮೊತ್ತವನ್ನು ಪಾಲಿಕೆಯ 2013-14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 167 ರ ಲೆಕ್ಕಶೀರ್ಷಿಕೆ ಪಿ-2887 "8 ವಲಯಗಳಲ್ಲಿ 200 ಜಂಕ್ಷನ್‌ಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ" ರಲ್ಲಿ ಚಾಲ್ತಿ ಕಾಮಗಾರಿಗಾಗಿ ಒದಗಿಸಿರುವ ರೂ. 1000.00 ಲಕ್ಷ ಅನುದಾನದಡಿ ಭರಿಸಬಹುದಾಗಿರುತ್ತದೆ.

ಈ ಮೇರೆಗೆ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 250.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.............................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 09 (227)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 75 ಸಂಖ್ಯೆ ಇ – ಶೌಚಾಲಯಗಳ ಘಟಕಗಳನ್ನು ನಿರ್ಮಿಸುವ ರೂ.387.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಸದರಿ ಇ – ಶೌಚಾಲಯ ನಿರ್ಮಾಣದ ಅಂದಾಜು ಪಟ್ಟಿಗೆ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ. ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಇ – ಶೌಚಾಲಯ ಘಟಕವು ಈ ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ.

- ಇ – ಶೌಚಾಲಯಗಳು ಸ್ವಯಂಚಾಲಿತ ಮಾನವರಹಿತ ಶೌಚಾಲಯಗಳಾಗಿದ್ದು, ರೂಪಾಯಿ ನಾಣ್ಯಗಳ ಮುಖಾಂತರ ಸದರಿ ಶೌಚಾಲಯಗಳನ್ನು ಉಪಯೋಗಿಸಬಹುದಾಗಿರುತ್ತದೆ.
- ಶೌಚಾಲಯವು ಉಪಯೋಗಿಸುವ ಮುನ್ನ ಹಾಗೂ ನಂತರ ಸ್ವಯಂಚಾಲಿತವಾಗಿ ಸ್ವಚ್ಛಗೊಳ್ಳುತ್ತದೆ.
- ಕೇಂದ್ರಿಕೃತ ನಿಯಂತ್ರಣ ಕೊಠಡಿಯಿಂದ ಜಿ.ಪಿ.ಆರ್.ಎಸ್ ತಾಂತ್ರಿಕತೆ ಮುಖಾಂತರ ಶೌಚಾಲಯಗಳ ಕಾರ್ಯನಿರ್ವಹಣೆಯನ್ನು ನಿಗಾವಹಿಸಬಹುದಾಗಿರುತ್ತದೆ.
- ಸದರಿ ಶೌಚಾಲಯಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸುಲಭವಾಗಿ ಸ್ಥಳಾಂತರಿಸಬಹುದಾಗಿರುತ್ತದೆ.

ಇ – ಶೌಚಾಲಯ ನಿರ್ಮಿಸುವ ಅಂದಾಜು ಪಟ್ಟಿಯು Stainless Steel ಮಾದರಿಯದ್ದಾಗಿರುತ್ತದೆ. ಶೌಚಾಲಯವನ್ನು ಸ್ಥಾಪಿಸುವ ಗುತ್ತಿಗೆದಾರರೇ, ಶೌಚಾಲಯಗಳಿಂದ ಬರುವ "PAY & USE" ಹಾಗೂ "ADVERTISEMENT" ಆದಾಯಗಳನ್ನು ಉಪಯೋಗಿಸಿಕೊಂಡು ಶೌಚಾಲಯಗಳ ದೈನಂದಿನ ನಿರ್ವಹಣೆಗೆ ಅವಶ್ಯವಿರುವ ನೀರು, ವಿದ್ಯುತ್, ಒಳಚರಂಡಿ ವ್ಯವಸ್ಥೆಗಳನ್ನು ಸ್ವತಃ ಮಾಡಿಕೊಂಡು 2 ವರ್ಷಗಳ ಅವಧಿಗೆ ನಿರ್ವಹಿಸುವ ಅಂಶವನ್ನು ಟೆಂಡರ್‌ನಲ್ಲಿ ಅಳವಡಿಸಿಕೊಳ್ಳಲಾಗುವುದು.

ಮಾನ್ಯ ಆಯುಕ್ತರು 75 ಸಂಖ್ಯೆಯ ಇ – ಶೌಚಾಲಯಗಳನ್ನು ನಿರ್ಮಿಸುವ ಅಂದಾಜು ಮೊತ್ತ ರೂ. 387.00 ಲಕ್ಷಗಳಿಗೆ ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಲಾಗಿದೆ.

1. 75 ಸಂಖ್ಯೆ ಇ – ಶೌಚಾಲಯ ಘಟಕಗಳನ್ನು ಸ್ಥಾಪಿಸುವ ರೂ. 387.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.
2. ಕಾಮಗಾರಿಯನ್ನು ಅಲ್ಪಾವಧಿ ಟೆಂಡರ್ ಕರೆದು ನಿರ್ವಹಿಸಲು ಅನುಮೋದನೆ ಹಾಗೂ
3. ಅಂದಾಜು ಮೊತ್ತ ರೂ. 387.00 ಲಕ್ಷಗಳಿಗೆ ಜಾಬ್‌ಕೋಡ್ ಪಡೆಯಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22-02-2014ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

..........................2

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:22-02-2014ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 22-02-2014ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 10 (228)/2013-14

ದಿನಾಂಕ:10-02-2014 ರ ಟಿಪ್ಪಣಿ ಸಂಖ್ಯೆ:ಎಂ.ಐ.ಎಸ್/ಪಿಆರ್/2144 ರಲ್ಲಿ ಪೂಜ್ಯ ಮಹಾಪೌರರು ಕೆ.ಎಂ.ಸಿ. ಕಾಯ್ದೆ 1976ರ ಕಲಂ 51ರ ಅಡಿಯಲ್ಲಿ ಪಿ.ಪಿ.ಪಿ.ಮಾಡೆಲ್‌ನಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಕುರಿತು ಪರಿಷ್ಕೃತ ಟಿಪ್ಪಣಿಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸುವಂತೆ ಸೂಚಿಸಿರುವ ಮೇರೆಗೆ, ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ.

1. ದಿನಾಂಕ:01.02.2012ರ ಪಾಲಿಕೆ ಸಭೆಯಲ್ಲಿ 'RFT document Sl No. 15.6' In cases no response is received from any bidder for particular toilet location, any other interested persons/institutions will be considered on 'First Come-First Serve Basis Separately' ಎಂಬ ಆಧಾರದ ಮೇಲೆ ಮೆ|| ದೇವ್ ಪಬ್ಲಿಸಿಟಿ ಹಾಗೂ ಶ್ರೀ ಬಿ.ಎನ್.ಮಂಜುನಾಥ ರೆಡ್ಡಿ ರವರಿಗೆ ಬಿ.ಬಿ.ಎಂ.ಪಿ ವ್ಯಾಪ್ತಿಯ ಪ್ರದೇಶಗಳಲ್ಲಿ ಬಿ.ಓ.ಟಿ. ಆಧಾರದ ಮೇಲೆ ನಿರ್ಮಿಸಲು ಅನುಮತಿ ನೀಡಲು ತೀರ್ಮಾನಿಸಿರುವ ನಿರ್ಣಯವನ್ನು ಘನ ಸರ್ಕಾರದ ಅನುಮೋದನೆಗೆ ಮಂಡಿಸಲಾಗಿದ್ದು, ದಿನಾಂಕ:25.05.2012ರ ಪತ್ರದಲ್ಲಿ ಸರ್ಕಾರವು ಕೋರಿದ್ದ ವಿವರಣೆಗಳಿಗೆ ಉತ್ತರವಾಗಿ ದಿನಾಂಕ:11.07.2011ರ ಪತ್ರದ ಸಂಖ್ಯೆ:DC(ADVT)PR/1208/11-12 ರಲ್ಲಿ ಒಡಂಬಡಿಕೆಯನ್ನು ನೀಡಲಾಗಿದೆ.
2. ಮುಂದುವರೆದಂತೆ, ದಿನಾಂಕ:18.08.2011ರ ಪತ್ರದ ಸಂಖ್ಯೆ:ನಇ 221 ಎಂಎನ್‌ವೈ 2011 ರಲ್ಲಿ ನಗರಾಭಿವೃದ್ಧಿಯ ಇಲಾಖೆಯ ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ:13.07.2011 ರಂದು ನಡೆದು ಸಭೆಯಲ್ಲಿ ಸದರಿ ವಿಷಯದ ಕುರಿತು ಉಲ್ಲೇಖಿಸಲಾಗಿದ್ದು, ಈ ಹಿಂದೆ ಆಹ್ವಾನಿಸಲಾಗಿದ್ದ ಟೆಂಡರ್‌ಗಳಲ್ಲಿ ಟೆಂಡರ್‌ನ್ನು ಸ್ವೀಕರಿಸಲು ಕೇವಲ 1 ವಾರ ಕಾಲಾವಕಾಶವನ್ನು ಮಾತ್ರ ನೀಡಲಾಗಿರುವುದರಿಂದ ಪಾಲಿಕೆಗೆ ಹೆಚ್ಚು ವರಮಾನ ಪಡೆಯುವ ಉದ್ದೇಶದಿಂದ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ ಬಿ.ಓ.ಟಿ ಆಧಾರದ ಮೇಲೆ ಖಾಸಗಯವರಿಗೆ ನೀಡುವ ಬದಲು ಕೆ.ಟಿ.ಟಿ.ಪಿ ಕಾಯ್ದೆ / ನಿಯಮಗಳ ಪ್ರಕಾರ ಇ-ಪ್ರೋಕ್ಯೂರ್‌ಮೆಂಟ್ ವೇದಿಕೆ ಮೂಲಕ ಹಾಗೂ ಹೆಚ್ಚು ಪ್ರಸಾರವುಳ್ಳ ಇಂಗ್ಲೀಷ್ ಹಾಗೂ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಿ, ಟೆಂಡರ್‌ನ್ನು ಕರೆಯುವಂತೆ ಅಪರ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ.
3. ನಗರದ ಸೌಂದರ್ಯ, ಶುಚಿತ್ವ ಹಾಗೂ ಪಾಲಿಕೆಯ ಆರ್ಥಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ದಿನಾಂಕ:11.04.2011 ರಂದು ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು (Urban Affairs) ರವರಾದ ಶ್ರೀ ಡಾ:ಎ.ರವೀಂದ್ರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 'The Chariman felt that no real effort has been made to provide toilet facility to the general public after initial euphoria of implementing the Nirmal Project'ಎಂದು ಮಾಡಿರುವ ಅವಲೋಕನಗೆ ಪಾಲಿಕೆಯ ವಿಶೇಷ ಆಯುಕ್ತರು "About 50 toilet have been cleared by the BBMP Council and that they will be implemented on PPP model without financial burden on the BBMP" ಎಂದು ಹೇಳಿಕೆ ನೀಡಿದ್ದು, ಇಲ್ಲಿಯವರೆಗೆ ಯಾವುದೇ ಶೌಚಾಲಯಗಳನ್ನು PPP model ನಲ್ಲಿ ನಿರ್ಮಿಸಲಾಗಿಲ್ಲ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು, ಈ ಹಿಂದೆ ಕರೆಯಲಾಗಿದ್ದ ಟೆಂಡರ್‌ಗಳಲ್ಲಿ ಯಾವ ವ್ಯಕ್ತಿ/ಸಂಸ್ಥೆಗಳು ಭಾಗವಹಿಸೇ ಇರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಟೆಂಡರ್ ಕರೆದು ಯಾರು ಭಾಗವಹಿಸದೇ ಇರುವ .

............................2

ಪಕ್ಷದಲ್ಲಿ ಹಿಂದಿನ ಘಟನೆ ಪುನರಾವರ್ತನೆಯಾಗಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಉಂಟಾಗಬುದಾದ ಕಾಲವಿಳಂಬವನ್ನು ತಪ್ಪಿಸುವ ಹಿನ್ನಲೆಯಲ್ಲಿ ಪೂಜ್ಯ ಮಹಾಪೌರರು ದಿನಾಂಕ:10.02.2014ರ ಪತ್ರದಲ್ಲಿ ಸೂಚಿಸಿರುವ ಮೇರೆಗೆ ಸದರಿ ವಿಷಯದ ಕುರಿತು ಟಿಪ್ಪಣಿಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸುವ ಬಗ್ಗೆ ಕಾನೂನು ಕೋಶದ ಸಲಹೆ ಪಡೆಯಬಹುದಾಗಿದೆ.

ಈ ಕೆಳಕಂಡ ಸ್ಥಳದಲ್ಲಿ ಮೆ॥ ದೇವ್ ಪಬ್ಲಿಸಿಟಿರವರಿಗೆ 25 ಶೌಚಾಲಯಗಳನ್ನು ಹಾಗೂ ಶ್ರೀ ಬಿ.ಎನ್.ಮಂಜುನಾಥ ರೆಡ್ಡಿರವರಿಗೆ 3 ಶೌಚಾಲಯಗಳನ್ನು ಜಾಹೀರಾತು ಪ್ರದರ್ಶನದ ಹಕ್ಕಿನ ಮೇಲೆ ನಿರ್ಮಿಸಿ, ನಿರ್ವಹಿಸಲು ಕಾನೂನು ಸಲಹೆಗಾರರು ಕಡತದ ಕಂಡಿಕೆ 67 ರಲ್ಲಿ ಕೆ.ಎಂ.ಸಿ. ಕಾಯ್ದೆ 1976 ರ ಕಲಂ 58(4) ಮತ್ತು 59(5) ಮತ್ತು 59(23) ರ ಅಡಿಯಲ್ಲಿ ಪ್ರಸ್ತಾವನೆಯನ್ನು ದಿನಾಂಕ:01.02.2012ರ ಪಾಲಿಕೆ ನಿರ್ಣಯದಲ್ಲಿ ಸೂಚಿಸಿರುವಂತೆ ಸಲ್ಲಿಸಿದೆ.

| ಕ್ರ.ಸಂ. | ಶೌಚಾಲಯಗಳ ಸ್ಥಳ |
|---|---|
| 1. | ವಾಣಿ ವಿಲಾಸ್ ಆಸ್ಪತ್ರೆ |
| 2. | ರಾಜಾ ರಾಮ್ ಮೋಹನ್ ರಾಯ್ ರಸ್ತೆ, ಅಮೃತ್ ಡಿಸ್ಟಿಯರ್ ನಂತರ |
| 3. | ಬಳ್ಳಾರಿ ರಸ್ತೆ, ಗುಟ್ಟಹಳ್ಳಿ ಸರ್ಕಲ್ ಪಾರ್ಕ್‌ನಲ್ಲಿ |
| 4. | ಬಳ್ಳಾರಿ ರಸ್ತೆ, ಪ್ಯಾಲೇಸ್ ಕಾಂಪೌಂಡ್ ಪಕ್ಕದಲ್ಲಿ |
| 5. | ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಪುಟ್ಟಣ್ಣ ಚಿತ್ರಮಂದಿರದ ಹತ್ತಿರ |
| 6. | ಹೆಬ್ಬಾಳ ಕ್ರಿಮಟೋರಿಯಂ ಹತ್ತಿರ |
| 7. | ವಾರ್ ಮೆಮೋರಿಯಲ್ ಹತ್ತಿರ, ರೆಸಿಡೆನ್ಸಿ ರಸ್ತೆ, |
| 8. | ಕ್ವೀನ್ಸ್ ರಸ್ತೆ, ಕಬ್ಬನ್ ಪಾರ್ಕ್, ಎಸ್‌ಪಿಸಿಐ ನಂತರ |
| 9. | ಸೋಫಿಯಾ ಸ್ಕೂಲ್ ಎದುರು, ಬಸವ ಭವನ ಪಕ್ಕದಲ್ಲಿ |
| 10. | ಭಾಷ್ಯಂ ಸರ್ಕಲ್, ಸದಾಶಿವನಗರ |
| 11. | ಜಾನ್‌ಸನ್ ಮಾರ್ಕೆಟ್, ಮಿಲ್ಕ್‌ಭೂತ್ ಪಕ್ಕದಲ್ಲಿ |
| 12. | ಡಿಸ್‌ಪೆನ್ಸರಿ ರಸ್ತೆ ಫಾನಾಸೋನಿಕ್ ಶೋರೂಂ ಎದುರು |
| 13. | ಮೈನ್ ಗಾರ್ಡ್ ಕ್ರಾಸ್ ರಸ್ತೆ, ಸೋಫಿಯಾ ಪ್ಲಾಜಾ ಎದುರು |
| 14. | ಸಾದ್‌ವಾಣಿಸ್ ಎದುರು, ಎಂ.ಜಿ.ರಸ್ತೆ ಜಂಕ್ಷನ್ |
| 15. | ಹರೇ ಕೃಷ್ಣ ರಸ್ತೆ, ಹೈ ಗ್ರೌಂಡ್ಸ್ ಪೊಲೀಸ್ ಸ್ಟೇಷನ್ ಹತ್ತಿರ |
| 16. | ಮಾಧವನ್ ಪಾರ್ಕ್ ಜಯನಗರ, |
| 17. | ಪಿಡಬ್ಲ್ಯೂಡಿ ಕಛೇರಿ ಹತ್ತಿರ, ನೃಪತುಂಗ ರಸ್ತೆ |
| 18. | ಕಬ್ಬನ್ ರಸ್ತೆ, ಬಿ.ಆರ್.ವಿ.ಚಿತ್ರಮಂದಿರದ ಎದುರು |
| 19. | ಕಬ್ಬನ್ ರಸ್ತೆ, ಹೆಚ್.ಎ.ಎಲ್.ಕಾಂಪ್ಲೆಕ್ಸ್ ಎದುರು |
| 20. | ಹೊಸೂರು ರಸ್ತೆ ಸಿಮಿಟ್ರಿ, ಕಾನ್‌ಫಿಡೆಂಟ್ ಫ್ಲೊರಸ್ ಹೋಟೆಲ್ ಹತ್ತಿರ |
| 21. | ಕಾಳಿದಾಸ ರಸ್ತೆ, ಫ್ರೀಡಮ್ ಪಾರ್ಕ್ ಹತ್ತಿರ |
| 22. | ಟಿ.ಚೌಡಯ್ಯ ರಸ್ತೆ, ಬಿ.ಡಿ.ಎ ಹತ್ತಿರ (ಬಳ್ಳಾರಿ ರಸ್ತೆ) |
| 23. | ಮಿಲ್ಲರ್ ರಸ್ತೆ, ಡ್ರೈನ್ ಹತ್ತಿರ |
| 24. | ಮಿಲ್ಲರ್ ರಸ್ತೆ, ಜೈನ್ ಆಸ್ಪತ್ರೆ ಹತ್ತಿರ |
| 25. | ಚಕ್ಕರಾಯನಕೆರೆ ಬಸ್ ನಿಲ್ದಾಣ |

ಮೇಲ್ಕಂಡ ಕಾಮಗಾರಿಗೆ ಕೆಳಕಂಡಂತೆ ಷರತ್ತುಗಳನ್ನು ಪಾಲಿಕೆಯು ವಿಧಿಸಬೇಕಾಗಿರುತ್ತದೆ.

**ಷರತ್ತುಗಳು:**

1. ಪ್ರತಿ ಶೌಚಾಲಯಕ್ಕೆ ವಾರ್ಷಿಕವಾಗಿ ರೂ.50,000/-ಗಳಂತೆ ಲೈಸನ್ಸ್ ಶುಲ್ಕವನ್ನು ಪಾವತಿಸುವುದು.
2. ಪಾಲಿಕೆಯು ನಿಗಧಿಪಡಿಸುವ ಶುಲ್ಕವನ್ನು ಸಾರ್ವಜನಿಕರಿಂದ ವಸೂಲಿ ಮಾಡತಕ್ಕದ್ದು.
3. ಬಿ.ಓ.ಟಿ. ಆಧಾರದ ಟೆಂಡರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಶೌಚಾಲಯಗಳ ಮೇಲೆ ಪಾಲಿಕೆಯು ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ 300 ಚ.ಅಡಿಗಳಿಗೆ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸುವುದು.

............................3

5. ಜಾಹೀರಾತು ಬೈಲಾಗೂ-2006 ರಂತೆ ಜಾಹೀರಾತು ತೆರಿಗೆಯನ್ನು ನಿಯಮಾನುಸಾರ ಪಾವತಿಸುವುದು ಮತ್ತು ಬೈಲಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
6. ಶೌಚಾಲಯಗಳನ್ನು ನಿರ್ಮಿಸುವ ಮೊದಲು ಪಾಲಿಕೆಯ ತಾಂತ್ರಿಕ ವಿಭಾಗದಿಂದ ಶೌಚಾಲಯದ ನಕ್ಷೆಯನ್ನು ಸಲ್ಲಿಸಿ ಅನುಮೋದಿಸಿ ಕೊಡುವುದು.
7. ಶೌಚಾಲಯಗಳ ನಿರ್ಮಾಣಗಳ ಸ್ಥಳಗಳಲ್ಲಿ ನೀರಿನ ಸರಬರಾಜಿಗಾಗಿ ಬೋರ್‌ವೆಲ್‌ಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರತಕ್ಕದ್ದು.
8. ಶೌಚಾಲಯಗಳನ್ನು ನಿರ್ಮಿಸುವ ಸ್ಥಳಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ಗುರುತಿಸಿಕೊಂಡು ಇವರ ಉಸ್ತುವಾರಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು.
9. ದಿನಾಂಕ:09.11.2009ರ ಟೆಂಡರ್ ಪ್ರಕಟಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
10. ಅನುಮತಿ ಅವಧಿ ಮುಗಿದ ನಂತರ ನಿರ್ಮಿಸಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.

ಕಡತದ ಕಂಡಿಕೆ 67 ರಲ್ಲಿ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯದಂತೆ ಕೆ.ಎಂ.ಸಿ.ಕಾಯ್ದೆ 1976ರ ಕಲಂ 58(4) ಮತ್ತು 59(5)(23) ರ ಅನ್ವಯ 5 ವರ್ಷಗಳ ಅವಧಿಗೆ ಅನುಮತಿ ನೀಡುವ ಕುರಿತು ಪಾಲಿಕೆ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-02-2014 ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:24-02-2014ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:24-02-2014ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 11 (229)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 27 ಎಂಎನ್‌ಜಿ 2014, ದಿನಾಂಕ:10-01-2014 ರಲ್ಲಿ ಸೂಚಿಸಿ ಕೋರಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯು ದಿ ಕರ್ನಾಟಕ ಫುಟ್‌ಬಾಲ್ ಅಸೋಸಿಯೇಷನ್ ರವರಿಗೆ 56561.40 ಅಡಿ ಪ್ರದೇಶವನ್ನು 99 ವರ್ಷಗಳ ಅವಧಿಗೆ ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ದಿ:10-11-1975 ರಿಂದ ಪ್ರತಿ ಸಾಲಿಗೆ ರೂ.1000/-ಗಳ ಬಾಡಿಗೆ ಆಧಾರದ ಮೇಲೆ For the purpose of construction of the football stadium and not for any other purpose ಷರತ್ತಿನ ಮೇಲೆ ಗುತ್ತಿಗೆ ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಯುಡಿ 25 ಸಿಇಸಿ 87, ದಿನಾಂಕ:28-03-1988 ರಲ್ಲಿ ಮೇಲ್ಕಂಡ ವಿಸ್ತೀರ್ಣದ ಪೈಕಿ 6007 ಚ.ಮೀ ವಿಸ್ತೀರ್ಣವನ್ನು ಉತ್ತರ-ಪೂರ್ವದ ಕಡೆ 3650 ಮೀ, ದಕ್ಷಿಣ-ಪಶ್ಚಿಮದ ಕಡೆ 2357 ಮೀಟರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲು ಮೆ॥ ರೆಹಜಾ ಡೆವಲಪ್‌ಮೆಂಟ್ ಕಾರ್ಪೋರೇಷನ್ ರವರಿಗೆ ಉಪ ಗುತ್ತಿಗೆ ನೀಡಲು ಸರ್ಕಾರ ಅನುಮತಿ ನೀಡಲಾಗಿರುತ್ತದೆ. ಉಳಿಕೆ 50,554.40 ಚ.ಮೀ ಗಳನ್ನು ಫುಟ್‌ಬಾಲ್ ಕ್ರೀಡಾಂಗಣಕ್ಕೆ ಉಪಯೋಗಿಸಿಕೊಳ್ಳಲು ತಿಳಿಸಿರುತ್ತಾರೆ. ಈ ಕ್ರೀಡಾಂಗಣದ ಸುತ್ತ ರಸ್ತೆ ಕೂಡ ಅಗಲೀಕರಣ ಆಗಿರುತ್ತದೆ.

ದಿ ಕರ್ನಾಟಕ ಫುಟ್‌ಬಾಲ್ ಅಸೋಸಿಯೇಷನ್ ರವರು ಭಾಗಶ: ಸ್ವತ್ತುಗಳನ್ನು ಬಾಡಿಗೆ ನೀಡಿ ಗುತ್ತಿಗೆ ನಿಯಮಗಳನ್ನು ಉಲ್ಲಂಘಿಸಿರುವ ಕಾರಣ ಅವರಿಗೆ ಕೆ.ಪಿ.ಪಿ.ಇ.ಎ. ಕಾಯ್ದೆ 1976 ರಡಿ ದಿ:24-05-2011, 28-06-2011 ರಂದು ನೋಟೀಸ್ ನೀಡಲಾಗಿದೆ. ಈ ಬಗ್ಗೆ ಗುತ್ತಿಗೆದಾರರು ಫುಟ್‌ಬಾಲ್ ಕ್ರೀಡೆಯ ಅಭಿವೃದ್ಧಿಯ ಸಲುವಾಗಿ ಕೆಲವು ಸ್ವತ್ತುಗಳನ್ನು ಬಾಡಿಗೆ ನೀಡಿರುವುದಾಗಿ ತಿಳಿಸಿ ಕೆ.ಪಿ.ಪಿ.ಇ.ಎ ಕಾಯ್ದೆ ಜಾರಿ ಮಾಡಿರುವ ನೋಟೀಸ್‌ನ್ನು ಕೈಬಿಡಲು ಕೋರಿರುತ್ತಾರೆ.

ರಾಜ್ಯ ಉಚ್ಚ ನ್ಯಾಯಾಲಯದ WP.No:698/2008ರಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ. That the Secretary, Department of Youth services and sports. Shall treat the matter with the urgency that it requires, and finalize the parameters submitted by the different sports associations / Bodies /Organizations, within a period of three months from the date of receipt of the same. ಎಂದಿರುತ್ತದೆ.

ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿರುವ ಸಂಸ್ಥೆಗಳು ಕ್ರೀಡೇತರ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಸಂಸ್ಥೆ ಅಥವಾ ಪ್ರಾಧಿಕಾರಗಳ ಬೈಲಾಗಳಲ್ಲಿ ತಿದ್ದುಪಡಿ ಮಾಡಿ ಸಲ್ಲಿಸಲು ಕಾರ್ಯದರ್ಶಿ, ಕರ್ನಾಟಕ ಯೋಜನೆ ಸೇವೆ ಮತ್ತು ಕ್ರೀಡಾ ಇಲಾಖೆ ರವರಿಗೆ ದಿ:20-09-2011 ರಲ್ಲಿ ಪತ್ರ ಬರೆಯಲಾಗಿದ್ದು, ಸದರಿಯವರಿಂದ ಮಾರ್ಗಸೂಚಿ ತಿದ್ದುಪಡಿಯ ಬಗ್ಗೆ ಈವರೆಗೂ ಮಾಹಿತಿ ಬಂದಿರುವುದಿಲ್ಲ.

ಕರ್ನಾಟಕ ಫುಟ್‌ಬಾಲ್ ಅಸೋಸಿಯೇಷನ್ ಸಂಸ್ಥೆಗೆ ನೀಡಲಾಗಿರುವ ಗುತ್ತಿಗೆಯ ಷರತ್ತು ಉಲ್ಲಂಘನೆಯಾಗಿರುವ ನಿಮಿತ್ತ ದಿ:24-10-2002 ರಲ್ಲಿ ಗುತ್ತಿಗೆ ರದ್ದುಪಡಿಸುವ ಬಗ್ಗೆ ತೀರ್ಮಾನಿಸಲಾಗಿರುತ್ತದೆ. ನಂತರ ದಿ:29-10-2002 ರಲ್ಲಿ ಗುತ್ತಿಗೆಯನ್ನು ಮುಂದುವರೆಸುವ ಬಗ್ಗೆ ಮಾರ್ಪಡಿಸಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ:ನಅಇ 27 ಎಂಎನ್‌ಜಿ 2014, ದಿ:10-01-2014ರ ಪತ್ರದಲ್ಲಿ ಕರ್ನಾಟಕ ಫುಟ್‌ಬಾಲ್ ಅಸೋಸಿಯೇಷನ್ ಸಂಸ್ಥೆಯು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ 17 ವರ್ಷದ

.............................2

ವಯೋಮಾನದೊಳಗಿನವರ ವಿಶ್ವಕಪ್ ಪುಟ್ಬಾಲ್-2017ರ ಪಂದ್ಯಾವಳಿಗಾಗಿ ಕ್ರೀಡಾಂಗಣವನ್ನು ಪುನರ್ ನಿರ್ಮಿಸಲು ಕ್ಲಬ್ ಹೌಸ್ ನಿರ್ಮಾಣ ಮಾರಾಟ ಮಳಿಗೆಗಳ ನಿರ್ಮಾಣ ಸೇರಿದಂತೆ ಹೊಸ ಯೋಜನೆಯನ್ನು ಕೈಗೊಳ್ಳುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಹೊಸ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ ವರದಿಯನ್ನು ಕೋರಿರುತ್ತಾರೆ. ಈ ಬಗ್ಗೆ ಈ ಕಛೇರಿಯಿಂದ ಎ3(2)ಪಿಆರ್/242/13-14 ದಿನಾಂಕ:24-01-2014 ರಂದು ಅಪರ ಆಯುಕ್ತರು (ಪೂರ್ವ) ರವರಿಗೆ ತುರ್ತು ವರದಿಯನ್ನು ಕೋರಲಾಗಿದ್ದು, ಸದರಿಯವರಿಂದ ಈವರೆವಿಗೂ ವರದಿ ಬಂದಿರುವುದಿಲ್ಲ.

ಪ್ರಸ್ತಾವಿತ ಸ್ವತ್ತನ್ನು ದಿ:13-02-2014 ರಂದು ಸ್ಥಳ ಪರಿಶೀಲಿಸಲಾಗಿದ್ದು, ಕ್ರೀಡಾಂಗಣದ ಒಂದು ಭಾಗದಲ್ಲಿ ಒತ್ತುವರಿ ಮಾಡಿಕೊಂಡಿರುವ ಧೋಬಿಘಾಟ್ ರವರನ್ನು ನೀಲಸಂದ್ರದಲ್ಲಿ ನಿರ್ಮಿಸುತ್ತಿರುವ ವಸತಿ ಗೃಹಕ್ಕೆ ದೋಬಿಘಾಟ್ ನಿರ್ಮಿಸಲಾಗುತ್ತಿದ್ದು ಅಲ್ಲಿಗೆ ಸ್ಥಳಾಂತರಿಸುವುದಾಗಿ ಮಾನ್ಯ ಶಾಸಕರು ಸ್ಥಳದಲ್ಲಿ ತಿಳಿಸಿರುತ್ತಾರೆ.

ಪಾಲಿಕೆಯ ವತಿಯಿಂದ 1975ನೇ ಇಸವಿಯಲ್ಲಿ ಘುಟ್‌ಬಾಲ್ ಅಸೋಸಿಯೇಷನ್ ರವರಲ್ಲಿ For the purpose of construction of the football stadium and not for any other purpose ಷರತ್ತಿನ ಮೇಲೆ ಗುತ್ತಿಗೆ ನೀಡಲಾಗಿರುತ್ತದೆ. ಹಾಲಿ ಘುಟ್‌ಬಾಲ್ ಅಸೋಸಿಯೇಷನ್ ರವರಿಂದ ಘುಟ್‌ಬಾಲ್ ಸ್ಟೇಡಿಯಂ, ಕ್ಲಬ್ ಹೌಸ್ ನಿರ್ಮಾಣ / ಮಾರಾಟ ಮಳಿಗೆ ನಿರ್ಮಾಣಕ್ಕಾಗಿ ಘನ ಸರ್ಕಾರದಲ್ಲಿ ಕೋರಿರುವುದರಿಂದ ಹಾಗೂ ಉದ್ದೇಶ ಬದಲಾವಣೆಯಾಗುತ್ತಿರುವುದರಿಂದ ನೇರವಾಗಿ ಪಾಲಿಕೆಯ ಸಭೆಯಲ್ಲಿ ಮಂಡಿಸಬೇಕಾಗಿದೆ.

ಮೇಲ್ಕಂಡ ವಾಸ್ತವಾಂಶವನ್ನು ಅವಗಾಹನೆಗೆ ಸಲ್ಲಿಸುತ್ತಾ, ಸರ್ಕಾರದ ಪತ್ರದಲ್ಲಿ (ಅ.ಸ ಪತ್ರ ನಅಇ 27 ಎಂಎನ್‌ಜಿ 2014, ದಿ:10-01-2014) ಕೂಡಲೇ ಕೋರಿರುವ ಅಂಶಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಸೂಚಿಸಿರುವ ಮೇರೆಗೆ ಪ್ರಶ್ನಿತ ವಿಷಯವು ಈ ಹಿಂದೆ ಗುತ್ತಿಗೆ ನೀಡಿರುವ ಪ್ರಕರಣವಾಗಿದ್ದು, ಈಗ ಉದ್ದೇಶ ಹಾಗೂ ಕಟ್ಟಡದ ನಕ್ಷೆ ಬದಲಾವಣೆಯಾಗುತ್ತಿರುವುದರಿಂದ (ಕ್ಲಬ್ ಹೌಸ್ ನಿರ್ಮಾಣ / ಮಾರಾಟ ಮಳಿಗೆ ನಿರ್ಮಾಣ, ಹೊಸ ಸ್ಟೇಡಿಯಂ ನಿರ್ಮಾಣ ಸೇರಿದಂತೆ ಹೊಸ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ) ಈ ವಿಷಯವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರದ ಅನುಮೋದನೆ ಕೋರಿ ನೇರವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22-02-2014ರ ಟಿಪ್ಪಣಿ.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:22-02-2014ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:22-02-2014ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 230 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮೈಸೂರು ರಸ್ತೆಯ ಸಿರ್ಸಿ ವೃತ್ತದಿಂದ ಕಾರ್ಡ್ ರಸ್ತೆಯ ಜಂಕ್ಷನ್‌ವರೆಗೆ (ಬಿ.ಹೆಚ್.ಇ.ಎಲ್ ಜಂಕ್ಷನ್) ಸುಮಾರು 3.1 ಕಿ.ಮೀ ಮೇಲುರಸ್ತೆಯನ್ನು (ಲಿಂಕ್ ರಸ್ತೆ) 4 ಪಥಗಳ ದ್ವಿ-ಮುಖ ಸಂಚಾರದ ಎಲಿವೇಟೆಡ್ ರಸ್ತೆ ನಿರ್ಮಿಸಲು ಪಾಲಿಕೆಗೆ ಸುಮಾರು ಅಂದಾಜು ರೂ.300.00 ಕೋಟಿ ಹಣ ಬೇಕಾಗಿರುತ್ತದೆ. ಕರ್ನಾಟಕ ಸರ್ಕಾರ ಮತ್ತು ಮೆ॥ ನೈಸ್ ಸಂಸ್ಥೆ ನಡುವೆ ಇರುವ ಒಪ್ಪಂದದ ಪ್ರಕಾರ, ಸದರಿ ಲಿಂಕ್ ರಸ್ತೆಯನ್ನು ಮೆ॥ ನೈಸ್ ಸಂಸ್ಥೆಯವರು ಪೂರ್ಣವಾಗಿ ಅವರ ವೆಚ್ಚದಲ್ಲಿಯೇ ನಿರ್ಮಿಸಬೇಕಾಗಿದೆ. ಈ ಬಗ್ಗೆ ಮೆ॥ ನೈಸ್ ಸಂಸ್ಥೆಯವರು ಪಾಲಿಕೆಗೆ ಪ್ರಸ್ತಾವನೆಯನ್ನು ಹಾಗೂ ಕಾನ್ಸೆಪ್ಟ್ ಪ್ಲಾನ್ ಅನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಸಹಮತಿಯನ್ನು ನೀಡಲು ಕೋರಿರುತ್ತಾರೆ.

ಅದರಂತೆ, ಸದರಿ ಯೋಜನೆಗೆ ಅಗತ್ಯ ಷರತ್ತುಗಳನ್ನು ವಿಧಿಸಿ, ಕಾನ್ಸೆಪ್ಟ್ ಪ್ಲಾನ್‌ಗೆ ಅನುಮತಿ / ಸಹಮತಿಯನ್ನು ನೀಡಲು ಆಯುಕ್ತರವರು ಸ್ಥಾಯಿ ಸಮಿತಿ ಹಾಗೂ ಸಭೆಯು ಮುಂದೆ ಮಂಡಿಸಲು ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಮೈಸೂರು ರಸ್ತೆಯ ಸಿರ್ಸಿ ವೃತ್ತದಿಂದ ಕಾರ್ಡ್ ರಸ್ತೆಯ ಜಂಕ್ಷನ್‌ವರೆಗೆ (ಬಿ.ಹೆಚ್.ಇ.ಎಲ್ ಜಂಕ್ಷನ್) ಸುಮಾರು 3.1 ಕಿ.ಮೀ ಮೇಲುರಸ್ತೆಯನ್ನು (ಲಿಂಕ್ ರಸ್ತೆ) 4 ಪಥಗಳ ದ್ವಿ-ಮುಖ ಸಂಚಾರದ ಎಲಿವೇಟೆಡ್ ರಸ್ತೆ ನಿರ್ಮಿಸಲು ಪಾಲಿಕೆಗೆ ಸುಮಾರು ಅಂದಾಜು ರೂ.300.00 ಕೋಟಿ ಹಣ ಬೇಕಾಗಿರುತ್ತದೆ. ಕರ್ನಾಟಕ ಸರ್ಕಾರ ಮತ್ತು ಮೆ॥ ನೈಸ್ ಸಂಸ್ಥೆ ನಡುವೆ ಇರುವ ಒಪ್ಪಂದದ ಪ್ರಕಾರ, ಸದರಿ ಲಿಂಕ್ ರಸ್ತೆಯನ್ನು ಮೆ॥ ನೈಸ್ ಸಂಸ್ಥೆಯವರು ಪೂರ್ಣವಾಗಿ ಅವರ ವೆಚ್ಚದಲ್ಲಿಯೇ ನಿರ್ಮಿಸಬೇಕಾಗಿದೆ. ಈ ಬಗ್ಗೆ ಮೆ॥ ನೈಸ್ ಸಂಸ್ಥೆಯವರು ಪಾಲಿಕೆಗೆ ಪ್ರಸ್ತಾವನೆಯನ್ನು ಹಾಗೂ ಕಾನ್ಸೆಪ್ಟ್ ಪ್ಲಾನ್ ಅನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಸಹಮತಿಯನ್ನು ನೀಡಲು ಕೋರಿರುತ್ತಾರೆ.

ಅದರಂತೆ, ಸದರಿ ಯೋಜನೆಗೆ ಅಗತ್ಯ ಷರತ್ತುಗಳನ್ನು ವಿಧಿಸಿ, ಕಾನ್ಸೆಪ್ಟ್ ಪ್ಲಾನ್‌ಗೆ ಅನುಮತಿ / ಸಹಮತಿಯನ್ನು ನೀಡಲು ಆಯುಕ್ತರವರು ಸ್ಥಾಯಿ ಸಮಿತಿ ಹಾಗೂ ಸಭೆಯು ಮುಂದೆ ಮಂಡಿಸಲು ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 231 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ಯಂತ್ರ ತರಬೇತಿ ನೀಡುವ ಶಿಕ್ಷಕರು, ಕಾಯರ್ ತರಬೇತಿ ನೀಡುವ ಶಿಕ್ಷಕರು, ಮೇಲ್ವಿಚಾರಕರು ಹಾಗೂ ಹೊಲಿಗೆ ಯಂತ್ರ ದುರಸ್ಥಿಗಾರರಿಗೆ ಹಾಲಿ ನೀಡುತ್ತಿರುವ ಗೌರವಧನದಲ್ಲಿ ಜೀವನ ಸಾಗಿಸುವುದು ಕಷ್ಟಕರವಾಗಿರುವುದರಿಂದ ಹಾಲಿ ನೀಡುತ್ತಿರುವ ಗೌರವಧನದೊಂದಿಗೆ ಮಾಸಿಕ ರೂ.2000/- ಗಳನ್ನು ಹೆಚ್ಚಿಸಿ, ಗೌರವಧನ ಪಾವತಿಸಲು ಆಯುಕ್ತರವರು ಅಗತ್ಯ ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ಯಂತ್ರ ತರಬೇತಿ ನೀಡುವ ಶಿಕ್ಷಕರು, ಕಾಯರ್ ತರಬೇತಿ ನೀಡುವ ಶಿಕ್ಷಕರು, ಮೇಲ್ವಿಚಾರಕರು ಹಾಗೂ ಹೊಲಿಗೆ ಯಂತ್ರ ದುರಸ್ಥಿಗಾರರಿಗೆ ಹಾಲಿ ನೀಡುತ್ತಿರುವ ಗೌರವಧನದಲ್ಲಿ ಜೀವನ ಸಾಗಿಸುವುದು ಕಷ್ಟಕರವಾಗಿರುವುದರಿಂದ ಹಾಲಿ ನೀಡುತ್ತಿರುವ ಗೌರವಧನದೊಂದಿಗೆ ಮಾಸಿಕ ರೂ.2000/- ಗಳನ್ನು ಹೆಚ್ಚಿಸಿ, ಗೌರವಧನ ಪಾವತಿಸಲು ಆಯುಕ್ತರವರು ಅಗತ್ಯ ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 232 / 2013-14**

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೆಂಗಳೂರು ನಗರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಆದರ್ಶ ಪ್ರಾಯರುಗಳಾದ ಹಿರಿಯ ಸಾಧಕರಾದ ದಿವಂಗತ ವಿ.ಎಸ್.ಕೃಷ್ಣಯ್ಯರ್, ದಿವಂಗತ ನಾಡೋಜ ಡಾ॥ ಜಿ.ನಾರಾಯಣ ಮತ್ತು ದಿವಂಗತ ಎಂ.ಚಂದ್ರಶೇಖರ್ ರವರುಗಳ ಕಂಚಿನ ಪ್ರತಿಮೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಪಾಲಿಕೆ ವತಿಯಿಂದ ಸೂಕ್ತ ಅನುದಾನ ಒದಗಿಸಿ ನ್ಯಾಷನಲ್ ಕಾಲೇಜು ಮೇಲೆ ಸೇತುವೆ ಹತ್ತಿರ (ಈಗಾಗಲೇ ಬಿ.ಎಂ.ಶ್ರೀ. ರವರ ಪ್ರತಿಮೆ ಸ್ಥಾಪಿಸಿರುವ ಅಕ್ಕ-ಪಕ್ಕದಲ್ಲಿ) ಪ್ರತಿಷ್ಠಾಪಿಸುವ ಬಗ್ಗೆ ಆಯುಕ್ತರು ಅಗತ್ಯ ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೆಂಗಳೂರು ನಗರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಆದರ್ಶ ಪ್ರಾಯರುಗಳಾದ ಹಿರಿಯ ಸಾಧಕರಾದ ದಿವಂಗತ ವಿ.ಎಸ್.ಕೃಷ್ಣಯ್ಯರ್, ದಿವಂಗತ ನಾಡೋಜ ಡಾ॥ ಜಿ.ನಾರಾಯಣ ಮತ್ತು ದಿವಂಗತ ಎಂ.ಚಂದ್ರಶೇಖರ್ ರವರುಗಳ ಕಂಚಿನ ಪ್ರತಿಮೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಪಾಲಿಕೆ ವತಿಯಿಂದ ಸೂಕ್ತ ಅನುದಾನ ಒದಗಿಸಿ ನ್ಯಾಷನಲ್ ಕಾಲೇಜು ಮೇಲೆ ಸೇತುವೆ ಹತ್ತಿರ (ಈಗಾಗಲೇ ಬಿ.ಎಂ.ಶ್ರೀ. ರವರ ಪ್ರತಿಮೆ ಸ್ಥಾಪಿಸಿರುವ ಅಕ್ಕ-ಪಕ್ಕದಲ್ಲಿ) ಪ್ರತಿಷ್ಠಾಪಿಸುವ ಬಗ್ಗೆ ಆಯುಕ್ತರು ಅಗತ್ಯ ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 233 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಾದರಾಯನಪುರ ಮುಖ್ಯರಸ್ತೆಯನ್ನು ವಿಜಯನಗರ ಪೈಪ್‌ಲೈನ್ ರಸ್ತೆಯಿಂದ ಬಿನ್ನಿಮಿಲ್ ಟ್ಯಾಂಕ್‌ಬಂಡ್ ರಸ್ತೆಯವರೆಗೆ 24.00 ಮೀ.ಗಳಿಗೆ ಅಗಲೀಕರಣಕ್ಕೆ ವಿಸ್ತರಿಸಲು ಯೋಜಿಸಿದ್ದು, ಸದರಿ ರಸ್ತೆಯ ಇಕ್ಕೆಲಗಳಲ್ಲಿ ಖಾಸಗಿ ಸ್ವತ್ತುಗಳಿದ್ದು, ಸದರಿ ಸ್ವತ್ತುಗಳಲ್ಲಿ ಬಹಳಷ್ಟು ನಿವೇಶನಗಳಲ್ಲಿ ಕಟ್ಟಡಗಳು ನಿರ್ಮಾಣಗಳಾಗಿರುತ್ತದೆ. ಸದರಿ ರಸ್ತೆಯ ಅಗಲೀಕರಣಕ್ಕೆ ಬೇಕಾಗಿರುವ ಸ್ವತ್ತುಗಳನ್ನು ಟಿ.ಡಿ.ಆರ್ ಅಡಿಯಲ್ಲಿ ಪಡೆಯಲು ಉದ್ದೇಶಿಸಿದ್ದು, ಆದರೆ ಸದರಿ ಸ್ವತ್ತಿನ ಮಾಲೀಕರರು ಟಿ.ಡಿ.ಆರ್ ಅಡಿಯಲ್ಲಿ ರಸ್ತೆ ಅಗಲೀಕರಣಕ್ಕೆ ಬೇಕಾಗಿರುವ ಸ್ವತ್ತುಗಳನ್ನು ಬಿಟ್ಟುಕೊಡಲು ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಸದರಿ ರಸ್ತೆ ಅಗಲೀಕರಣಕ್ಕೆ ಬೇಕಾಗಿರುವ ಖಾಸಗಿ ಸ್ವತ್ತುಗಳನ್ನು ಟಿ.ಡಿ.ಆರ್ ಬೈಬ್ಯಾಕ್ (Buy back) ಅಡಿಯಲ್ಲಿ ಪರಿಹಾರ ನೀಡುವುದನ್ನು ಪರಿಗಣಿಸಲು ಹಾಗೂ ಸದರಿ ಸ್ವತ್ತುಗಳನ್ನು ರಸ್ತೆ ಅಗಲೀಕರಣಕ್ಕೆ ಸ್ವಾಧೀನಪಡಿಸಿಕೊಳ್ಳಲು ಆಯುಕ್ತರವರು ಅಗತ್ಯ ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಾದರಾಯನಪುರ ಮುಖ್ಯರಸ್ತೆಯನ್ನು ವಿಜಯನಗರ ಪೈಪ್‌ಲೈನ್ ರಸ್ತೆಯಿಂದ ಬಿನ್ನಿಮಿಲ್ ಟ್ಯಾಂಕ್‌ಬಂಡ್ ರಸ್ತೆಯವರೆಗೆ 24.00 ಮೀ.ಗಳಿಗೆ ಅಗಲೀಕರಣಕ್ಕೆ ವಿಸ್ತರಿಸಲು ಯೋಜಿಸಿದ್ದು, ಸದರಿ ರಸ್ತೆಯ ಇಕ್ಕೆಲಗಳಲ್ಲಿ ಖಾಸಗಿ ಸ್ವತ್ತುಗಳಿದ್ದು, ಸದರಿ ಸ್ವತ್ತುಗಳಲ್ಲಿ ಬಹಳಷ್ಟು ನಿವೇಶನಗಳಲ್ಲಿ ಕಟ್ಟಡಗಳು ನಿರ್ಮಾಣಗಳಾಗಿರುತ್ತದೆ. ಸದರಿ ರಸ್ತೆಯ ಅಗಲೀಕರಣಕ್ಕೆ ಬೇಕಾಗಿರುವ ಸ್ವತ್ತುಗಳನ್ನು ಟಿ.ಡಿ.ಆರ್ ಅಡಿಯಲ್ಲಿ ಪಡೆಯಲು ಉದ್ದೇಶಿಸಿದ್ದು, ಆದರೆ ಸದರಿ ಸ್ವತ್ತಿನ ಮಾಲೀಕರರು ಟಿ.ಡಿ.ಆರ್ ಅಡಿಯಲ್ಲಿ ರಸ್ತೆ ಅಗಲೀಕರಣಕ್ಕೆ ಬೇಕಾಗಿರುವ ಸ್ವತ್ತುಗಳನ್ನು ಬಿಟ್ಟುಕೊಡಲು ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಸದರಿ ರಸ್ತೆ ಅಗಲೀಕರಣಕ್ಕೆ ಬೇಕಾಗಿರುವ ಖಾಸಗಿ ಸ್ವತ್ತುಗಳನ್ನು ಟಿ.ಡಿ.ಆರ್ ಬೈಬ್ಯಾಕ್ (Buy back) ಅಡಿಯಲ್ಲಿ ಪರಿಹಾರ ನೀಡುವುದನ್ನು ಪರಿಗಣಿಸಲು ಹಾಗೂ ಸದರಿ ಸ್ವತ್ತುಗಳನ್ನು ರಸ್ತೆ ಅಗಲೀಕರಣಕ್ಕೆ ಸ್ವಾಧೀನಪಡಿಸಿಕೊಳ್ಳಲು ಆಯುಕ್ತರವರು ಅಗತ್ಯ ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 234 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬನ್ನೇರುಘಟ್ಟ ರಸ್ತೆಯನ್ನು (ಜೇಡಿಮರ ಜಂಕ್ಷನ್ ಇಂದ ಕೋಳಿ ಫಾರಂ ಗೇಟ್/ಬಿಬಿಎಂಪಿ ಗಡಿಯವರೆಗೆ) ಪರಿಷ್ಕೃತ ಮಹಾನಕ್ಷೆ – 2015 ರಂತೆ ಅಗಲೀಕರಣಗೊಳಿಸುವ ಪ್ರಸ್ತಾವನೆಯನ್ನು 45.00 ಮೀ. (150 ಅಡಿಗಳು) ಗಳಿಗೆ ಬದಲಾಗಿ 36.58 ಮೀ. (120 ಅಡಿಗಳು) ಗೆ ಮಿತಗೊಳಿಸಿ ಅಗಲೀಕರಣ ಮಾಡಿದಲ್ಲಿ, ಅಗಲೀಕರಣಕ್ಕೆ ಅವಶ್ಯವಾದ ಜಾಗವನ್ನು TDR ಮುಖೇನ ನೀಡಲು ಭೂ-ಮಾಲೀಕರು ಸಮ್ಮತಿ ಸೂಚಿಸಿರುತ್ತಾರೆ.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಬನ್ನೇರುಘಟ್ಟ ಮುಖ್ಯ ರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ-2015 ರಂತೆ 45.00 ಮೀ (150 ಅಡಿಗಳು) ಗಳಿಗೆ ಅಗಲೀಕರಣಗೊಳಿಸುವ ಬದಲಾಗಿ 36.58 ಮೀ. (120 ಅಡಿಗಳು) ಗಳಿಗೆ ಮಿತಗೊಳಿಸುವ ಪ್ರಸ್ತಾವನೆಯನ್ನು ಘನ ಸರ್ಕಾರದ ಗಮನಕ್ಕೆ ತಂದು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಬನ್ನೇರುಘಟ್ಟ ರಸ್ತೆಯನ್ನು (ಜೇಡಿಮರ ಜಂಕ್ಷನ್ ಇಂದ ಕೋಳಿ ಫಾರಂ ಗೇಟ್ / ಬಿಬಿಎಂಪಿ ಗಡಿಯವರೆಗೆ, ಒಟ್ಟು 7.44 ಕಿ.ಮೀ. ಉದ್ದ) ಪ್ರಸ್ತಾಪಿತ 45.00 ಮೀ. (150 ಅಡಿಗಳು) ಗಳಿಗೆ ಬದಲಾಗಿ 36.58 ಮೀ. (120 ಅಡಿಗಳು) ಗಳಿಗೆ ಅಗಲೀಕರಣಗೊಳಿಸಲು ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಸದರಿ ರಸ್ತೆಯನ್ನು 120 ಅಡಿಗಳಿಗೆ ಅಗಲೀಕರಣಗೊಳಿಸಲು ಅವಶ್ಯವಾದ ಜಾಗವನ್ನು TDR ಮುಖೇನ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಆಯುಕ್ತರವರ ಅಗತ್ಯ ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬನ್ನೇರುಘಟ್ಟ ರಸ್ತೆಯನ್ನು (ಜೇಡಿಮರ ಜಂಕ್ಷನ್ ಇಂದ ಕೋಳಿ ಫಾರಂ ಗೇಟ್/ಬಿಬಿಎಂಪಿ ಗಡಿಯವರೆಗೆ) ಪರಿಷ್ಕೃತ ಮಹಾನಕ್ಷೆ – 2015 ರಂತೆ ಅಗಲೀಕರಣಗೊಳಿಸುವ ಪ್ರಸ್ತಾವನೆಯನ್ನು 45.00 ಮೀ. (150 ಅಡಿಗಳು) ಗಳಿಗೆ ಬದಲಾಗಿ 36.58 ಮೀ. (120 ಅಡಿಗಳು) ಗೆ ಮಿತಗೊಳಿಸಿ ಅಗಲೀಕರಣ ಮಾಡಿದಲ್ಲಿ, ಅಗಲೀಕರಣಕ್ಕೆ ಅವಶ್ಯವಾದ ಜಾಗವನ್ನು TDR ಮುಖೇನ ನೀಡಲು ಭೂ-ಮಾಲೀಕರು ಸಮ್ಮತಿ ಸೂಚಿಸಿರುತ್ತಾರೆ.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಬನ್ನೇರುಘಟ್ಟ ಮುಖ್ಯ ರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ-2015 ರಂತೆ 45.00 ಮೀ (150 ಅಡಿಗಳು) ಗಳಿಗೆ ಅಗಲೀಕರಣಗೊಳಿಸುವ ಬದಲಾಗಿ 36.58 ಮೀ. (120 ಅಡಿಗಳು) ಗಳಿಗೆ

ಮಿತಗೊಳಿಸುವ ಪ್ರಸ್ತಾವನೆಯನ್ನು ಘನ ಸರ್ಕಾರದ ಗಮನಕ್ಕೆ ತಂದು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಬನ್ನೇರುಘಟ್ಟ ರಸ್ತೆಯನ್ನು (ಜೇಡಿಮರ ಜಂಕ್ಷನ್ ಇಂದ ಕೋಳಿ ಫಾರಂ ಗೇಟ್ / ಬಿಬಿಎಂಪಿ ಗಡಿಯವರೆಗೆ, ಒಟ್ಟು 7.44 ಕಿ.ಮೀ. ಉದ್ದ) ಪ್ರಸ್ತಾಪಿತ 45.00 ಮೀ. (150 ಅಡಿಗಳು) ಗಳಿಗೆ ಬದಲಾಗಿ 36.58 ಮೀ. (120 ಅಡಿಗಳು) ಗಳಿಗೆ ಅಗಲೀಕರಣಗೊಳಿಸಲು ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಸದರಿ ರಸ್ತೆಯನ್ನು 120 ಅಡಿಗಳಿಗೆ ಅಗಲೀಕರಣಗೊಳಿಸಲು ಅವಶ್ಯವಾದ ಜಾಗವನ್ನು TDR ಮುಖೇನ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಆಯುಕ್ತರವರ ಅಗತ್ಯ ಕ್ರಮವಹಿಸುವುದೆಂದು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 235 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-84, ಹಗದೂರು ವ್ಯಾಪ್ತಿಯ ಹೊರವರ್ತುಲ ರಸ್ತೆ ಹಾಗೂ ಇ.ಸಿ.ಸಿ. ರಸ್ತೆ ಮಧ್ಯೆ ಇರುವ 20 ಅಡಿ ರಸ್ತೆಯನ್ನು 40 ಅಡಿಗಳ ರಸ್ತೆಯಾಗಿ ಅಗಲೀಕರಣಗೊಳಿಸಲು ಅವಶ್ಯವಾದ ಜಾಗವನ್ನು ಟಿ.ಡಿ.ಆರ್. ಮುಖೇನ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಆಯುಕ್ತರವರು ಅಗತ್ಯ ಕ್ರಮವಹಿಸುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೆಂಗಳೂರು "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-84, ಹಗದೂರು ವ್ಯಾಪ್ತಿಯ ಹೊರವರ್ತುಲ ರಸ್ತೆ ಹಾಗೂ ಇ.ಸಿ.ಸಿ. ರಸ್ತೆ ಮಧ್ಯೆ ಇರುವ 20 ಅಡಿ ರಸ್ತೆಯನ್ನು 40 ಅಡಿಗಳ ರಸ್ತೆಯಾಗಿ ಅಗಲೀಕರಣಗೊಳಿಸಲು ಅವಶ್ಯವಾದ ಜಾಗವನ್ನು ಟಿ.ಡಿ.ಆರ್. ಮುಖೇನ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಆಯುಕ್ತರವರು ಅಗತ್ಯ ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 236 / 2013-14

ಶ್ರೀ. ಅಶ್ವಥ ನಾರಾಯಣ ಗೌಡ. ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-168ರ ವ್ಯಾಪ್ತಿಯ ಜಯನಗರ 4ನೇ ಬ್ಲಾಕ್ 7ನೇ ಮುಖ್ಯ ರಸ್ತೆಯಲ್ಲಿರುವ ಭಾವಿ ಪಾರ್ಕ್‌ಗೆ "ಬೃಂದಾವನ ಪಾರ್ಕ್" ಎಂದು ನಾಮಕರಣ ಮಾಡಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-168ರ ವ್ಯಾಪ್ತಿಯ ಜಯನಗರ 4ನೇ ಬ್ಲಾಕ್ 7ನೇ ಮುಖ್ಯ ರಸ್ತೆಯಲ್ಲಿರುವ ಭಾವಿ ಪಾರ್ಕ್‌ಗೆ "ಬೃಂದಾವನ ಪಾರ್ಕ್" ಎಂದು ನಾಮಕರಣ ಮಾಡಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:26-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 237 / 2013-14

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದ ಕೈಗೊಳ್ಳಲಾಗುವ ಯಾವುದೇ ಸರ್ಕಾರಿ ಸಮಾರಂಭಗಳು ಅಂದರೆ ಕಾಮಗಾರಿಗಳ ಶಂಕುಸ್ಥಾಪನೆ ಉದ್ಘಾಟನೆ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಮಯದಲ್ಲಿ ಆಹ್ವಾನ ಪತ್ರಿಕೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರು, ಉಪ ಮಹಾಪೌರರು ಹಾಗೂ ಸ್ಥಳೀಯ ನಗರ ಪಾಲಿಕೆಯ ಸದಸ್ಯರುಗಳ ಹೆಸರನ್ನು ಸೇರಿಸಿಕೊಂಡು ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಸಮಾರಂಭಕ್ಕೆ ಆಹ್ವಾನಿಸುವಂತೆ ಕ್ರಮವಹಿಸಲು ಸಂಬಂಧಪಟ್ಟ ಶಿಷ್ಟಾಚಾರ ಇಲಾಖೆಯ ಅಧಿಕಾರಿಗಳು ಕ್ರಮವಹಿಸುವಂತೆ ಸರ್ಕಾರವನ್ನು ಕೋರಲು ಆಯುಕ್ತರವರು ಕ್ರಮವಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದ ಕೈಗೊಳ್ಳಲಾಗುವ ಯಾವುದೇ ಸರ್ಕಾರಿ ಸಮಾರಂಭಗಳು ಅಂದರೆ ಕಾಮಗಾರಿಗಳ ಶಂಕುಸ್ಥಾಪನೆ ಉದ್ಘಾಟನೆ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಮಯದಲ್ಲಿ ಆಹ್ವಾನ ಪತ್ರಿಕೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರು, ಉಪ ಮಹಾಪೌರರು ಹಾಗೂ ಸ್ಥಳೀಯ ನಗರ ಪಾಲಿಕೆಯ ಸದಸ್ಯರುಗಳ ಹೆಸರನ್ನು ಸೇರಿಸಿಕೊಂಡು ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಸಮಾರಂಭಕ್ಕೆ ಆಹ್ವಾನಿಸುವಂತೆ ಕ್ರಮವಹಿಸಲು ಸಂಬಂಧಪಟ್ಟ ಶಿಷ್ಟಾಚಾರ ಇಲಾಖೆಯ ಅಧಿಕಾರಿಗಳು ಕ್ರಮವಹಿಸುವಂತೆ ಸರ್ಕಾರವನ್ನು ಕೋರಲು ಆಯುಕ್ತರವರು ಕ್ರಮವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು
4/3/14

## ದಿನಾಂಕ:25-02-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 239 / 2013-14**

ಪ್ರಸ್ತಾವನೆ:-

ಶ್ರೀ. ಪದ್ಮನಾಭರೆಡ್ಡಿ, ಪಾಲಿಕೆ ಸದಸ್ಯರು, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆ ಕಲಂ 4, ಸಬ್ ಸೆಕ್ಷನ್ 4ರ ಪ್ರಕಾರ ಮತ್ತು 466 ಮತ್ತು 467 ರಲ್ಲಿ ಸುಧಾರಣಾ ಶುಲ್ಕವನ್ನು ಪಾವತಿಸಿಕೊಂಡು ಪಾಲಿಕೆ ವತಿಯಿಂದ ಖಾತೆ ಮಾಡಲು ಕಾನೂನಿನಲ್ಲಿ ಅವಕಾಶವಿದ್ದು, ಈ ಹಿನ್ನಲೆಯಲ್ಲಿ, ಬೆಂಗಳೂರು ನಗರದ ರೆವೆನ್ಯೂ ಸ್ವತ್ತುಗಳನ್ನೊಳಗೊಂಡಂತೆ ಎಲ್ಲಾ ಸ್ವತ್ತುಗಳಿಗೆ ಸುಧಾರಣಾ ಶುಲ್ಕವನ್ನು ಪಾವತಿಸಿಕೊಂಡು ಪ್ರಸ್ತಾಪಿತ ಸ್ವತ್ತುಗಳಿಗೆ ಖಾತೆ ಮಾಡುವ ಬಗ್ಗೆ ಮಾನ್ಯ ಆಯುಕ್ತರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಅಂಗೀಕಾರ ಪಡೆದು ಕ್ರಮವಹಿಸಲು ಒಪ್ಪಿಗೆ ನೀಡಲು ಪ್ರಸ್ತಾವನೆ ಮಂಡಿಸಿದರು.

ಶ್ರೀ. ಅಶ್ವಥ ನಾರಾಯಣ ಗೌಡ, ಆಡಳಿತ ಪಕ್ಷದ ನಾಯಕರು ಮೇಲ್ಕಂಡ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಸೂಚಿಸಿದರು.

ಶ್ರೀ. ಬಿ.ಆರ್.ನಂಜುಂಡಪ್ಪ ರವರು ಶ್ರೀ. ಅಶ್ವಥ ನಾರಾಯಣ ಗೌಡ ರವರ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಪ್ರಸ್ತಾಪಿತ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆ ಕಲಂ 4, ಸಬ್ ಸೆಕ್ಷನ್ 4ರ ಪ್ರಕಾರ ಮತ್ತು 466 ಮತ್ತು 467 ರಲ್ಲಿ ಸುಧಾರಣಾ ಶುಲ್ಕವನ್ನು ಪಾವತಿಸಿಕೊಂಡು ಪಾಲಿಕೆ ವತಿಯಿಂದ ಖಾತೆ ಮಾಡಲು ಕಾನೂನಿನಲ್ಲಿ ಅವಕಾಶವಿದ್ದು, ಈ ಹಿನ್ನಲೆಯಲ್ಲಿ, ಬೆಂಗಳೂರು ನಗರದ ರೆವೆನ್ಯೂ ಸ್ವತ್ತುಗಳನ್ನೊಳಗೊಂಡಂತೆ ಎಲ್ಲಾ ಸ್ವತ್ತುಗಳಿಗೆ ಸುಧಾರಣಾ ಶುಲ್ಕವನ್ನು ಪಾವತಿಸಿಕೊಂಡು ಪ್ರಸ್ತಾಪಿತ ಸ್ವತ್ತುಗಳಿಗೆ ಖಾತೆ ಮಾಡುವ ಬಗ್ಗೆ ಮಾನ್ಯ ಆಯುಕ್ತರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಅಂಗೀಕಾರ ಪಡೆದು ಕ್ರಮವಹಿಸುವಂತೆ ಸಭೆಯು ತೀರ್ಮಾನಿಸಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು